ಸಂಪುಟ: 13 Volume | ಸಂಚಿಕೆ: 360 Issue | ಪುಟಗಳು 08 Pages | ಶುಕ್ರವಾರ 27 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

**ಬೆಳಗು**

ಕಲಿಕೆವಿಷಯಬರೀತಿಳುವಳಿಕೆಯ ಮಟ್ಟದಲ್ಲಿ ಉಳಿಯದೆ ಹೆಚ್ಚು ಅರ್ಥಪೂರ್ಣ ಮಾಡಬಲ್ಲ ಮನುಷ್ಯನೊಬ್ಬ ಬೇಕು. ಆತನೇ ಕೋಚ್ ಅಥವಾ ಗುರು.

–ಪಿ. ಲಂಕೇಶ್

ಭಕ್ತಿಭಾವದ ಎರಿತಾತಾ ಜಾತ್ರಾ ಮಹೋತ್ಸವ 6
ನೀತಿ ಸಂಹಿತೆ ಉಲ್ಲಂಘನೆ, ನಗದು ಜಪ್ತಿ 7
ಚರಂಡಿಯ ನೀರು ಬೀದಿಗೆ ಹರಿತ: ಆಕ್ರೋಶ 8



ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾರತೀಯ ವಾಯು ದಳದ ಎಂ ಆರ್ ಒ ಯೋಜನೆ ಸಂಬಂಧ ಡಿಸಿಎಂ ಡಿ ಕೆ ಶಿವಕುಮಾರ್ ಅವರ ಜತೆ ಬ್ರಿಟನ್ ನ ಸಿ130ಜೆ ಏರ್ ಕ್ರಾಫ್ಟ್ ಎಂ ಆರ್ ಒ ಭಾರತೀಯ ಮುಖ್ಯಸ್ಥ ಬಟರ್ ಫಿಲ್, ಫ್ರಾನ್ಸ್ ವೆಪನ್ಸ್ ಅಂಡ್ ಸೆನ್ಸಾರ್ಸ್ ಸಿಸ್ಟಮ್ಸ್ ಮುಖ್ಯಸ್ಥ ಗುರು ದತ್ತಾತ್ರೇಯ, ಅ295&ಅ1 ಮತ್ತು ಅ130ಜೆ ಭಾರತದ ಯೋಜನಾ ಮುಖ್ಯಸ್ಥ ಹರ್ಷ್ ರೌಟೆಲ ಮತ್ತು ಅಶುತೋಷ್ ಸಿಂಗ್ ವಿಧಾನಸೌಧದಲ್ಲಿ ಗುರುವಾರ ಮಾತುಕತೆ ನಡೆಸಿದರು.

## ಸಿಎಂಗೆ ತುರ್ತು ನೋಟಿಸ್ ಜಾರಿ

**ಬೆಂಗಳೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ, ಅವರ ಕುಟುಂಬ ಸದಸ್ಯರಿಗೆ ಹೈಕೋರ್ಟ್‌ನಿಂದ ತುರ್ತು ನೋಟಿಸ್ ಜಾರಿಯಾಗಿದೆ. ಮುಡಾ ಹಗರಣ ಕುರಿತು ಲೋಕಾಯುಕ್ತ ನಡೆಸಿದ ತನಿಖೆಯ ಬಳಿಕ ಸಿಎಂ, ಅವರ ಕುಟುಂಬ ಸದಸ್ಯರಿಗೆ ಕ್ಲೀನ್ ಚಿಟ್ ನೀಡಿ ಬಿ ರಿಪೋರ್ಟ್ ಸಲ್ಲಿಸಿದ್ದರು. ಈ ವರದಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಅಂಗೀಕರಿಸಿತ್ತು. ಆದರೆ, ಈ ಆದೇಶವನ್ನು ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.



ಗಂಗಾವತಿ: ಶ್ರೀರಾಮನವಮಿ ಪ್ರಯುಕ್ತ ಆರ್ ಎಸ್ ಪಕ್ಷದ ವತಿಯಿಂದ ಇಲ್ಲಿನ ಬಸ್ ನಿಲ್ದಾಣ ಮುಂದೆ ಸಾರ್ವಜನಿಕರಿಗೆ ಸಿಹಿ ಪಾನಕ–ಮಜ್ಜಿಗೆ ವಿತರಿಸಲಾಯಿತು. ರಾಜ್ಯ ರೈತ ಘಟಕದ ಕಾರ್ಯದರ್ಶಿ ನಿರುಪಾದಿ ಕೆ ಗೋಮರ್ಸಿ, ಪಕ್ಷದ ಕೊಪ್ಪಳ ಜಿಲ್ಲಾ ಸಂಚಾಲಕ ಗಣೇಶ ಅಮೃತ್, ಮೈನುದ್ದೀನ್, ಗಂಗಾವತಿ ತಾಲೂಕು ಅಧ್ಯಕ್ಷ ಶಾಮಿದ್ ಅಲಿ, ಉಪಾಧ್ಯಕ್ಷ ಕಂಬಳಿ ನಾಗಪ್ಪ ಸೇರಿ ಅನೇಕರು ಇದ್ದರು.

## ಪತ್ನಿಯ ಬರ್ಬರ ಕೊಲೆ, ಸೆರೆ


**ಕಲಬುರಗಿ:** ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಬಳೂರಗಿ ಗ್ರಾಮದ ಬಳಿ ಹಾಡಹಗಲೇ ಕತ್ತು ಕೊಯ್ದು ಪತ್ನಿಯನ್ನು ಬರ್ಬರವಾಗಿ ಹತ್ಯೆ ಮಾಡಿದ್ದ ಪತಿಯನ್ನು ಬಂಧಿಸಲಾಗಿದೆ. ಕೊಲೆಯಾದ ಮಹಿಳೆ ಮಹಾರಾಷ್ಟ್ರ ಮೂಲದ ಶೈಲಾ(28). ಆರೋಪಿ ಅಕ್ಷಯ್ ತನ್ನ ಎರ್ಟಿಗಾ ಕಾರಲ್ಲಿ ಪತ್ನಿಯನ್ನ ಕರೆದುಕೊಂಡು ಬಂದು, ಬಳೂರಗಿ ಗ್ರಾಮದ ಬಳಿ ನಿಲ್ಲಿಸಿ, ಪತ್ನಿಯನ್ನು ಕಾರಿನಿಂದ ಬಲವಂತವಾಗಿ ಕೆಳಗಿಳಿಸಿ, ನಡುರಸ್ತೆಯಲ್ಲೇ ಕತ್ತು ಕೊಯ್ದು ಬರ್ಬರವಾಗಿ ಹತ್ಯೆ ಮಾಡಿದ್ದಾನೆ. ಆರೋಪಿ ಅಕ್ಷಯ್ ನನ್ನು ಬಂಧಿಸಿದ್ದಾರೆ. ಪತ್ನಿಯ ಅನೈತಿಕ ಸಂಬಂಧವೇ ಕೊಲೆಗೆ ಕಾರಣ ಎನ್ನಲಾಗುತ್ತಿದೆ.

## ಭಾರತಕ್ಕೆ ಹಾರ್ಮುಜ್ ಜಲಸಂಧಿ ಮುಕ್ತ..!

• ಮಲ್ಲಮ್ಮ ನುಡಿ ವಾರ್ತೆ ದುಬೈ

ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಸಂಘರ್ಷದ ನಡುವೆಯೂ ಭಾರತ ಸೇರಿದಂತೆ 5 ರಾಷ್ಟ್ರಗಳಿಗೆ ಸುರಕ್ಷಿತ ತೈಲ ಸಾಗಣೆಗೆ ಇರಾನ್ ಸಮ್ಮತಿ ಸೂಚಿಸಿದೆ. ತನ್ನ ಹಾರ್ಮುಜ್ ಜಲಸಂಧಿಯಲ್ಲಿ ಸಂಪೂರ್ಣ ನಿರ್ಬಂಧ ಅನ್ವಯಿಸಲ್ಲ ಎಂದು ಘೋಷಿಸಿದೆ. ಭಾರತ ಸೇರಿದಂತೆ ಸ್ನೇಹಪೂರ್ಣ ಸಂಬಂಧ ಹೊಂದಿರುವ ಐದು ರಾಷ್ಟ್ರಗಳ ಹಡಗುಗಳಿಗೆ ಸುರಕ್ಷಿತವಾಗಿ ಸಂಚರಿಸಲು ಅನುಮತಿ ನೀಡಿದೆ.

ಭಾರತದ ಜೊತೆಗೆ ರಷ್ಯಾ, ಚೀನಾ, ಪಾಕಿಸ್ತಾನ ಮತ್ತು ಇರಾಕ್ ದೇಶಗಳ ಹಡಗುಗಳು ಈ ಸಂಘರ್ಷಪೀಡಿತ ಮಾರ್ಗದಲ್ಲಿ ಸಾಗಲು ಅವಕಾಶ ಪಡೆದಿವೆ. ಇರಾನ್ ಸರ್ಕಾರಿ ಟಿವಿಗೆ ನೀಡಿದ ಸಂದರ್ಶನದಲ್ಲಿ, ವಿದೇಶಾಂಗ



ಸಚಿವ ಅಬ್ಬಾಸ್ ಅರಾಘ್ಚಿ, ಹಾರ್ಮುಜ್ ಜಲಸಂಧಿ ಸಂಪೂರ್ಣವಾಗಿ ಮುಚ್ಚಿಲ್ಲ ಎಂದು ಹೇಳಿದ್ದಾರೆ. ಸ್ನೇಹಪೂರ್ಣ ರಾಷ್ಟ್ರಗಳಿಗೆ ಸೇರಿದ ಹಡಗುಗಳಿಗೆ ಮಾತ್ರ ಸಂಚಾರಕ್ಕೆ ಅವಕಾಶ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ. ಹಡಗು ಮಾಲೀಕರು ಅಥವಾ ಸಂಬಂಧಿತ ದೇಶಗಳು ನಮ್ಮನ್ನು ಸಂಪರ್ಕಿಸಿ ಸುರಕ್ಷಿತ ಸಾಗಣೆಗಾಗಿ ವಿನಂತಿಸಿದ್ದವು. ಕೆಲವು ಸ್ನೇಹಪೂರ್ಣ ರಾಷ್ಟ್ರಗಳಿಗೆ ನಮ್ಮ ಸಶಸ್ತ್ರ ಪಡೆಗಳು ಭದ್ರತೆ ಒದಗಿಸಿವೆ ಎಂದು ವಿವರಿಸಿದ್ದಾರೆ.

## ಜಿಬಿಎ ಎಲೆಕ್ಷನ್ ಗೆಲುವಿಗಾಗಿ ಶ್ರಮ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಪಂಚ ಪಾಲಿಕೆಗಳ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಶ್ರಮಿಸೋಣ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.

ಪಂಚ ಪಾಲಿಕೆಗಳ ಚುನಾವಣೆ ಕಾರ್ಯತಂತ್ರ ಸಂಬಂಧ ಇಂದು ಸಭೆ ನಡೆಯಿತು. ಕಾಂಗ್ರೆಸ್ಸಿನ ಅಸಮರ್ಥ ಆಡಳಿತವನ್ನು ಜನರಿಗೆ ಮನವರಿಕೆ ಮಾಡುವ ಮೂಲಕ ಬಿಜೆಪಿ ಗೆಲುವಿಗೆ ಶ್ರಮಿಸಲು ಸಲಹೆ ನೀಡಲಾಯಿತು. ಜಿಬಿಎ ಚುನಾವಣಾ ಉಸ್ತುವಾರಿ ರಾಮ್ ಮಾಧವ್, ಸಹ ಉಸ್ತುವಾರಿಗಳಾದ ಸತೀಶ್ ಪೂನಿಯ, ಸಂಜಯ್ ಉಪಾಧ್ಯಾಯ, ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥನಾರಾಯಣ್, ಮಾಜಿ ರಾಷ್ಟ್ರೀಯ



ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ಮಾಜಿ ಸಚಿವರಾದ ಎಸ್.ಸುರೇಶ್‌ಕುಮಾರ್, ಕೆ.ಗೋಪಾಲಯ್ಯ, ಬೈರತಿ ಬಸವರಾಜ್, ಎನ್. ಮುನಿರತ್ನ, ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ಶಾಸಕ ಮತ್ತು ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷ ಸಿ.ಕೆ. ರಾಮಮೂರ್ತಿ, ಶಾಸಕರಾದ ಎಲ್.ಎ.ರವಿಸುಬ್ರಹ್ಮಣ್ಯ, ಸಭೆಯ ಅಪೇಕ್ಷಿತರು, ಪ್ರಮುಖರು ಭಾಗವಹಿಸಿದ್ದರು.

# ಬೈ ಎಲೆಕ್ಷನ್ ಬಂಡಾಯ

### ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಭಿನ್ನ ದನಿ | ಮನವೊಲಿಕೆ ವಿಫಲ | ವರಿಷ್ಠರಿಗೆ ತಟ್ಟಿದ ಬಿಸಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ದಿನೇ ದಿನೆ ಬೈ ಎಲೆಕ್ಷನ್ ಕಾವೇರ ತೊಡಗಿದೆ. ವಿಶೇಷವಾಗಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಬಂಡಾಯದ ಬಿಸಿ ತಾಕಿಸಿದೆ. ಟಿಕೆಟ್ ಆಕಾಂಕ್ಷಿಯಾಗಿದ್ದ ಸಾದಿಕ್ ಪೈಲ್ವಾನ್ ನಾಮಪತ್ರ ವಾಪಸ್ ಪಡೆಯದೆ ಅಖಾಡದಲ್ಲಿ ಉಳಿದಿರುವುದು ವರಿಷ್ಠರ ನಿದ್ದೆಗೆಡಿಸಿದೆ. ಪೈಲ್ವಾನ್ ಕೋಪ ಶಮನಗೊಳಿಸಲು ಶಾಸಕ ರಿಜ್ವಾನ್ ಅರ್ಷದ್, ಸಲೀಂ ಅಹ್ಮದ್ ನಡೆಸಿದ ಪ್ರಯತ್ನವೂ ಕೈ ಕೊಟ್ಟಿದೆ. ಗೊಂದಲ ಬಗೆಹರಿಸಲು ಮುಂದಾಗಬೇಕಾಗಿದ್ದ ಸಚಿವ ಜಮೀರ್ ಅಹ್ಮದ್ ಕೇರಳಕ್ಕೆ ತೆರಳಿದ್ದಾರೆ..!


**ಶಾಸಕಾಂಗದಲ್ಲಿ ಚರ್ಚೆ:** ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಕುರಿತಾಗಿ ಚರ್ಚೆ ನಡೆದಿತ್ತು. ದಾವಣಗೆರೆ ದಕ್ಷಿಣ, ಬಾಗಲಕೋಟೆ ಕ್ಷೇತ್ರದಲ್ಲಿ ಗೆಲುವು ಸಾಧಿಸಲು ಜವಾಬ್ದಾರಿ ಹಂಚಿಕೆ ಮಾಡಲಾಗಿತ್ತು. ಪಕ್ಷದ ಗೆಲುವಿಗೆ ತಕ್ಕ ನಡೆಸಬೇಕು ಎಂದು ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

**ಕಾರ್ಯತಂತ್ರಗಳ ನೋಟ:** ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಂ ನಾಯಕರು ಜವಾಬ್ದಾರಿ ಹೊತ್ತು ಪಕ್ಷದ ಅಭ್ಯರ್ಥಿಯ ಗೆಲುವಿಗೆ ಪ್ರಯತ್ನ ನಡೆಸಬೇಕು ಎಂದು ಸೂಚಿಸಿದ್ದರು. ಇದಕ್ಕೂ ಮೊದಲು ಸಚಿವ ಜಮೀರ್ ಅಹ್ಮದ್ ಖಾನ್ ನೇತೃತ್ವದಲ್ಲಿ ಮುಸ್ಲಿಂ ಶಾಸಕರು, ಪರಿಷತ್ ಸದಸ್ಯರು ಒಟ್ಟು ಸೇರಿ ಸಭೆ ನಡೆಸಿ ಕೈಗೊಳ್ಳಬೇಕಾದ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಿದ್ದರು.



### ಸೆಡವು ಬಿಡದ ಸಾದಿಕ್

ಪಕ್ಷದ ಸೂಚನೆಯಂತೆ ಶಾಸಕ ರಿಜ್ವಾನ್ ಅರ್ಷದ್, ಎಂಎಲ್ಸಿ ಸಲೀಂ ಅಹ್ಮದ್ ಖಾನ್ ಅವರು ದಾವಣಗೆರೆಗೆ ತೆರಳಿದ್ದರು. ಸಾದಿಕ್ ಪೈಲ್ವಾನ್ ಅವರನ್ನು ಭೇಟಿ ಮಾಡಿ ಮನವೊಲಿಕೆಯ ಪ್ರಯತ್ನ ಮಾಡಿದ್ದರು. ಆದರೆ ಅದು ಯಶಸ್ವಿ ಆಗಿಲ್ಲ. ಇಬ್ಬರು ನಾಯಕರಿಗೆ ಸ್ಥಳೀಯ ಯುವಕರು ಗೋಬ್ಯಾಕ್ ಎಂದು ಘೋಷಣೆ ಕೂಗುವ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದರಿಂದ ಅವರ ಪ್ರಯತ್ನವೂ ವಿಫಲವಾಗಿದೆ.





ಬಾಗಲಕೋಟೆಯಲ್ಲಿ ಬಿಜೆಪಿ ಪ್ರಬಲ ಪ್ರದರ್ಶನ ನೀಡುತ್ತಿರುವಂತೆ ತೋರುತ್ತಿದೆ ಎನ್‌ಡಿಎ (ಬಿಜೆಪಿ–ಜೆಡಿಎಸ್) ವಿರುದ್ಧ "ಒಗ್ಗಟ್ಟಾಗಿ" ಹೋರಾಡಬೇಕು ಇಲ್ಲದಿದ್ದರೇ ಕ್ಷೇತ್ರಗಳನ್ನು ಕಳೆದುಕೊಳ್ಳುವ ಅಪಾಯವಿದೆ.
–ರಣದೀಪ್‌ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ

### ವರಿಷ್ಠರ ನಿದ್ದೆಕದ್ದರು..!

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಏಪ್ರಿಲ್ 9ರಂದು ನಡೆಯಲಿದೆ. ನಾಮಪತ್ರ ವಾಪಸ್ ಪಡೆಯಲು ಗುರುವಾರ ಮಧ್ಯಾಹ್ನ 3 ಗಂಟೆ ತನಕ ಅವಕಾಶವಿತ್ತು. ಆದರೆ ನಾಮಪತ್ರ ವಾಪಸ್ ಪಡೆಯದೇ ಸಾದಿಕ್ ಪೈಲ್ವಾನ್ ಕಣದಲ್ಲಿ ಉಳಿದಿದ್ದಾರೆ. ಇನ್ನು ಖಆಕಋ ಅಭ್ಯರ್ಥಿ ಅಫ್ಸರ್ ಕೊಡ್ಲಿಪೇಟೆ ಸೇರಿದಂತೆ 22 ಅಲ್ಪಸಂಖ್ಯಾತರು ಕಣದಲ್ಲಿರುವುದು ಕಾಂಗ್ರೆಸ್ ವರಿಷ್ಠರ ನಿದ್ದೆಗೆಡಿಸಿದೆ.

### ಅಲ್ಲಿಗೆ ಸುಳಿಯದ ಜಮೀರ್ ಅಹ್ಮದ್!

ಸಿಎಲ್‌ಪಿ ಸಭೆಯಲ್ಲಿ ಸಿಎಂ ಸೂಚನೆಯ ಹಿನ್ನೆಲೆಯಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್ ಅಖಾಡಕ್ಕೆ ಇಳಿಯುತ್ತಾರೆ ಎಂಬ ನಿರೀಕ್ಷೆ ಇತ್ತು. ಆ ಭಾಗದಲ್ಲಿ ಜಮೀರ್ ಬಗ್ಗೆ ಒಲವು ಇದ್ದು, ಸಾದಿಕ್ ಅವರನ್ನು ಅವರೇ ಮನವೊಲಿಸುತ್ತಾರೆ ಎನ್ನಲಾಗಿತ್ತು. ದಾವಣಗೆರೆಗೆ ನಾನು ತೆರಳಿ ಮನವೊಲಿಸುತ್ತೇನೆ ಎಂದೂ ಜಮೀರ್ ಹೇಳಿಕೊಂಡಿದ್ದರು. ಈ ನಡುವೆ ಜಮೀರ್ ಕೇರಳಕ್ಕೆ ತೆರಳಿದ್ದು, ಪಕ್ಷದ ಅಭ್ಯರ್ಥಿ ಪರ ಚುನಾವಣಾ ಪ್ರಚಾರ ನಡೆಸಿದ್ದಾರೆ.

## ಡಿಸಿಎಂ ಡಿಕೆಶಿ-ಮುನಿರತ್ನ ವಾಕ್ಸಮರ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿಜೆಪಿ ಶಾಸಕ ಮುನಿರತ್ನ ನಡುವೆ ಏರಿದ ಧ್ವನಿಯಲ್ಲಿ ಮಾತಿನ ಚಕಮಕಿಗೆ ವಿಧಾನ ಸಭೆ ಸಾಕ್ಷಿಯಾಯಿತು. ಆಡಳಿತ ಪಕ್ಷದ ಶಾಸಕರು ಧರಣಿ ನಡೆಸಿದ ಪ್ರಸಂಗವೂ ನಡೆಯಿತು. ನಗರ ಅಭಿವೃದ್ಧಿ ಕುರಿತಂತೆ ನಡೆದ ಚರ್ಚೆಗೆ ಡಿಸಿಎಂ ಡಿ.ಕೆ.ಶಿ ಉತ್ತರಿಸುವಾಗ ಆಡಿದ ಮಾತು ಮುನಿರತ್ನ ಅವರನ್ನು ಕೆರಳಿಸಿದೆ. ಪ್ರತಿಯಾಗಿ ಮುನಿರತ್ನ





ಅವರೂ ಏರಿದ ಧ್ವನಿಯಲ್ಲಿ ಉತ್ತರಿಸಿದ್ದಾರೆ. ಇದಕ್ಕೆ ಆಡಳಿತ ಪಕ್ಷದ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಮಾತನಾಡಿದಾಗ ಸದನದಲ್ಲಿ ಗದ್ದಲದ ವಾತಾವರಣ ಉಂಟಾಯಿತು. ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮಧ್ಯಪ್ರವೇಶಿಸಿ, ವೈಯಕ್ತಿಕ ವಿಚಾರ ಚರ್ಚೆಯಾಗುವುದು ಬೇಡ, ಡಿಸಿಎಂ ಹಾಗೂ ಶಾಸಕರು ಬಳಸಿರುವ ಶಬ್ದ, ವಿಚಾರವನ್ನು ಕಡತದಿಂದ ತೆಗೆಸಿ ಎಂದು ಸಲಹೆ ನೀಡಿದ್ದಾರೆ.

## ವಾಯುಪಡೆಯಿಂದ ಭೂಮಿ ಮರು ಜಪ್ತಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಉತ್ತರ ತಾಲೂಕು ಜಾರಕಬಂಡೆ ಕಾವಲ್‌ನಲ್ಲಿ ಭಾರತೀಯ ವಾಯುಪಡೆಗೆ 1987ರಲ್ಲಿ ಮಂಜೂರು ಮಾಡಿದ್ದ ಭೂಮಿಯ ಪೈಕಿ 452 ಎಕರೆ–4 ಗುಂಟೆ ಅರಣ್ಯಪ್ರದೇಶವಾಗಿದೆ. ಈ ಮಂಜೂರಾತಿಯನ್ನು 2017ರಲ್ಲಿ ರದ್ದುಪಡಿಸಲಾಗಿದೆ ಎಂದು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ವಿಧಾನಸಭೆಗೆ ತಿಳಿಸಿದ್ದಾರೆ.



ಪ್ರತಿಪಕ್ಷ, ನಾಯಕ ಆರ್. ಅಶೋಕ್ ನಿಯಮ 69ರಡಿ ಪ್ರಸ್ತಾಪಿಸಿದ ಸಾರ್ವಜನಿಕ ಮಹತ್ವದ ವಿಷಯ ಚರ್ಚೆಯ ವೇಳೆ ಉತ್ತರ ನೀಡಿ, ಪ್ರಸ್ತುತ ಈ 452 ಎಕರೆ ಜೊತೆಗೆ ಜಾರಕಬಂಡೆ, ಪೀಣ್ಯ ಪ್ಲಾಂಟೇಷನ್ ನಲ್ಲಿ 83 ಎಕರೆ ಅರಣ್ಯ ಭೂಮಿ ವಾಯುಪಡೆ ವಶದಲ್ಲಿದೆ. ಇದನ್ನು ತೆರವು ಮಾಡಿಸಲು ಕ್ರಮ ವಹಿಸಲಾಗುವುದು ಎಂದಿದ್ದಾರೆ.

ಈ ಹೆಚ್ಚುವರಿ ಜಮೀನಿನ ಪೈಕಿ 58.08 ಎಕರೆ ಭೂಮಿಯನ್ನು ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ನೀಡಿ ಹಣ ಪಡೆದು ಕಾನೂನು ಉಲ್ಲಂಘನೆ ಮಾಡಿರುತ್ತಾರೆ.

## 14 ಪ್ರಯಾಣಿಕರ ಸಜೀವ ದಹನ



• ಮಲ್ಲಮ್ಮ ನುಡಿ ವಾರ್ತೆ ರಾಯಚೂರು (ರಾಯವರಂ)

ಆಂಧ್ರ ಪ್ರದೇಶ ಮಾರ್ಕಾಪುರಂ ಜಿಲ್ಲೆಯಲ್ಲಿ ಖಾಸಗಿ ಬಸ್ ಮತ್ತು ಟಿಪ್ಪರ್ ಲಾರಿ ಡಿಕ್ಕಿ ಹೊಡೆದು ಬೆಂಕಿ ದುರಂತದಲ್ಲಿ 14 ಮಂದಿ ಸಜೀವವಾಗಿ ದಹನವಾಗಿದ್ದಾರೆ. ಅತಿ ವೇಗವಾಗಿ ಬರುತ್ತಿದ್ದ ವಾಹನಗಳು ಪರಸ್ಪರ ಡಿಕ್ಕಿ ಹೊಡೆದಾಗ ಈ ಅವಘಡ ಸಭಂವಿಸಿದೆ. ಡಿಕ್ಕಿ ಹೊಡೆದ ರಭಸಕ್ಕೆ ಬಸ್ಗೆ ಬೆಂಕಿ ತಗುಲಿ, ಹಲವಾರು ಪ್ರಯಾಣಿಕರು ಸಿಲುಕಿಕೊಂಡು ದಹನಗೊಂಡಿದ್ದಾರೆ ಎಂದು ಮಾರ್ಕಾಪುರಂ ಪೊಲೀಸ್ ಅಧೀಕ್ಷಕ ತಿಳಿಸಿದ್ದಾರೆ. ಈ ದುರಂತದಲ್ಲಿ 14 ಪ್ರಯಾಣಕರು ಸ್ಥಳದಲ್ಲೇ ಮೃತಪಟ್ಟಿದ್ದು, 23 ಗಾಯಾಳುಗಳನ್ನು ಗುಂಟೂರು ಆಸ್ಪತ್ರೆಗೆ ಸಾಗಿಸಲಾಗಿದೆ. ಇದರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ. ಜಗಿತ್ಯಾಲ (ತೆಲಂಗಾಣ)ದಿಂದ ನೆಲ್ಲೂರು ಜಿಲ್ಲೆಯ ಕಾಲಿಗಿರಿ ಕಡೆಗೆ 40 ಪ್ರಯಾಣಿಕರನ್ನು ಹೊತ್ತು ಹೊರಟಿದ್ದ ಖಾಸಗಿ ಬಸ್‌ಗೆ ಏಕಾಏಕಿ ಜಲ್ಲಿಕಲ್ಲು ಸಾಗಿಸುತ್ತಿದ್ದ ಟಿಪ್ಪರ್ ಡಿಕ್ಕಿ ಹೊಡೆದಿದ್ದು, ಕೆಲ ಪ್ರಯಾಣಿಕರು ಹೊರಗೆ ಬರಲು ಯತ್ನಿಸಿದ್ದಾರೆ. ಆದರೆ ಕೆಲವರು ಗಾಯದ ಪರಿಣಾಮ ಬೇಗ ಹೊರಗೆ ಬರಲಾಗದೆ ಬೆಂಕಿ ಕೆನ್ನಾಲಿಗೆಗೆ ಸಿಲುಕಿದ್ದಾರೆ. ಹೈದರಾಬಾದ್ನ ಹರಿಕೃಷ್ಣ ಖಾಸಗಿ ಟ್ರಾವೆಲ್ ಬಸ್ ತಡ ರಾತ್ರಿ ಹೊರಟಿತ್ತು. ಮಾರ್ಗಮಧ್ಯ ಬೆಳಿಗ್ಗೆ ದುರಂತಕ್ಕೀಡಾಗಿದೆ. ಮೃತಪಟ್ಟವರಲ್ಲಿ ಹೆಚ್ಚಿನವರು ಕಣಿಗಿರಿ, ಪಾಮೂರ್ ಪ್ರದೇಶದ ನಿವಾಸಿಗಳು ಎಂದು ತಿಳಿದುಬಂದಿದೆ. ಪ್ರಕರಣ ದಾಖಲಾಗಿದೆ.

# ಪರಿಷತ್ ಸದಸ್ಯರ ಕಚೇರಿ ಶೀಘ್ರ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಜಿಲ್ಲೆಯ ಔರಾದ ತಾಲೂಕಿನಲ್ಲಿ ವಿಧಾನ ಪರಿಷತ್ ಸದಸ್ಯರ ಕಚೇರಿ ಸ್ಥಾಪನೆಗೆ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಸ್ಥಳೀಯ ಸಂಸ್ಥೆಯ ಕ್ಷೇತ್ರದಿಂದ ಆಯ್ಕೆಯಾದ ಮಾನ್ಯ ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ ಅವರು ಅಧಿವೇಶನದಲ್ಲಿ ಕಚೇರಿ ನಿರ್ಮಾಣ ಕುರಿತು ಪ್ರಸ್ತಾಪಿಸಿರುವ ಹಿನ್ನೆಲೆ ಅವರ ಜೊತೆಯಲ್ಲಿ ಪಕ್ಷಾತೀತವಾಗಿ ಅನೇಕ ವಿಧಾನ ಸದಸ್ಯರು ಧ್ವನಿ ಎತ್ತಿದ ಪ್ರಯುಕ್ತ ಸಭಾಪತಿ ಹಾಗೂ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ.



### ಗಣ್ಯರ ಉಪಸ್ಥಿತಿ

ಸಭಾಪತಿಗಳಾದ ಬಸವರಾಜ್ ಹೊರಟ್ಟಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸಣ್ಣ ನೀರಾವರಿ ಸಚಿವರಾದ ಬೋಸರಾಜ್, ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಬೀದರ್ ಜಿಲ್ಲೆಯ ಜಿಲ್ಲಾಧಿಕಾರಿಗಳು ಉಪಸ್ಥಿತರಿದ್ದರು.

### ಕೆಲವೇ ದಿನಗಳಲ್ಲಿ ಕಚೇರಿ ಸ್ಥಾಪನೆ: ಡಿ.ಸಿ

ಜನಸಾಮಾನ್ಯರ ಹಿತದೃಷ್ಟಿಯಿಂದ ಹುಮನಾಬಾದ್ ಬದಲಾಗಿ ಔರಾದ್ ಪಟ್ಟಣದಲ್ಲಿ ವಿಧಾನ ಪರಿಷತ್ ಸದಸ್ಯರ ಕಚೇರಿ ನಿರ್ಮಾಣಕ್ಕೆ ಎಂಎಲ್ಸಿ ಭೀಮರಾವ ಪಾಟೀಲ್ ಅವರು ಅಧಿವೇಶನದಲ್ಲಿ ಕಚೇರಿ ನಿರ್ಮಾಣ ಕುರಿತು ಚರ್ಚಿಸಿದ್ದ ಪ್ರಯುಕ್ತ ಇಂದು ಬೀದರ ಜಿಲ್ಲಾಧಿಕಾರಿಗಳಿಗೆ ಖುದ್ದಾಗಿ ಹಾಜರಾಗುವಂತೆ ಸಭಾಪತಿ ಸೂಚಿಸಿದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಇಂದು ಆಗಮಿಸಿ ಕೆಲವೇ ದಿನಗಳಲ್ಲಿ ಕಚೇರಿ ಸ್ಥಾಪಿಸುವುದಾಗಿ ತಿಳಿಸಿದ್ದಾರೆ.

**ಮೌಢ್ಯ ನಿಷೇಧ ಕಾಯ್ದೆ ಸೇರಿದಂತೆ ವೈಚಾರಿಕತೆ, ಸಮಾನತೆ ಸಾರುವ ಕಾಯ್ದೆ ಹಾಗೂ ಯೋಜನೆಗಳನ್ನು ನಮ್ಮ ಸರ್ಕಾರ ತರುತ್ತಿದೆ: ಮುಖ್ಯಮಂತ್ರಿ ಸಿದ್ದರಾಮಯ್ಯ**

# ಏ.5 ಕ್ಕೆ ಡಾ.ಬಾಬು ಜಗಜೀವನರಾಂ ಜಯಂತಿ ಅರ್ಥಪೂರ್ಣವಾಗಿ ಆಚರಿಸೋಣ: ಕರಾಳೆ



• **ಮಲ್ಲಮ್ಮ ನುಡಿ ವಾರ್ತೆ ಬೀದರ**

ಏಪ್ರಿಲ್.5 ರಂದು ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಅವರ 119ನೇ ಜಯಂತಿಯನ್ನುಅರ್ಥಪೂರ್ಣವಾಗಿ ಆಚರಿಸೋಣ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಬಿ.ಕರಾಳೆ ತಿಳಿಸಿದರು.

ಅವರುಗುರುವಾರಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಅವರ 119ನೇ ಜಯಂತಿ ಕುರಿತು ಕರೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಂದು ಬೆಳಿಗ್ಗೆ 9.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡಾ.ಬಾಬು ಜಗಜೀವನರಾಂ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ 10 ಗಂಟೆಗೆ ಡಾ.ಬಾಬು ಜಗಜೀವನರಾಂ ಅವರ ಪ್ರತಿಮೆಯಿಂದ ಭಾವಚಿತ್ರದ ಮೆರವಣಿಗೆ ಪ್ರಾರಂಭಗೊಂಡು ನಗರದ ಬಸವೇಶ್ವರ ವೃತ್ತ, ಭಗತಸಿಂಗ ವೃತ್ತ, ಅಂಬೇಡ್ಕರ ವೃತ್ತ, ಕರಿಯಪ್ಪ ವೃತ್ತ ಮಾರ್ಗವಾಗಿ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ 11 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯುವುದು ಎಂದರು.

ಅಂದು ನಗರದ ಎಲ್ಲ ಮಹನೀಯರ ವೃತ್ತಗಳಿಗೆ ದೀಪಾಲಂಕಾರ ಮಾಡುವುದು, ಎಲ್ಲ ಗ್ರಾಮ ಪಂಚಾಯತಗಳಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದು. ಮೆರವಣಿಗೆ ನಡೆಯುವ ಸ್ಥಳಗಳಲ್ಲಿ ಸ್ವಚ್ಚತೆ, ಕುಡಿಯುವ ನೀರಿನ ವ್ಯವಸ್ಥೆ ನಗರಸಭೆ ವತಿಯಿಂದ ಮಾಡುವುದು. ಪೊಲೀಸ್ ಇಲಾಖೆ ವತಿಯಿಂದ ಮೆರವಣಿಗೆ ಹೋಗುವ ಸ್ಥಳಗಳಲ್ಲಿ ಪೊಲೀಸ್ ಬಂದೋಬಸ್ತ, ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಕಲಾ ತಂಡಗಳನ್ನು ನೀಡಲು ವ್ಯವಸ್ಥೆ ಮಾಡಬೇಕೆಂದರು.

ಈ ಸಭೆಯಲ್ಲಿ ಸಮಾಜದ ಮುಖಂಡರು ವಿವಿಧ ವಿಷಯಗಳ ಕುರಿತು ಚರ್ಚಿಸಿದರು.

ಸಭೆಯಲ್ಲಿ ಬೀದರ ಮಹಾನಗರ ಪಾಲಿಕೆ ಆಯುಕ್ತರಾದ ಮುಕುಲ್ ಜೈನ್, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿಗಳಾದ ಶರಣಪ್ಪಾ ಕೋಟಪ್ಪಗೋಳ, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಯೋಗೇಶ, ಜಿಲ್ಲಾ ಮಟ್ಟದ ಅಧಿಕಾರಿಗಳು ಸೇರಿದಂತೆ ಸಮಾಜದ ಮುಖಂಡರಾದ ಚಂದ್ರಕಾಂತ ಹಿಪ್ಪಳಗಾಂವ, ರಾಜು ಕಡ್ಯಾಳ, ಫರ್ನಾಡಿಸ್ ಹಿಪ್ಪಳಗಾಂವ, ಜಾಪಟ್ ಕಡ್ಯಾಳ, ಜಯಶೀಲ ಮಿರಾಗಂಜ್, ಮಾರುತಿ ಶಾಖಾ, ರೋಹಿದಾಸ ಗೋಡೆ, ಸಂಘ ಸಂಸ್ಥೆಗಳು ಮುಖಂಡರು, ಪದಾಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು

# ಗುರಮ್ಮಾ ಸಿದ್ಧಾರೆಡ್ಡಿ ಅವರಿಗೆ ಗೌರವ ಅಭಿನಂದನಾ ಸಮಾರಂಭ



• **ಮಲ್ಲಮ್ಮ ನುಡಿ ವಾರ್ತೆ ಬೀದರ**

ನಗರದ ಸಿದ್ಧಶ್ರೀ ನಿವಾಸದಲ್ಲಿ ರಾಜ್ಯಮಟ್ಟದ ಮಹಿಳಾ ಸಮ್ಮೇಳನ ಪ್ರಥಮ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿ ಸಮ್ಮೇಳನವನ್ನು ಯಶಸ್ವಿಗೊಳಿಸಿರುವ ಡಾ,ಗುರಮ್ಮಾ ಸಿದ್ಧಾರೆಡ್ಡಿ ರವರ ಗೌರವ ಅಭಿನಂದನಾ ಸಮಾರಂಭ ಜರುಗಿತು.

ಬೆಂಗಳೂರಿನಲ್ಲಿ ದಿನಾಂಕ 14/03/2026 ರಂದು ಕರ್ನಾಟಕ ವಚನ ಸಾಹಿತ್ಯ ಪರಿಷತ್ತು ಬೆಂಗಳೂರು ವತಿಯಿಂದ ಆಯೋಜಿಸಿರುವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ರಾಜ್ಯ ಮಟ್ಟದ ಪ್ರಥಮ ಮಹಿಳಾ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಬೀದರ ಜಿಲ್ಲೆಯ ಸಮಾಜ ಸೇವಕಿ, ನೊಂದ ಮಹಿಳೆಯರ ಆಶಾ ಕಿರಣ ಡಾ,ಗುರಮ್ಮಾ ಸಿದ್ಧಾರೆಡ್ಡಿ ಅವರು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಮಹಿಳಾ ಸಮ್ಮೇಳನವನ್ನು ಅದ್ದೂರಿಯಾಗಿ ಯಶಸ್ವಿಗೊಳಿಸಿರುವ ಪ್ರಯುಕ್ತ ಜಿಲ್ಲಾ ಹಾಗೂ ತಾಲೂಕಾ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು ವತಿಯಿಂದ ಡಾ,ಗುರಮ್ಮಾ ಸಿದ್ಧಾರೆಡ್ಡಿ ರವರನ್ನು ಗೌರವಿಸಲಾಯಿತು.

ಗೌರವ ಸ್ವೀಕರಿಸಿ ಡಾ,ಗುರಮ್ಮಾ ಸಿದ್ಧಾರೆಡ್ಡಿ ರವರು ಮಾತನಾಡಿ 12ನೇ ಶತಮಾನದಲ್ಲಿ ಬಸವಣ್ಣನವರು ಮತ್ತು ಬಸವಾದಿ ಶರಣರು ಮಹಿಳೆಗೆ ಸ್ವಾತಂತ್ರತೆ ಮತ್ತು ಸಮಾನತೆ ನೀಡಿದ್ದು ಐತಿಹಾಸಿಕವಾಗಿದೆ, ಇಂದು ಮಹಿಳೆಯು ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಪ್ರತಿಭೆ ವ್ಯಕ್ತಿತ್ವವನ್ನು ಬೀರುತ್ತಿದ್ದಾರೆ. ಆಕೆಯೂ ಪುರಷನ ಸರಿಸಮಾನವಾಗಿ ಸೇವೆ ಮಾಡುತ್ತಿದ್ದಾಳೆ, ಮಹಿಳೆಯು ಸಮಾಜದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸಲು ವಿಶ್ವಗುರು ಬಸವಣ್ಣನವರೇ ಕಾರಣರಾಗಿದ್ದಾರೆ ಎಂದರು.

ಬೀದರ ಜಿಲ್ಲಾ ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸುನೀತಾ ದಾಡಗೆ ರವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ,ಡಾ,ಗುರಮ್ಮಾ ಸಿದ್ಧಾರೆಡ್ಡಿ ಅವರು ಬಡವರ, ದೀನ-ದಲಿತರ, ಸ್ತ್ರೀಯರು ಕಷ್ಟವನ್ನು ಅರಿತು ಸಹಾಯ ಸಹಕಾರ ಮಾಡುವ ಒಬ್ಬ ದಾಸೋಹಿಗಳಾಗಿದ್ದಾರೆ.ಅವರನ್ನು ರಾಜ್ಯಮಟ್ಟದ ಮಹಿಳಾ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದು ಸಂತಸದ ವಿಷಯವಾಗಿದೆ, ಮತ್ತು ಬೀದರ ಜಿಲ್ಲೆಗೆ ದೊರೆತ ಕೀರ್ತಿ ಎಂದು ಹೇಳಿದರು. ರಾಜ್ಯ ಮಟ್ಟದ ಮಹಿಳಾ ಸಮ್ಮೇಳನದಲ್ಲಿ ಬೀದರ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆ ಚಿಟ್ಟಾದ ಶಿಕ್ಷಕಿಯಾದ ಶಕುಂತಲಾ ಮೀಸೆ ಅವರಿಗೆ ಸಾವಿತ್ರಿಬಾಯಿ ಫುಲೇ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಯಿತು.ವರ್ಷಾ ಬಿರಾದಾರ ವಚನ ಗಾಯನ ನಡೆಸಿಕೊಟ್ಟರು. ತಾಲೂಕಾ ಅಧ್ಯಕ್ಷರಾದ ಶ್ರೀನಿವಾಸ ಬಿರಾದಾರ ಸ್ವಾಗತ ಮತ್ತು ಪ್ರಾಸ್ತಾವಿಕ ಮಾತನಾಡಿದರು. ಬಸವರಾಜ ಮೂಲಗೆ ರವರು ನಿರೂಪಿಸಿದರು. ಕಲ್ಯಾಣರಾವ ಚಳಕಾಪೂರೆ ವಂದಿಸಿದರು.ಜಿಲ್ಲಾ ವಚನ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾದ ಪ್ರೊ. ಉಮಾಕಾಂತ ಮೀಸೆ, ಸಂಘಟನಾ ಕಾರ್ಯದರ್ಶಿಗಳಾದ ಶೈಲಜಾ ಚಳಕಾಪೂರೆ, ಉಪಾಧ್ಯಕ್ಷರಾದ ಪುಣ್ಯವತಿ ವಿಸಾಜಿ, ತಾಲೂಕಾ ಕಾರ್ಯದರ್ಶಿಗಳಾದ ರೋಹಿತ ಜಿರೋಬೆ, ಸಲಹೆಗಾರರಾದ ಭಾರತಿ ಪಾಟೀಲ್,

ಲಕ್ಷ್ಮೀ ಬಿರಾದಾರ, ಹೇಮಲತಾ ವೀರಶೆಟ್ಟೆ, ಪ್ರಮುಖರಾದ ಭಾರತಿ ವಸ್ತದ ದಿಲೀಪ ಬಿರಾದಾರ, ಉಮೇಶ ಅಷ್ಟೂರೆ, ನಂದಾ ಪಾಟೀಲ್, ರಾಚಯ್ಯಾ ನಾಶಿ, ಅಶೋಕ ಮಾಳೆಗಾಂವ, ರಮೇಶ ತಿಬ್ಬಶೆಟ್ಟಿ, ಬಸವರಾಜ ಬಿರಾದಾರ, ಗುರುನಾಥ ಬಿರಾದಾರ ಮುಂತಾದವರು ಭಾಗವಹಿಸಿದ್ದರು.

## ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

# ಅಧಿಕಾರಿಗಳ ಮೇಲೆ ಹಿಡಿತ ಸಾಧಿಸುವಲ್ಲಿ ಚುನಾಯಿತ ಪ್ರತಿನಿಧಿಗಳು ವಿಫಲವಾದರೇ?

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಆಯ್ಕೆಯಾದ ಪ್ರತಿನಿಧಿಗಳು ಜನರ ಪರವಾಗಿ ಆಡಳಿತ ನಡೆಸುವ ಜವಾಬ್ದಾರಿ ಹೊಂದಿರುತ್ತಾರೆ. ಅಧಿಕಾರಿಗಳು ಸರ್ಕಾರದ ಯೋಜನೆಗಳನ್ನು ಜಾರಿಗೆ ತರುವ ಪ್ರಮುಖ ಪಾತ್ರವಹಿಸಿದರೂ, ಅವರ ಕೆಲಸದ ಮೇಲಿನ ಮೇಲ್ವಿಚಾರಣೆ ಹಾಗೂ ನಿಯಂತ್ರಣವು ಚುನಾಯಿತ ಪ್ರತಿನಿಧಿಗಳ ಕೈಯಲ್ಲಿರಬೇಕು. ಆದರೆ ಅನೇಕ ಕಡೆಗಳಲ್ಲಿ ಈ ಸಮತೋಲನ ಕಳೆದುಹೋಗುತ್ತಿರುವುದು ಕಂಡುಬರುತ್ತಿದೆ.

ಚುನಾಯಿತ ಪ್ರತಿನಿಧಿಗಳು ಅಧಿಕಾರಿಗಳ ಮೇಲೆ ಸೂಕ್ತ ಹಿಡಿತ ಸಾಧಿಸಲು ವಿಫಲವಾದರೆ ಆಡಳಿತ ವ್ಯವಸ್ಥೆ ದುರ್ಬಲವಾಗುತ್ತದೆ. ಕೆಲವೆಡೆ ಅಧಿಕಾರಿಗಳೇ ಮೇಲುಗೈ ಸಾಧಿಸಿ ತಮ್ಮ ಇಚ್ಛೆಯಂತೆ ಕೆಲಸ ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದರಿಂದ ಜನರ ಸಮಸ್ಯೆಗಳು ಪರಿಹಾರವಾಗದೆ ಬಾಕಿಯಾಗುತ್ತವೆ. ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಚೇರಿಗಳ ಸುತ್ತ ಅಲೆದಾಡಬೇಕಾದ ಪರಿಸ್ಥಿತಿ ಉಂಟಾಗುತ್ತದೆ.

ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಪರಸ್ಪರ ಸಹಕಾರದಿಂದ ಕೆಲಸ ಮಾಡಿದಾಗ ಮಾತ್ರ ಅಭಿವೃದ್ಧಿ ಸಾಧ್ಯ. ಆದರೆ ಪ್ರತಿನಿಧಿಗಳು ತಮ್ಮ ಹೊಣೆಗಾರಿಕೆಯನ್ನು ಮರೆತು ಅಧಿಕಾರಿಗಳ ಕಾರ್ಯವೈಖರಿಯ ಮೇಲೆ ನಿಗಾವಹಿಸದೆ ಇದ್ದರೆ ಭ್ರಷ್ಟಾಚಾರ ಹಾಗೂ ನಿರ್ಲಕ್ಷ್ಯ ಹೆಚ್ಚುವ ಸಾಧ್ಯತೆ ಇದೆ. ಇದು ಪ್ರಜಾಪ್ರಭುತ್ವದ ಮೂಲ ಸಿದ್ಧಾಂತಕ್ಕೂ ಧಕ್ಕೆ ತರುತ್ತದೆ.

ಆದ್ದರಿಂದ ಚುನಾಯಿತ ಪ್ರತಿನಿಧಿಗಳು ಜನರ ವಿಶ್ವಾಸವನ್ನು ಉಳಿಸಿಕೊಳ್ಳಲು ಅಧಿಕಾರಿಗಳ ಕಾರ್ಯಚಟುವಟಿಕೆಗಳ ಮೇಲೆ ಕಟ್ಟುನಿಟ್ಟಿನ ನಿಗಾವಹಿಸಿ, ಜನರ ಸಮಸ್ಯೆಗಳಿಗೆ ತ್ವರಿತ ಪರಿಹಾರ ದೊರಕುವಂತೆ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಜನರು ಆಯ್ಕೆ ಮಾಡಿದ ಪ್ರತಿನಿಧಿಗಳ ಮೇಲಿನ ವಿಶ್ವಾಸವೂ ಕುಸಿಯುವ ಅಪಾಯ ಇದೆ.

## ಭಾಲ್ಕಿಯ ಪಟ್ಟಣದಲ್ಲಿ ಶ್ರೀರಾಮನವಮಿ ಆಚರಣೆ

# ಶ್ರೀರಾಮನ ಆದರ್ಶ ಅನುಸರಿಸಿ: ಬಕ್ಕಾ



ಭಾಲ್ಕಿಯ ಲೆಕ್ಚರ್ ಕಾಲೋನಿಯ ಹನುಮಾನ ಮಂದಿರದಲ್ಲಿ ಶ್ರೀರಾಮನವಮಿ ನಿಮಿತ್ತ ಶ್ರೀರಾಮ ದೇವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ಶ್ರೀರಾಮನ ಆದರ್ಶ ಅನುಸರಿಸಿ ನಡೆದರೆ ಪ್ರತಿಯೊಬ್ಬರ ಬದುಕು ಸುಂದರವಾಗಿ ರೂಪಗೊಳ್ಳಲಿದೆ ಲೆಕ್ಚರ್ ಕಾಲೋನಿಯ ಹನುಮಾನ ಮಂದಿರದ ಅಧ್ಯಕ್ಷ ರಾಜಕುಮಾರ ಬಕ್ಕಾ ಹೇಳಿದರು.

ಪಟ್ಟಣದ ಲೆಕ್ಚರ್ ಕಾಲೋನಿಯ ಹನುಮಾನ ಮಂದಿರದಲ್ಲಿ ಶ್ರೀರಾಮನವಮಿ ನಿಮಿತ್ತ ಗುರುವಾರ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ರಾಮ ದೇವರ ಆದರ್ಶಗಳು ಸರ್ವೋತ್ತಮವಾಗಿದ್ದು, ಅವರ ಮೇಲೆ ಶ್ರದ್ಧೆ ಇಟ್ಟು ನಡೆದಾಗ ನಮ್ಮೆಲ್ಲರ ಬದುಕು ಪಾವನವಾಗುತ್ತದೆ ಮತ್ತು ಸುಂದರವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಜೈರಾಜ ಪಾತ್ರೆ, ಕಲ್ಲಪ್ಪ ದಾನಾ, ಅಶೋಕ ಬಾವುಗೆ, ರಾಜಕುಮಾರ ಪಾರಶೆಟ್ಟೆ, ನಾಗಶೆಟ್ಟಿ, ಜಗನ್ನಾಥ, ಶರಣಪ್ಪ ಬಸನಾಳೆ, ಎಸ್.ಎಸ್. ಚಲುವಾ, ಅಶೋಕ ಮಡ್ಡೆ, ನರಸಿಂಗ ರಾಜೋಳೆ, ಅಶೋಕ ತಳವಾಡೆ, ನೀಲಕಂಠ, ಯಶ್ವಂತ ಪಾಟೀಲ್, ರಮೇಶ ಚಿದ್ರೆ, ಬಾಬುರಾವ ಬಿರಾದಾರ್, ಮಹೇಶ್ ಸೇರಿದಂತೆ ಹಲವರು ಇದ್ದರು.

# ಸಂಭ್ರಮದ ಶ್ರೀ ರಾಮ ನವಮಿ



• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ**

ಪಟ್ಟಣದ ಹನುಮಾನ ಮಂದಿರದಲ್ಲಿ ಗುರುವಾರ ಶ್ರೀ ರಾಮ ನವಮಿಯನ್ನು ಅತ್ಯಂತ ಶ್ರದ್ಧಾ-ಭಕ್ತಿ ಹಾಗೂ ಸಡಗರದಿಂದ ಆಚರಿಸಲಾಯಿತು.

ಶ್ರೀ ರಾಮ ನವಮಿ ನಿಮಿತ್ತ ಮುಂಜಾನೆಯಿಂದಲೇ ಮಂದಿರದಲ್ಲಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಶ್ರೀ ರಾಮ, ಲಕ್ಷ್ಮಣ, ಸೀತಾ ಮಾತೆ ಹಾಗೂ ಹನುಮಂತ ದೇವರಿಗೆ ವಿಶೇಷ ಅಭಿಷೇಕ, ಅಲಂಕಾರ ಪೂಜೆಗಳನ್ನು ನೆರವೇರಿಸಲಾಯಿತು. ಶ್ರೀರಾಮನ ಮೂರ್ತಿಯನ್ನು ಬೆಳ್ಳಿ ತೊಟ್ಟಿಲಿಗೆ ಹಾಕಿ ಸಕಲ ವಿಧಿವಿಧಾನಗಳೊಂದಿಗೆ 'ತೊಟ್ಟಿಲು ಕಾರ್ಯಕ್ರಮ' ಮಾಡಲಾಯಿತು.

ಕಮಲನಗರ ಸೇರಿದಂತೆ ತಾಲೂಕಿನ ವಿವಿಧ ಹಳ್ಳಿಗಳಲ್ಲಿ ಶ್ರೀ ರಾಮನ ಪೂಜೆ, ತೊಟ್ಟಿಲು ಕಾರ್ಯಕ್ರಮ ನಡೆದವು. ಈ ಸಂದರ್ಭದಲ್ಲಿ ಹನುಮಾನ ಮಂದಿರ ಅರ್ಚಕ ನಾಗಯ್ಯ ಸ್ವಾಮಿ ಮಾತನಾಡಿ,

ಮನುಕುಲಕ್ಕೆ ಸನ್ಮಾರ್ಗ ತೋರಿದ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನ ಗುಣಗಳು ಇಂದಿನ ಸಮಾಜಕ್ಕೆ ಅತ್ಯಗತ್ಯ ಎಂದು ಹೇಳಿದರು.

ವಿಶ್ವ ಹಿಂದೂ ಪರಿಷತ್ ಹನುಮಾನ್ ಮಂದಿರ ಹಾಗೂ ಮಿನಿ ಬಸ್ ನಿಲ್ದಾಣದ ಹತ್ತಿರ ಭಕ್ತಾದಿಗಳಿಗಾಗಿ ಮಹಾ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿತ್ತು. ನೂರಾರು ಭಕ್ತರು ಸರದಿಯಲ್ಲಿ ನಿಂತು ಭಕ್ತಿಯಿಂದ ಪ್ರಸಾದ ಸ್ವೀಕರಿಸಿದರು. ಈ ಕಾರ್ಯಕ್ರಮದಲ್ಲಿ ಪಟ್ಟಣದ ಗಣ್ಯರು ಹಾಗೂ ನೂರಾರು ಭಕ್ತಾದಿಗಳು ಪಾಲ್ಗೊಂಡು ಶ್ರೀರಾಮನ ಕೃಪೆಗೆ ಪಾತ್ರರಾದರು.

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



• **ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ**

ಇಲ್ಲಿನ ಮಾತಾ ಮಹಾದೇವಿ ಕಲ್ಯಾಣ ಮಂಟಪದಲ್ಲಿ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಖಿಐಊಕ) ಮೈಸೂರು ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ

ಕಾರ್ಯಕ್ರಮ ವನ್ನು ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಮೇಶ್ ಸುಲಿಪಿ ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿ ನಮ್ಮ ದೇಶದಲ್ಲಿ ಮಹಿಳೆಯರಿಗೆ ವಿಶೇಷ ಸ್ಥಾನಮಾನವಿದ್ದು, ಪೂಜ್ಯನಿಯ ಭಾವನೆಯಿಂದ ನೋಡಲಾಗುತ್ತೆ, ಹಾಗೆಯೆ ಸರಕಾರವು

ಅನೇಕ ಸೌಲಭ್ಯಗಳನ್ನು ನೀಡುವುದರ ಮೂಲಕ ಮಹಿಳೆಯರನ್ನು ಸಬಲರನ್ನಾಗಿ ಮಾಡುತ್ತಿದೆ, ಮಹಿಳೆಯರು ಕೂಡ ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡುತ್ತಾ ಮುನ್ನುಗ್ಗುತ್ತಿದ್ದಾರೆ, ಕಂಪ್ಯೂಟರ್ ತರಬೇತಿ ಪಡೆದ ಎಲ್ಲಾ ಹೆಣ್ಣು ಮಕ್ಕಳು ಯಾವುದಾದರೂ ಒಂದು ಕೆಲಸದಲ್ಲಿ ತೊಡಗಿಸಿ ಕೊಳ್ಳಬೇಕು ಎಂದರು.

ವಿಜಯಲಕ್ಷ್ಮಿ ಹೂಗಾರ ಮಾತನಾಡಿ ಮಹಿಳೆಯರಿಗೆ ಅನೇಕ ಕಾಯ್ದೆ ಕಾನೂನುಗಳು ಬಂದರೂ ಕೂಡ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ, ಅತ್ಯಾಚಾರ, ಲೈಂಗಿಕ ಶೋಷಣೆಗಳು ನಿಲ್ಲುತ್ತಿಲ್ಲ, ಆದರೆ ಮಹಿಳೆಯರು ಈ ಎಲ್ಲಾ ಸಮಸ್ಯೆಯಿಂದ ಮೇಲೆದ್ದು ಬರಲು ಕಾನೂನನ್ನು ಸರಿಯಾಗಿ ತಿಳಿದುಕೊಂಡಿರಬೇಕು, ಅದೆ ರೀತಿ ಮಹಿಳೆಯರ ಮೇಲೆ ದೌರ್ಜನ್ಯ ಆದರೆ ತಕ್ಷಣ ಪೊಲೀಸ್ ಸಹಾಯ ಪಡೆದು ರಕ್ಷಣೆ ಪಡೆಯಬೇಕು ಎಂದು ತಿಳಿಸಿದರು.

ಪೊಲೀಸ್ ಅಕ್ಕಾ ಪಡೆಯ ಲಕ್ಷ್ಮಿ ಬಿರಾದರ ಅವರು ಮಾತನಾಡಿ ಕರ್ನಾಟಕ ಸರಕಾರವು ಬೀದರ ಜಿಲ್ಲೆಯಲ್ಲಿ ಮಹಿಳೆಯರ ಮತ್ತು ಶಾಲಾ ಕಾಲೇಜಿಗೆ ಹೋಗುವ ಹುಡುಗಿಯರ ರಕ್ಷಣೆಗಾಗಿ ಅಕ್ಕ ಪಡೆ ತಂಡವನ್ನು ರಚಿಸಲಾಗಿದೆ, ಯಾವುದೆ ಹುಡುಗಿ ತಮಗೆ ಅಸುರಕ್ಷಿತ ಭಾವನೆ ಉಂಟಾದರೆ ತಕ್ಷಣಕ್ಕೆ ನಮ್ಮ ಸಹಾಯ ಪಡೆಯಬಹುದು ಎಂದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶ್ರೀದೇವಿ ಬಿರಾದರ, ಪಂಚಾಯತ ಅಭಿವೃದ್ಧಿ ಅಧಿಕಾರಿ ಚಂದ್ರಮ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಿಯಾಂಕ ಮತ್ತು ಮಹೇಶ್ವರಿ, ಖಿಐಊಕ ಸಂಸ್ಥೆಯ ಸಿಬ್ಬಂದಿಯಾದ ಯಮುನಾ, ಉಷಾ, ಸ್ನೇಹಲತಾ ಮೇತ್ರೆ, ನಾಗಮ್ಮ, ಪ್ರಿಯಾಂಕ, ವೈಷ್ಣವಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಸಂಸ್ಥೆಯ ಯೋಜನಾ ಸಂಯೋಜಕರಾದ ನಾಗರಾಜ್ ಶೀಲವಂತ ನಿರೂಪಿಸಿದರು.

# ಪರಮಾತ್ಮನ ಪ್ರೀತಿಗಾಗಿ ಪುಣ್ಯ ಪ್ರಾಪ್ತಿ ಅಗತ್ಯ: ಶಿವಕುಮಾರ ಶ್ರೀ



> "ಮನುಷ್ಯನಾಗಿ ಹುಟ್ಟಿದಮೇಲೆ ಕಾಯಾ, ವಾಚಾ, ಮನಸ್ಸಾ ಇನ್ನೊಬ್ಬರಿಗೆ ಕೆಟ್ಟದ್ದನ್ನು ಬಯಸದೇ ಎಲ್ಲರಿಗೂ ಒಳ್ಳೆಯದನ್ನು ಬಯಸುವ ಕರ್ಮಮಾಡಬೇಕು. ಅಂದಾಗ ಮಾತ್ರ ದೈವತ್ವದ ಕಡೆ ಸಾಗಲು ಸಾಧ್ಯ.
>
> **ಡಾ|ಶಿವಕುಮಾರಮಹಾಸ್ವಾಮಿಗಳು, ಚಿದಂಬರಾಶ್ರಮ ಬೀದರ.**

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ಪರಮಾತ್ಮ ಹಾಗು ಗುರುವಿನ ಪ್ರೀತಿಗೆ ಪಾತ್ರರಾಗಬೇಕಾದರೆ ಪುಣ್ಯಪ್ರಾಪ್ತಿ ಮಾಡಿಕೊಳ್ಳುವುದು ಅತ್ಯವಶ್ಯಕವಾಗಿದೆ ಎಂದು ಚಿದಂಬರಾಶ್ರಮ ಶ್ರೀ ಸಿದ್ಧಾರೂಢ ಮಠದ ಡಾ|ಶಿವಕುಮಾರ ಮಾಹಾಸ್ವಾಮಿಗಳು ಪ್ರತಿಪಾದಿಸಿದರು.



ತಾಲೂಕಿನ ಚಳಕಾಪೂರ ಗ್ರಾಮದ ಬ್ರಹ್ಮವಿದ್ಯಾಶ್ರಮ ಶ್ರೀ ಸಿದ್ಧಾರೂಢರ ಮಠದಲ್ಲಿ ಸದ್ಗುರು ಶ್ರೀ ಸಿದ್ಧಾರೂಢರ 190ನೇ ಜಯಂತಿ ಮಹೋತ್ಸವ ನಿಮಿತ್ಯ ಆಯೋಜಿಸಿದ್ದ 5ನೇ ದಿನದ ಜ್ಞಾನದಾಸೋಹ ಪ್ರವಚನ ಕರ್ಯಕ್ರಮದ ಸಾನಿಧ್ಯವಹಿಸಿ ಅವರು ಮಾತನಾಡಿದರು. ಪರಮಾತ್ಮ ಮತ್ತು ಗುರುವಿನ ಪ್ರೀತಿ ಗಳಿಸಲು ಪುಣ್ಯಪ್ರಾಪ್ತಿ ಮಾಡಿಕೊಳ್ಳಬೇಕು. ಪ್ರತಿನಿತ್ಯ ದೇವರ ಕರುಣೆ ಪಡೆಯುವ ಕರ್ಯಮಾಡಬೇಕು. ಮನುಷ್ಯನಿಗೆ ಗೊತ್ತಿದ್ದು ಮಾಡುವ ತಪ್ಪು ಕರ್ಯಗಳೇ ಪಾಪಗಳಾಗಿವೆ. ಗೊತ್ತಿದ್ದು ಮಾಡುವ ತಪ್ಪಿಗೆ ಕ್ಷಮೆ ಇಲ್ಲ. ತಿಳಿಯದೇ ಮಾಡುವ ತಪ್ಪಿಗೆ ದೇವರು ಕ್ಷಮಿಸಬಹುದು. ಆದರೆ ತಿಳಿದೂ ಮಾಡುವ ತಪ್ಪಿಗೆ ಎಂದಿಗೂ ಕ್ಷಮೆ ಇರುವುದಿಲ್ಲ. ಗೊತ್ತಿದ್ದು ಮಾಡುವ ತಪ್ಪು ನಾವು ಭೊಗಿಸಲೇ ಬೇಕು. ನಮಗೆ ಯಾರು ಏನು ಮಾಡಬಾರದು ಎಂದೆನ್ನುಕೊಳ್ಳುತ್ತೇವೆಯೋ ಅದನ್ನು ನಾವು ಬೆರೆಯವರಿಗೆ ಮಾಡಬಾರದು. ನಾವು ಯಾರಿಂದ ಏನು ಬಯಸುತ್ತೇವೆಯೋ ಅದನ್ನು ಇನ್ನೊಬ್ಬರಿಗೆ ಮಾಡಬೇಕು. ಇವೇ ಪಾಪ ಪುಣ್ಯಗಳಾಗಿವೆ ಎಂದು ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿಯ ನೀತಿ ಕ್ರಿಯಾರ್ಯ ಸ್ಥಳದ ಪಧ್ಯವನ್ನಾಧರಿಸಿ ಮತನಾಡಿ, ನೆರೆದ ಜನಸ್ತೋಮವನ್ನು ಭಕ್ತಿಭಾವದಲ್ಲಿ ತೇಲಿಸಿದರು. ಸಿದ್ಧಾರೂಢಮಠ ಮಲ್ಲಾಪೂರದ ಮಾತೋಶ್ರೀ ಆನಂದಮಯಿತಾಯಿ ಮಾತನಾಡಿ, ಈ ಶರೀರ ಪುನ: ಲಭಿಸುವುದಿಲ್ಲ,

> "ಶ್ರೀ ಸಿದ್ಧಾರೂಢರ ರಥೋತ್ಸವ ಇಂದು
>
> **ಸದ್ಗುರು ಶ್ರೀ ಸಿದ್ಧಾರೂಢರ ಜಾತ್ರಾಮಹೋತ್ಸವ ಅಂಗವಾಗಿ ಮಾ.27 ರಂದು ಶುಕ್ರವಾರ ಸಾಯಂಕಾಲ 5 ಗಂಟೆಗೆ ವಾದ್ಯ ವೃಂದಗಳೊಂದಿಗೆ ಸದ್ಗುರು ಶ್ರೀ ಸಿದ್ಧಾರೂಢರ ರಥೋತ್ಸವ ನಡೆಯುವುದು. ರಥೋತ್ಸವವು ಸದ್ಗುರು ಶ್ರೀ ಸಿದ್ಧಾರೂಢರ ಮಂದಿರದಿಂದ ಹೊರಟು, ಚಳಕಾಪುರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಶ್ರೀ ಆಂಜನೇಯ (ಹನುಮಾನ) ದೇವಸ್ಥಾನದ ಮೂಲಕ ಸದ್ಗುರು ಶ್ರೀ ಸಿದ್ಧಾರೂಢರ ಮಂದರಿದಲ್ಲಿ ಸಮಾವೇಶ ಗೊಳ್ಳುವುದು.**

ಮನುಷ್ಯ ಶರೀರ ಇರುವವರೆಗೆ ಪುಣ್ಯವನ್ನೇ ಮಾಡಬೇಕು ಎಂದು ಹೇಳಿದರು. ಕಲಬುರಗಿಯ ಮಾತೋಶ್ರೀ ಲಕ್ಷ್ಮಿ [illegible]ದೇವಿತಾಯಿ, ಸೋಲಾಪೂರದ ಶ್ರೀ ಜಡಿಸಿದ್ದೇಶ್ವರ ಸ್ವಾಮಿಗಳು, ಸಿದ್ಧಾರೂಢ ಮಠ ಚಳಕಾಪೂರದ ಶ್ರೀ ಶಂಕರಾನಂದ ಸ್ವಾಮಿಗಳು, ಗುರುದೇವಾಶ್ರಮ ಬೀದರಿನ ಮಾತೋಶ್ರೀ ಸಿದ್ದೇಶ್ವರಿ ತಾಯಿ, ಬಬಚ್ಚಡಿಯ ಶ್ರೀ ಗಣೇಶಾನಂದ ಮಹಾರಾಜರು, ಬ್ಯಾಲಹಳ್ಳಿಯ ಶ್ರೀ ನಾಗಯ್ಯಾ ಸ್ವಾಮಿಗಳು, ಬುದ್ನಿಯ ಶ್ರೀ ಸಿದ್ಧಾನಂದ ಸ್ವಾಮಿಗಳು, ವಿಜಯಪುರದ ಶ್ರೀ ವೀರುಪಾಕ್ಷ ಸ್ವಾಮಿಗಳು, ಕಲ್ಲಹಂಗರಗಾದ ಶ್ರೀ ಗೋಪಾಲ ಶಾಸ್ತ್ರಿಗಳು "ದುರಿತವನೆಳ್ಳಿನಿತಾದರು ನೇತಿಗಳೆವುದೇ ಚಂದಮಮ" ಎನ್ನುವ ವಿಷಯದ ಮೇಲೆ ಪ್ರವಚನ ಮಾಡಿದರು. ಬೆಳ್ಳುರಿನ ಮಾತೋಶ್ರೀ ಅಮೃತಾನಂದ ಮಯಿ, ಮಳಚಾಪೂರದ ಶ್ರೀ ಸದ್ರೂಪಾನಂದ ಭಾರತಿ ಸ್ವಾಮಿಗಳು, ಪರ್ಣಾನಂದ ಸ್ವಾಮಿಗಳು, ಶರಣಾನಂದ ಸ್ವಾಮಿಗಳು, ಮಾಧವಾನಂದ ಸ್ವಾಮಿಗಳು, ವಿನಾಯಕ ಸಾಧಕರು, ನರೇಂದ್ರ ಪಾಟೀಲ ಉಪಸ್ಥಿತರಿದ್ದರು. ಇದೇವೇಳೆ ಪ್ರಸಾದ ದಾನಿಗಳಾದ ಶಿವಕುಮಾರ ಮಾಯನಳ್ಳಿ, ಅನೀಲಕುಮಾರ ಮಾಯಿನಳ್ಳಿ, ವಿಜಯಕುಮಾರ ಮಾಯಿನಳ್ಳಿ, ರಾಜಕುಮಾರ ಮಾಯಿನಳ್ಳಿ ಕರಡ್ಯಾಳ, ಶೋಭಾ ಚಂದ್ರಶೇಖರ ಸಂಗೊಳಗಿ, ರಮೇಶ ಬಿರಾದಾರ ಹಿರೇಬೆನ್ನೂರ ರವರಿಗೆ ಶ್ರೀಮಠದಿಂದ ಸತ್ಕರಿಸಿ ಗೌರವಿಸಲಾಯಿತು. ರಾಣಿಶ್ರೀ ಶಶಿಕಾಂತ ಬಸವಕಲ್ಯಾಣ, ಶೈಲಾ ಸುನೀಲ ದಸ್ಯಾ, ಪರ್ವತಿ ವಿರಶೆಟ್ಟಿ, ಅನ್ನಪರ್ಣ ಕೊಳಾರ, ಶೋಭಾವತಿ ಘಾಳೆಪ್ಪ, ಅಭಿರಾಜ ಸಚಿನ ರವರಿಂದ ಶ್ರೀ ಸಿದ್ಧಾರೂಢರ ಮರ್ತಿ ತುಲಾಭಾರ ಸೇವೆ ಮಾಡಲಾಯಿತು. ಹಾಗು ಶಿವಕುಮಾರೇಶ್ವರ ಗುರುಕುಲ ಬೀದರನ ವಿದ್ಯರ್ಥಿಗಳಿಂದ ದೇವಿ ನೃತ್ಯ ಮತ್ತು ಸಿದ್ದಾರೂಢರ ಹಾಡಿಗೆ ನೃತ್ಯ ಮಾಡಲಾಯಿತು. ಶ್ರೀ ಶಿವಕುಮಾರ ಮಹಾಸ್ವಾಮಿಗಳ ದಿವ್ಯ ನೇತೃತ್ವದಲ್ಲಿ ಶ್ರೀ ಸಿದ್ದಾರೂಢರ ಕಥಾಮೃತ ಗ್ರಂಥ ಪಾರಾಯಣ ಮಾಡಲಾಯಿತು.

# ಮಹೇಶರೆಡ್ಡಿ ಮುದ್ನಾಳಗೆ ಮಲ್ಲುಸ್ವಾಮಿ ಗುಡಿಮಠ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಭಾರತೀಯ ಜನತಾ ಪಾರ್ಟಿಯ ರಾಜ್ಯ ಕಾರ್ಯಕಾರಣಿ ಸದಸ್ಯರಾಗಿ ಆಯ್ಕೆಯಾದ ಮಹೇಶರಡ್ಡಿ ವೆಂಕಟರಡ್ಡಿ ಮುದ್ನಾಳ ಅವರಿಗೆ ಮಲ್ಲು ಸ್ವಾಮಿ ಗುಡಿಮಠ ಗುರಸಣಗಿ ಅವರು ಸನ್ಮಾನಿಸಿ ಶುಭ ಕೋರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಲ್ಲು ಸ್ವಾಮಿ ಅವರು, ಮಹೇಶರೆಡ್ಡಿ ಮುದ್ನಾಳ ಅವರ ಸಂಘಟನಾ ಚತುರತೆ ಮತ್ತು ಸದಾ ಜನರ ಸೇವೆಯಲ್ಲಿ ತೊಡಗುವ ಅವರ ಗುಣವು ಪಕ್ಷಕ್ಕೆ ದೊಡ್ಡ ಆಸ್ತಿಯಾಗಿದೆ ಅವರ

ನೇಮಕದಿಂದ ಜಿಲ್ಲೆಯಲ್ಲಿ ಪಕ್ಷದ ಸಂಘಟನೆ ಮತ್ತಷ್ಟು ಸದೃಢಗೊಳ್ಳಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಮುಖಂಡರಾದ ಮಲ್ಲಣ್ಣಗೌಡ ಹತ್ತಿಕುಣಿ, ಬಿಜೆಪಿ ಕಾರ್ಯದರ್ಶಿ ಪರ್ವತರೆಡ್ಡಿ ಬೆಂಡೆಗಂಬಳಿ, ಚನ್ನವೀರೈಯ್ಯ ಸ್ವಾಮಿ ಕೌಳೂರು,

ರುದ್ರಸ್ವಾಮಿ, ಬಸಯ್ಯಸ್ವಾಮಿ ಹಾಗೂ ಮಾಜಿ ನಗರಸಭೆ ಸದಸ್ಯ ಸ್ವಾಮಿದೇವ ದಾಸನಕೇರಿ ಅವರು ಉಪಸ್ಥಿತರಿದ್ದು ನೂತನ ಪದಾಧಿಕಾರಿಯನ್ನು ಅಭಿನಂದಿಸಿದರು. ಈ ವೇಳೆ ಗುರಸಣಗಿಯ ಯುವಕರಾದ

ರವಿಕುಮಾರ್, ರಮೇಶ್, ಮಲ್ಲು ಕಿರಳದೊರ್, ಹಳ್ಳೆಪ್ಪ ಖಿ ಹಾಗೂ ಸಿದ್ದು ಗೌಡ ಸೇರಿದಂತೆ ಹಲವು ಕಾರ್ಯಕರ್ತರು ಉಪಸ್ಥಿತರಿದ್ದರು.



# ಇಂಧನ ಅಭಾವವಿಲ್ಲ, ಅನಗತ್ಯ ವದಂತಿಗಳಿಗೆ ಕಿವಿಗೊಡಬೇಡಿ; ಸಾಹುಕಾರ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ನಗರದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಕೊರತೆಯ ವದಂತಿಗೆ ಜನರು ಆತಂಕಗೊಂಡು ಪೆಟ್ರೋಲ್ ಪಂಪ್‌ಗಳತ್ತ ಮುಗಿ ಬೀಳುತ್ತಿರುವ ದೃಶ್ಯಗಳು ಕಂಡು ಬರುತ್ತಿವೆ. ನಗರದ ಪೆಟ್ರೋಲ್ ಪಂಪ್ ಸೇರಿದಂತೆ ಬಹುತೇಕ ಪಂಪ್‌ಗಳಲ್ಲಿ ವಾಹನ ಸವಾರರು ದೀರ್ಘ ಸಾಲಿನಲ್ಲಿ ನಿಂತು ಇಂಧನಕ್ಕಾಗಿ ಕಾಯುತ್ತಿರುವುದು ಕಂಡುಬರುತ್ತಿದೆ.

ಕಳೆದ ಕೆಲವು ದಿನಗಳಿಂದ ಹಬ್ಬಿರುವ ಪೆಟ್ರೋಲ್ ಕೊರತೆಯ ವದಂತಿಗಳಿಗೆ ನಗರದ ಪೆಟ್ರೋಲ್ ಬಂಕ್ ಮಾಲೀಕರು ತೆರೆ ಎಳೆದಿದ್ದಾರೆ. ಯಾದಗಿರಿ ನಗರದಾದ್ಯಂತ ಇಂಧನ ಸರಬರಾಜು ಸುಗಮವಾಗಿದ್ದು, ಯಾವುದೇ ರೀತಿಯ ಪೆಟ್ರೋಲ್ ಅಥವಾ ಡೀಸೆಲ್ ಶಾರ್ಟೇಜ್ ಇಲ್ಲ ಎಂದು ಪೆಟ್ರೋಲ್ ಬಂಕ್ ಮಾಲೀಕರು ಸ್ಪಷ್ಟಪಡಿಸಿದ್ದಾರೆ.

ನಮ್ಮ ಕೇಂದ್ರ ಸರಕಾರದ ದೂರದೃಷ್ಟಿ ಹಾಗೂ ಇಂಧನ ಪೂರೈಸುವ ರಾಷ್ಟಗಳ ಜೊತೆ ಉತ್ತಮ ರಾಜತಾಂತ್ರಿಕ ಸಂಬಂಧ ಹೊಂದಿದ ಫಲವಾಗಿ, ಬೇರೆಲ್ಲಾ ಅನೇಕ ರಾಷ್ಟಗಳಲ್ಲಿ ಇಂಧನದ ಸಮಸ್ಯೆಗಳು ಉಂಟಾಗಿದ್ದರೂ ಕೂಡ ನಮ್ಮ ದೇಶ ಹಾಗೂ ರಾಜ್ಯದಲ್ಲಿ ಯಾವುದೇ ಸಮಸ್ಯೆ ಉಂಟಾಗದಿರುವುದಕ್ಕೆ ನರೇಂದ್ರ ಮೋದಿಜಿ ಅವರ ಸರ್ಕಾರದ ದಿಟ್ಟ ಆಡಳಿತವೇ ಇದಕ್ಕೆ ಕಾರಣ ಎಂದು ಬಣ್ಣಿಸಿದರು.



ವಾಹನ ಸವಾರರು ಆತಂಕಕ್ಕೆ ಒಳಗಾಗಿ ಬಂಕ್‌ಗಳ ಮುಂದೆ ಸಾಲುಗಟ್ಟಿ ನಿಲ್ಲುವ ಅವಶ್ಯಕತೆ ಇಲ್ಲ. ಯಾದಗಿರಿ ಜಿಲ್ಲೆಯ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಸಾಕಷ್ಟು ಇಂಧನ ಲಭ್ಯವಿದ್ದು, ಜನಸಾಮಾನ್ಯರು ಎಂದಿನಂತೆ ಇಂಧನ ಪಡೆದುಕೊಳ್ಳಿ. ಎಂದು ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಮನವಿ ಮಾಡಿಕೊಂಡಿದ್ದಾರೆ..

# ಉಸ್ತುವಾರಿಯಾಗಿ ನೇಮಕ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಈಗಾಗಲೇ ಘೋಷಣೆಯಾಗಿರುವ ಬಾಗಲಕೋಟೆ ವಿಧಾನಸಭೆ ಉಪ ಚುನಾವಣೆಯ ಹಿನ್ನೆಲೆಯಲ್ಲಿ ಕೆಪಿಸಿಸಿ ಹಿಂದುಳಿದ ವಿಭಾಗದ ರಂಗನಗೌಡ ಪಾಟೀಲ್ ದೇವಿಕೇರಿ ರವರನ್ನು ಉಪ ಚುನಾವಣೆಯ ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಉಸ್ತುವಾರಿಯನ್ನಾಗಿ ನೇಮಕ ಮಾಡಲಾಗಿದ್ದು ಕೆಪಿಸಿಸಿ ಹಿಂದುಳಿದ ವಿಭಾಗದ ರಾಜ್ಯಧ್ಯಕ್ಷರಾದ ಮಧು ಬಂಗಾರಪ್ಪ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ರವರು ನನ್ನ ಸಂಘಟನಾ ಚತುರತೆ ಕಂಡು ನನಗೆ ಈ ಉನ್ನತ ಜವಾಬ್ದಾರಿಯನ್ನು ನೀಡಿದ್ದು ನಾನು ಬಾಗಲಕೋಟೆ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಾಮಾಣಿಕವಾಗಿ ಚುನಾವಣೆ ಪ್ರಚಾರ ಮಾಡಿ ಸರ್ಕಾರದ ಸಾಧನೆಗಳನ್ನು ಜನರಿಗೆ ತಿಳಿಸಿ ಹಿಂದುಳಿದ ವರ್ಗಗಳ ಮತಗಳನ್ನು ಸೆಳೆದು ನಮ್ಮ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸುವುದಾಗಿ ಕೆಪಿಸಿಸಿ ಹಿಂದುಳಿದ ವಿಭಾಗದ ರಾಜ್ಯ ಕಾರ್ಯದರ್ಶಿ ರಂಗನಗೌಡ ಪಾಟೀಲ್ ದೇವಿಕೇರಿ ತಿಳಿಸಿದ್ದಾರೆ.

# ಸಿಲೆಂಡರ್, ಡಿಸಲ್ ಪೆಟ್ರೋಲ್ ಕೊರತೆ ಇಲ್ಲ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಮಧ್ಯ ಪ್ರಾಚ್ಯ ಯುದ್ಧದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಅಡುಗೆ ಅನಿಲ ಹಾಗೂ ಡೀಸೆಲ್ ಪೆಟ್ರೋಲ್ ಕೊರತೆ ಉಂಟಾಗಲಿದೆ ಎಂಬ ವದಂತಿಯನ್ನು ಯಾರು ನಂಬಬಾರದು ತಾಲೂಕಿನಲ್ಲಿ ಅಡುಗೆ ಅನಿಲ ಡೀಸೆಲ್ ಪೆಟ್ರೋಲ್ ಸಮಸ್ಯೆ ಇಲ್ಲಾ ಎಂದು ತಹಸೀಲ್ದಾರ್ ಶ್ರೀಮತಿ ಮಂಗಳಾ ಎಂ ಸ್ಪಷ್ಟಪಡಿಸಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಗ್ಯಾಸ್ ಸಿಲೆಂಡರ್ ಸಿಗುವುದಿಲ್ಲ ಎಂದು ಸಾರ್ವಜನಿಕರು ಭಯ ಬಿದ್ದು ಇಂಡಿಯನ್ ಗ್ಯಾಸ್ ಏಜೆನ್ಸಿ ಮುಂದೆ ಜನಗಳು ಸಾಲಗಟ್ಟಿ ನಿಂತಿದ್ದು ಇಂಡಿಯನ್ ಗ್ಯಾಸ್ ಏಜೆನ್ಸಿ ಮತ್ತು ಪೆಟ್ರೋಲ್ ಬಂಕ್ ಮಾಲೀಕರಿಂದ ಮಾಹಿತಿ ಪಡೆದಿದ್ದು ಗ್ಯಾಸ್ ಡೀಸೆಲ್ ಪೆಟ್ರೋಲ್ ಸಮಸ್ಯೆ ಇಲ್ಲ ಆದರೆ ಜನರೇ ಭಯಗೊಂಡು ಪೆಟ್ರೋಲ್ ಬಂಕ್ ಸಿಲೆಂಡರ್ ಗ್ಯಾಸ್ ಏಜೆನ್ಸಿಗಳ ಮುಂದೆ ಮುಗಿ ಬೀಳುತ್ತಿದ್ದಾರೆ ಎಂದು ಮಾಲೀಕರು ತಿಳಿಸಿದ್ದಾರೆ.ಯಾವುದೇ ಆತಂಕ ಬೇಡ ಮನೆಯಲ್ಲಿಯೇ ಕುಳಿತು ಸಿಲಿಂಡರ್ ಗಳನ್ನು ಬುಕ್ ಮಾಡಿ ಏಜೆನ್ಸಿ ಅವರೇ ನಿಮ್ಮ ಮನೆಗಳಗೆ ತಲುಪಿಸುವಂತೆ ತಿಳಿಸಲಾಗಿದೆ ಯಾವುದೇ ರೀತಿಯ ಸಿಲಿಂಡರ್ ಗಳ ಕೊರತೆ ಇಲ್ಲ ಮನೆ ಮನೆಗೆ ಸಿಲೆಂಡರ್ ಸರಬರಾಜು ವ್ಯವಸ್ಥೆಯನ್ನು ಕಟ್ಟು ನಿಟ್ಟಾಗಿ ಪಾಲಿಸುವಂತೆ ಏಜೆನ್ಸಿ ಗಳಿಗೆ ಸೂಚನೆ ನೀಡಲಾಗಿದೆ ಎಂದು ತಹಸೀಲ್ದಾರ್ ಶ್ರೀಮತಿ ಮಂಗಳಾ ಎಂ ತಿಳಿಸಿದ್ದಾರೆ.

# ಶಾಂತಿಯುತ ನಡೆದ ಸಂತೆ ಬಹಿರಂಗ ಟೆಂಡರ್ ಪ್ರಕ್ರಿಯೆ



• ಮಲ್ಲಮ್ಮ ನುಡಿ ವಾರ್ತೆ, ಕುರುಗೋಡು

ಪಟ್ಟಣದ ಪುರಸಭೆ ಕಾರ್ಯಾಲಯ ಸಭಾಂಗಣದಲ್ಲಿ 2026–27ನೇ ಸಾಲಿನ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಸೆಕ್ಷನ್ 244 ರ ಪ್ರಕಾರ ವಾರದಸಂತೆ ಮತ್ತು ದಿನದ ಸಂತೆ ಬಹಿರಂಗ ಟೆಂಡರ್/ಹರಾಜು ಪ್ರಕ್ರಿಯೆ ಎಲ್ಲಾ ಬಿಡ್ಡುದಾರರ/ ಗುತ್ತಿಗೆದಾರರ ಸಮಕ್ಷದಲ್ಲಿ ಶಾಂತಿಯುತವಾಗಿ ಜರುಗಿತು.

ಹರಾಜು ಪ್ರಕ್ರಿಯೆಯಲ್ಲಿ ಕುರುಗೋಡು ಪುರಸಭೆ ಮುಖ್ಯಾಧಿಕಾರಿ ದತ್ತಾತ್ರೆಯಹೆಗೆಡೆ ಅವರು ಮಾತನಾಡಿ, ಹರಾಜು/ಟೆಂಡರ್ ಅವಧಿ 12 ತಿಂಗಳು ಅಂದರೆ 01.13.2026 ರಿಂದ 31. 03.2027ರ ವರೆಗೆ ಅವಧಿಯಲ್ಲಿರುತ್ತದೆ. ಗುತ್ತಿಗೆದಾರರು ಸಂತೆ-ಯ ಬಯಲಿನಲ್ಲಿ 4 ದಿಕ್ಕಿಗೂ ಕರದ ವಿವರದ ನಾಮಫಲಕವನ್ನು ಕನ್ನಡದಲ್ಲಿ ಬರೆಯಿಸಿ ತೂಗು ಹಾಕತಕ್ಕದ್ದು, ಮತ್ತು ವಾರದ ಮತ್ತು ದಿನದ ಮಾರುಕಟ್ಟೆ ಆವರಣದಲ್ಲಿ ಸ್ವಚ್ಛವಾಗಿಟ್ಟುಕೊಳ್ಳತಕ್ಕದ್ದು ಎಂದು ಸಲಹೆ ನೀಡಿದರು. ಜೊತೆಗೆ ಮಾರುಕಟ್ಟೆ ದಿನ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಗುತ್ತಿಗೆದಾರರು ಷಡ್ಯೂಲ್ ದರಕ್ಕಿಂತ ಹೆಚ್ಚು ಧರ ವಸೂಲಿ ಮಾಡಬಾರದು, ಪುರಸಭೆ ನಿಗದಿಪಡಿಸಿದ ಧರವನ್ನೇ ವಸೂಲಿಮಾಡಬೇಕು ಎಂದು ಗುತ್ತಿಗೆದಾರರಿಗೆ ಸಲಹೆ ನೀಡಿದರು.

ದಿನದಸಂತೆ ಬಹಿರಂಗ ಟೆಂಡರ್/ ಹರಾಜು ಪ್ರಕ್ರಿಯೆಯಲ್ಲಿ ದಿನದಸಂತೆ ಹರಾಜು ಬಿಡ್ಡುದಾರರಾದ/ ಗುತ್ತಿಗೆದಾರರಾದ ಎಸ್.ಶಫೀರ್ ಅವರು ರೂ.6,90000ಕ್ಕೆ ಸವಾಲು ಮಾಡಿ ಹರಾಜನ್ನು/ ಟೆಂಡರ್‌ನ್ನು ತಮ್ಮದಾಗಿಸಿಕೊಂಡರು. ಮತ್ತು ವಾರದ ಸಂತೆ ಬಹಿರಂಗ ಹರಾಜು/ಟೆಂಡರ್ ಪ್ರಕ್ರಿಯೆಯಲ್ಲಿ ಕೂಡ ಗುತ್ತಿಗೆದಾರರಾದ ಎಸ್.ಶಫೀರ್ ಅವರು 1,70000 ಲಕ್ಷಕ್ಕೆ ಸವಾಲು ಮಾಡಿ ಹರಾಜನ್ನು ತಮ್ಮದಾಗಿಸಿಕೊಂಡರು.

ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಗುತ್ತಿಗೆದಾರರಾದ ಎಸ್.ಶಫೀರ್, ಕೆ.ಶಿವಪ್ರಸಾದ್, ಪಿ.ಶಿವಕುಮಾರ್, ಸೋಮಸೇಖರಗೌಡ, ಉಪ್ಪಾರುಸೋಮಶೇಖರ ಅವರು ಭಾಗವಹಿಸಿದ್ದರು. ಪುರಸಭೆ ಆರ್‌ಒ. ನಾಗರಾಜ, ಪುರಸಭೆ ಆರ್‌ಐ. ರಾಜೇಶ, ಮೋಹನ್‌ಶಾಸ್ತ್ರಿ, ಹುಲಿಗೆಮ್ಮ, ಜಡಿಮೂರ್ತಿ, ವಿಜಯ್ ಸೇರಿದಂತೆ ಪುರಸಭೆಯ ಸಿಬ್ಬಂದಿವರ್ಗದವರು, ಪುರಸಭೆ ಸದಸ್ಯರು ಇದ್ದರು.

## ಸಿಲಿಂಡರ್ ಗ್ಯಾಸ್ ಇಂಧನ ಕೊರತೆ ಇಲ್ಲ

# ನಗರದ ವಿವಿಧ ಇಂಧನ ನಿಲ್ದಾಣಗಳಿಗೆ ಡಿಸಿ,ಎಸ್‌ಪಿ ಭೇಟಿ



"ಡಿಸಿ ಹರ್ಷಲ್ ಭೋಯರ್ ಅವರ ಮಾರ್ಗದರ್ಶನದಲ್ಲಿ ಇಡಿ ಜಿಲ್ಲೆಯ ಎಲ್ಲ ಸಿಲಿಂಡರ್ ಗ್ಯಾಸ್ ವಿತರಣಾ ಕೇಂದ್ರ ಮತ್ತು ಇಂಧನ ನಿಲ್ದಾಣದಗಳಿಗೆ ಆಹಾರ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸುತ್ತಿದ್ದಾರೆ. ಎಲ್ಲೂ ಕೊರತೆ,ಅಭಾವವಿಲ್ಲ.

ಸೋಮಶೇಖರ ಬಿರಾದಾರ
ಡಿಡಿ, ಆಹಾರ ಇಲಾಖೆ,ಯಾದಗಿರಿ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ನಗರದಲ್ಲಿ ಕಳೆದ ಎರಡು ದಿನಗಳಿಂದ ಪೆಟ್ರೋಲ್, ಡೀಸೆಲ್ ಅಭಾವದ ವದಂತಿ ಬೆನ್ನಲ್ಲೇ ,ಗುರುವಾರ ಬೆಳಿಗ್ಗೆ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ , ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಆಹಾರ ನಾಗರಿಕ ಸರಬರಾಜು ಇಲಾಖೆ ಡಿಡಿ ಸೋಮಶೇಖರ ಬಿರಾದಾರ ಅವರು ನಗರದ ವಿವಿಧಡೆ ಭೇಟಿ ನೀಡಿ ಪರಿಶೀಲಿಸಿದರು.

ಇಲ್ಲಿನ ಡಾನ್ ಬೋಸ್ಕೋ ಶಾಲೆ ಸಮೀಪದ ಸಿಲಿಂಡರ್ ಗ್ಯಾಸ್ ವಿತರಣಾ ಅಂಗಡಿಗೆ ಭೇಟಿ ನೀಡಿ ಅಡುಗೆ ಅನಿಲ,ವಾಣಿಜ್ಯ ಸಿಲಿಂಡರ್ ಸ್ಟಾಕ್ ಬಗ್ಗೆ ಪರಿಶೀಲಿಸಿದರು. ಗ್ರಾಹಕರಿಗೆ ಯಾವುದೇ ರೀತಿಯಿಂದ ತೊಂದರೆಯಾಗಬಾರದು,ಬ್ಲಾಕ್ ನಲ್ಲಿ ವಾಣಿಜ್ಯ ಸಿಲಿಂಡರ್ ಮಾರಾಟ ಆಗದಂತೆ ಎಚ್ಚರವಹಿಸಿ ಎಂದು ಡಿಸಿ ಹೇಳಿದರು. ನಂತರ ಸುಭಾಸ್ ಸರ್ಕಲ್ ಬಳಿ ಇರುವ ಹಾಗೂ ಶಾಸ್ತ್ರಿ ಸರ್ಕಲ್ ಬಳಿ ಮುದ್ನಾಳ್ ಬಂಕ್ ಗಳಿಗೆ ಭೇಟಿ ನೀಡಿದ ಅವರು, ಅಲ್ಲಿ ಇಂಧನ ಸ್ಟಾಕ್ ಇರುವ ಬಗ್ಗೆ ಮಾಹಿತಿ ಪಡೆದರು.ಈ ವೇಳೆ ಅಲ್ಲಿದ್ದ ಬಂಕ್ ಮಾಲಿಕ ರಾಚಣ್ಣಗೌಡ ಮುದ್ನಾಳ್ ಅವರು, ಬಂಕ್ ಗಳಲ್ಲಿ ಇಂಧನ ಸ್ಟಾಕ್ ಇದೆ. ಈ ಬಗ್ಗೆ ಜನರಿಗೆ ಹೇಳಿದರೂ ಕೇಳುವ ವ್ಯವಧಾನ ಇಲ್ಲದೇ ಮುಗಿಬಿದ್ದು ತೆಗೆದುಕೊಂಡು ಹೋಗಿದ್ದಾರೆಂದರು. ಯಾವುದೇ ಕಾಣರಕ್ಕೂ ವದಂತಿಗಳಿಗೆ ಕಿವಿ ಕೊಡಬೇಡಿ, ಪೆಟ್ರೋಲ್ ಬಂಕ್ ಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಸಾಕಷ್ಟು ಲಭ್ಯತೆ ಇದ್ದು, ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿರುವ ವಿಡಿಯೋ ಹಾಗೂ ಫೋಟೋಗಳ ಕುರಿತು ಜನರು ಆತಂಕದಿಂದ ಜಮಾಯಿಸಿದ್ದಾರೆ ಹೊರತು ನಿಜಾಂಶದಲ್ಲಿ ಯಾವುದೇ ಕೊರತೆ ಇಲ್ಲ ಎಂದು ಈ ವೇಳೆ ಡಿಸಿ ಹರ್ಷಲ್ ಭೋಯರ್ ಸ್ಪಷ್ಟನೆ ನೀಡಿದರು. ಈ ಸಂದರ್ಭದಲ್ಲಿ ದರಪಟ್ಟಿ ಪರಿಶೀಲನೆ ನಡೆಸಿ,ಯಾವುದೇ ಕಾರಣಕ್ಕೂ ಸಹ ಕ್ಯಾನ್, ಬ್ಯಾರಲ್ ಗಳಿಗೆ ಪೆಟ್ರೋಲ್ ಫಿಲ್ ಮಾಡಬೇಡಿ ಎಂದು ಡಿಸಿ ತಿಳಿಸಿದರು.ಸುಳ್ಳು ವದಂತಿ ಸೃಷ್ಟಿಸಿದರೇ ಕ್ರಮ. ಈ ವೇಳೆ ಮಾತನಾಡಿದ ಎಸ್ಪಿ ಪೃಥ್ವಿಕ್ ಶಂಕರ್, ಈ ಕುರಿತು ಸುಳ್ಳು ಸುದ್ದಿ ಹರಡಿಸಬಾರದು,ಹಾಗೇ ಒಂದು ವೇಳೆ ಯಾರಾದರೂ ಮಾಡಿದ್ದು ಕಂಡು ಬದರೇ ಕಾನೂನು ಕ್ರಮ ಜರುಗಿಸಲಾಗುವುದೆಂದರು.

# ಮೊಬೈಲ್ ಬಳಕೆ ಕಡಿಮೆ, ಓದು ಹೆಚ್ಚಿಸಲು ವಿಕ್ರಮಪುರ ಓದುಗರ ಬಳಗ ಆರಂಭ

• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ



ಪಟ್ಟಣದಲ್ಲಿ ವಿಕ್ರಮಪುರ ಓದುಗರ ಬಳಗದ ಶುಭಾರಂಭ ಹಾಗೂ ಅಮರ ಕನ್ನಡ ಕೃತಿ ಅವಲೋಕನ ಕಾರ್ಯಕ್ರಮವನ್ನು ಮಾರ್ಚ್ 29ರಂದು ರವಿವಾರ ಸಂಜೆ 5 ಗಂ–ಟೆಗೆ ನಾರಾಯಣಪುರ ರಸ್ತೆಯ ಶ್ರೀ ನೀಲಕಂಠೇಶ್ವರ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಾಹಿತ್ಯಾಸಕ್ತ ಮಹೇಶ ಸ್ಥಾವರಮಠ ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿ ಪ್ರತೀ ತಿಂಗಳು ಒಂದು ದಿನ ಸಾಹಿತಿಗಳು, ಓದುಗರು ಹಾಗೂ ಸಾಹಿತ್ಯಾಸಕ್ತರು ಒಂದೇ ವೇದಿಕೆಯಲ್ಲಿ ಸೇರಿ ಪುಸ್ತಕ ಓದುವಿಕೆ, ಓದಿದ ಕೃತಿಗಳ ಕುರಿತು ಚರ್ಚೆ ನಡೆಸುವ ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ ಎಂದು ಅವರು ಹೇಳಿದರು.

ಈ ಬಳಗದ ಮೂಲಕ ತಾಲೂಕಿನ ವಿಶಿಷ್ಟ ಸ್ಥಳಗಳು, ವ್ಯಕ್ತಿಗಳು ಹಾಗೂ ಇತಿಹಾಸಗಳ ಕುರಿತು ವಿಚಾರ ಸಂಕಿರಣಗಳನ್ನು ನಡೆಸುವುದು, ಸ್ಥಳೀಯ ಬರಹಗಾರರನ್ನು ಪರಿಚಯಿಸಿ ಪ್ರೋತ್ಸಾಹಿಸುವುದು ಹಾಗೂ ಹೊಸ ಓದುಗರಿಗೆ ವೇದಿಕೆ ಕಲ್ಪಿಸುವ ಉದ್ದೇಶ ಹೊಂದಲಾಗಿದೆ ಎಂದು ಶಿಕ್ಷಕ ದೇವರಾಜ ಕುಲಕರ್ಣಿ ತಿಳಿಸಿದ್ದಾರೆ. ಮೊಬೈಲ್‌ನ ಅತಿಯಾದ ಬಳಕೆಯನ್ನು ಕಡಿಮೆ ಮಾಡಿ ಓದುವ ಹವ್ಯಾಸ ಬೆಳೆಸುವ ಚಿಂತನೆಯೂ ಈ ಬಳಗದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ಕಾರ್ಯಕ್ರಮಕ್ಕೆ ಬಲಶೆಟ್ಟಿಹಾಳದ ವಿರಕ್ತಮಠದ ಸಿದ್ಧಲಿಂಗಯ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಯಾದಗಿರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿದ್ದಪ್ಪ ಹೊಟ್ಟಿ, ಹಿರಿಯ ಸಾಹಿತ್ಯಾಸಕ್ತ ಮನೋಹರರಾವ್ ದ್ಯಾಮನಾಳ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವೆಂಕಟಗಿರಿ ದೇಶಪಾಂಡೆ, ಹಿರಿಯ ಸಾಹಿತಿ ಬಸಣ್ಣ ಗೊಡ್ರಿ, ಸ್ಮರಣ ಸಂಚಿಕೆ ಸಂಪಾದಕ ಪಾಟೀಲ ಬಸನಗೌಡ ಹಾಗೂ ಸಗರನಾಡು ಸೇವಾ ಪ್ರತಿಷ್ಠಾನದ ಅಧ್ಯಕ್ಷ ಪ್ರಕಾಶ ಅಂಗಡಿ ಭಾಗವಹಿಸಲಿದ್ದಾರೆ.

ಶ್ರೀ ನೀಲಕಂಠೇಶ್ವರ ಪೂರ್ವ ಪ್ರಾಥಮಿಕ ಶಾಲೆಯ ಅಧ್ಯಕ್ಷ ಬಸವರಾಜ ವೈಲಿ ಅಧ್ಯಕ್ಷತೆ ವಹಿಸಲಿದ್ದು, ಕಾರ್ಯಕ್ರಮವನ್ನು ಸುನೀಲ ಚಂದಾ, ನಾಗರಾಜ ಸೂಗೂರು, ಯಂಕನಗೌಡ ಅರಕೇರಿ, ಆನಂದ ಬಾರಿಗಿಡದ ಮತ್ತು ವಿನೋದ ದೊರೆ ನಿರ್ವಹಿಸಲಿದ್ದಾರೆ.

# ದರ್ಗಾಕ್ಕೆ 3 ಕಂಚಿನ ಕಳಸ ಸಮರ್ಪಣೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ತಾಲೂಕಿನ ಯರಗೋಳದ ಜಮಲೋದ್ದೀನ ದರ್ಗಾಕ್ಕೆ ನಿವೃತ ಮುಖ್ಯಗುರು ಚಂದ್ರಪ್ಪ ಗುಂಜನೂರ ರವರು ಯರಗೋಳದ ಸರ್ಕಾರಿ ಪ್ರೌಢ ಶಾಲೆ ಮುಖ್ಯಗುರುಗಳಾಗಿ ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸಿ ಇತ್ತೀಚೆಗೆ ನಿವೃತ್ತಿಯಾದ ಹಿನ್ನೆಲೆಯಲ್ಲಿ ಯರಗೋಳದ ಜಮಲೋದ್ದೀನ ದರ್ಗಾಕ್ಕೆ ಎರಡು ಕಂಚಿನ ಕಳಸಗಳನ್ನು ಭಕ್ತಿಪೂರ್ವಕವಾಗಿ ಸಮರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಸರ್ಕಾರಿ ಪ್ರೌಢಶಾಲೆ ಸಿಬ್ಬಂದಿಗಳು ಹಾಗೂ ಯರಗೋಳ ಗ್ರಾಮದ ಹಿರಿಯ ಮುಖಂಡರು ಮತ್ತು ದರ್ಗಾದ ಸದ್ಭಕ್ತರು ಇದ್ದರು.

# ವಿಕಲಚೇತನರ ಕುಂದು ಕೊರತೆ ಸಭೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಜಿಲ್ಲಾಡಳಿತ, ಜಿಲ್ಲಾಪಂಚಾಯತ್, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ತಾಲೂಕು ಪಂಚಾಯತ್ ಹುಣಸಗಿ ಹಾಗೂ ೧ಠಭಿಚಿ–ಣುಂಟ ಠಜಿ ಕಜಂಠಿಟಜ ತಿಣು ಋಚಿಭುಟುಣಥಿ (ಂಕಆ) ಇವರ ಸಂಯುಕ್ತಾಶ್ರಯದಲ್ಲಿ ಹುಣಸಗಿ ತಾಲೂಕು ಪಂಚಾಯತಿಯಲ್ಲಿ ವಿಕಲಚೇತನರ ಕುಂದು–ಕೊರತೆ ಸಭೆಯನ್ನು ಬಸಣ್ಣ ನಾಯಕ, ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಯಿತು. ಈ ಕುಂದು–ಕೊರತೆ ಸಭೆಯಲ್ಲಿ ತಾಲೂಕಿನ ವಿವಿಧ ಗ್ರಾಮ ಪಂಚಾಯತಿಗಳಿಂದ ಆಗಮಿಸಿದ ವಿಕಲಚೇತನರು ತಮ್ಮ ಸಮಸ್ಯೆಗಳು ಹಾಗೂ ಅಗತ್ಯತೆಗಳನ್ನು ಹಂಚಿಕೊಂಡರು. ತಾಲೂಕಿನ ಖಕಆ ಟಾಸ್ಕ್ ಫೋರ್ಸ್ ಅಧ್ಯಕ್ಷರಾದ ಶ್ರೀಯುತ ಕಾಸಿಂ ಸಾಬ್ ಅವರು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಅಡೆತಡೆರಹಿತ (ಃಚಿಡಿ–ಡಿಜಡಿ–ಈಡಿಜಜ) ವಾತಾವರಣ ನಿರ್ಮಿಸಬೇಕೆಂದು ಪ್ರಸ್ತಾಪಿಸಿದರು. ಅದೇರೀತಿಯಾಗಿ, ಗ್ರಾಮಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಇತರೆ ಇಲಾಖೆಗಳಲ್ಲಿರುವ 5% ಅನುದಾನವನ್ನು ಸಮರ್ಪಕವಾಗಿ ಬಳಸಬೇಕೆಂದು ಒತ್ತಾಯಿಸಿದರು. ಹಾಗೂ ಂಕಆ ಸಂಸ್ಥೆಯ ನೀತಿ ಮತ್ತು ವಕಾಲತ್ತು ವಿಭಾಗದ ಅಧಿಕಾರಿಗಳಾದ ಶ್ರೀಯುತ ನಾಗಪ್ಪ ಅವಟೆ ಅವರು 2016ರ ಅಂಗವಿಕಲರ ಹಕ್ಕುಗಳ ಕಾಯ್ದೆ, 5% ಅನುದಾನದ ಸಮರ್ಪಕ ಬಳಕೆ ಹಾಗೂ ಕ್ರಿಯಾಯೋಜನೆ ತಯಾರಿಸುವ ಬಗ್ಗೆ ವಿವರಿಸಿದರು. ಜೊತೆಗೆ ವಿಕಲಚೇತನರಿಗೆ ಅಗತ್ಯವಾದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ವೈದ್ಯಕೀಯ ನೆರವುಗಳ ಕುರಿತು ತಿಳಿಸಿದರು. ಕಾರ್ಯಕ್ರಮದಲ್ಲಿ ಹುಣಸಗಿ ತಾಲೂಕಿನಲ್ಲಿರುವ 3,651 ವಿಕಲಚೇತನರ ಅಗತ್ಯತೆಗಳನ್ನು ಈಗಾಗಲೇ ಗುರುತಿಸಿರುವುದಾಗಿ ಂಕಆ ಸಂಸ್ಥೆಯ ತಾಲೂಕು ಸಂಯೋಜಕರಾದ ಶ್ರೀಯುತ ಚನ್ನವೀರ ಅವರು ಪ್ರಸ್ತಾಪಿಸಿದರು. ಜೊತೆಗೆ

ಸಮನ್ವಯದಿಂದ ಕಾರ್ಯನಿರ್ವಹಿಸಿದರೆ ವಿಕಲಚೇತನರ ಅಭಿವೃದ್ಧಿ ಮತ್ತು ಮುಖ್ಯವಾಹಿನಿಗೆ ಸೇರ್ಪಡೆ ಸಾಧ್ಯವೆಂದು ಹೇಳಿದರು.

ಸಭೆಯಲ್ಲಿ ವಿವಿಧ ಸಮಸ್ಯೆಗಳು, ಅಗತ್ಯತೆಗಳು ಮತ್ತು ಯೋಜನೆಗಳ ಬಗ್ಗೆ ಚರ್ಚೆ ನಡೆಸಲಾಯಿತು. ಸಭೆಯಲ್ಲಿ ವ್ಯಕ್ತವಾದ ಎಲ್ಲಾ ಸಮಸ್ಯೆಗಳನ್ನು ಆಲಿಸಿದ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವುಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದಾಗಿ ಭರವಸೆ ನೀಡಿದರು. ಈ ಸಭೆಯಲ್ಲಿ ತಾಲೂಕಿನ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಲೂಕು ಯೋಜನಾ ಅಧಿಕಾರಿಗಳು, ಸಹಾಯಕ ನಿರ್ದೇಶಕರು(ತಾಲೂಕು ಪಂಚಾಯಿತಿ, ಹುಣಸಗಿ), ಶ್ರೀಮತಿ ರೇಣುಕಾ ಬಿರಾದಾರ ತಾಲೂಕು ಮಟ್ಟದ ಅಂಗವಿಕಲರ ಸಂಘಟನೆಯಾದ ಖಕಆ ಟಾಸ್ಕ್ ಜಿಂಡಿಥಿಜ ಕಾರ್ಯದರ್ಶಿ, ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕರ್ತರು, ಸ್ವಸಹಾಯ ಸಂಘದ ಸದಸ್ಯರು ಹಾಗೂ ಖಕಆ ಟಾಸ್ಕ್ ಫೋರ್ಸ್‌ನ ಕಾರ್ಯದರ್ಶಿಗಳು ಮತ್ತು ಸದಸ್ಯರು ಇದ್ದರು. ಕಾರ್ಯಕ್ರಮದವನ್ನು ಸೋಮಶೇಖರ ನಿರೊಪಿಸಿ ವಂದಿಸಿದರು.

# ತೃತೀಯ ಭಾಷೆ ಪರೀಕ್ಷೆ ಮಾ.31ಕ್ಕೆ ಮುಂದೂಡಿಕೆ

ಕಲಬುರಗಿ: ಮಹಾವೀರ ಜಯಂತಿ ಪ್ರಯುಕ್ತ ಸಾರ್ವತ್ರಿಕ ರಜೆಯನ್ನು ಇದೇ ಮಾ.31ರ ಬದಲಾಗಿ ಮಾ.30ಕ್ಕೆ ಸರ್ಕಾರಿ ರಜೆ ಘೋಷಿಸಿ ಸರ್ಕಾರ ಮಾರ್ಪಡಿಸಿ ಆದೇಶ ಹೊರಡಿಸಿದ್ದರಿಂದ ಇದೇ ಮಾ.30ಕ್ಕೆ (ಸೋಮವಾರ) ನಿಗದಿಯಾಗಿದ್ದ ಎಸ್.ಎಸ್.ಎಲ್.ಸಿ. ತೃತೀಯ ಭಾಷೆ ವಿಷಯದ ಪರೀಕ್ಷೆಯು ಮಾ.31ಕ್ಕೆ (ಮಂಗಳವಾರಕ್ಕೆ) ಮುಂದೂಡಲಾಗಿದೆ.

ಮಾರ್ಚ್ 31ರಂದು ಈಗಾಗಲೇ ನಿಗಧಿಪಡಿಸಿರುವ ಅವಧಿಯಲ್ಲಿ ಪರೀಕ್ಷೆ ನಡೆಯಲಿದೆ. ಉಳಿದ ವಿಷಯದ ಪರೀಕ್ಷೆಗಳು ವೇಳಾಪಟ್ಟಿಯಂತೆ ಯಥಾವತ್ತಾಗಿ ನಡೆಯಲಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏ,11ಕ್ಕೆ ವೀರಶೈವ ಲಿಂಗಾಯತ ಚುನಾವಣೆ




• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ತಾಲೂಕಿನ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರು – ಉಪಾಧ್ಯಕ್ಷರು ಸದಸ್ಯರುಗಳು ಏಪ್ರಿಲ್ 11ರಂದು ಚುನಾವಣೆ ನಡೆಯಲಿದೆ ಎಂದು ಸಮಾಜದ ಅಧ್ಯಕ್ಷ ಪಂಪನಗೌಡ ತಾವರಗೇರಾ ತಿಳಿಸಿದರು

ಬುಧವಾರನಗರದಪತ್ರಿಕಾಸುದ್ದಿಗೋಷ್ಠಿಯಲ್ಲಿ ಮಾತನಾಡಿದರು ಐದು ವರ್ಷಕ್ಕೊಮ್ಮೆ ನಡೆಯುವ

ಈ ಚುನಾವಣೆ. 25–26 ರ ಆಡಳಿತ ಆಯ್ಕೆಗೆ ಪೂರಕವಾಗಿ ಚುನಾವಣೆ ನಡೆಯಲಿದೆ. ಅಧ್ಯಕ್ಷಗಾಗಿ

01 ಸ್ಥಾನ. ಉಪಾಧ್ಯಕ್ಷ 03 ಸ್ಥಾನ ಪೈಕಿ ಒಂದು ಮಹಿಳಾ ಮೀಸಲು ಹಾಗೂ ಕಾರ್ಯಕಾರಿ ಸಮಿತಿ ಮಂಡಳಿಗೆ 27 ಸ್ಥಾನ ಚುನಾವಣೆ. ಹಾಗೂ ಒಟ್ಟಾರೆ ವೀರಶೈವ ಲಿಂಗಾಯತ ಬೈಲಾ ಪ್ರಕಾರ ಚುನಾವಣೆನಡೆಯಲಿದೆಎಂದುತಿಳಿಸಿದರು

ಸಮಾಜದಒಟ್ಟು1611ಮತದಾರರ ಇದ್ದಿದ್ದು.ಚುನಾವಣೆಅಧಿಕಾರಿಯಾಗಿ ನಿವೃತ್ತಿ ಮುಖ್ಯ ಗುರುಗಳು ಬಿ. ರವಿಯಪ್ಪನೇಮಕಕೊಂಡಿದ್ದಾರೆ. ನಾಮ ಪತ್ರಸಲ್ಲಿಸಿ ಕೊನೆ ದಿನಾಂಕ ಮಾರ್ಚ್ 30–31ರಂದು ಬೆಳಗ್ಗೆ 10 ಯಿಂದ 4. ಗಂಟೆ ವರೆಗೆ ನಾಮ ಪತ್ರ ಸಲ್ಲಿಸಲು ಅವಕಾಶ ಇರುತ್ತದೆ ಅವತ್ತೇ ನಾಮ ಪತ್ರ ವಾಪಾಸ್ ಪಡೆಯಲು ಅವಕಾಶ ಇರುತ್ತದೆ.

ಮತದಾನ ಸಂಜೆ ವರೆಗೆ ನಡೆಯಲಿದೆ. ಅವತ್ತೇ ಮತ ಎಣಿಕೆ ಮಾಡಿ ತಾಲೂಕು ಅಧ್ಯಕ್ಷ ಅಭ್ಯರ್ಥಿಯನ್ನು ಘೋಷಣೆ ಮಾಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ. ಸಮಾಜದ ಹಿರಿಯರಾದ ರಾಜಶೇಖರ ಪಾಟೀಲ

ಅಮರೇಶಪ್ಪ ಕುಂಬಾರ. ವಿರೇಂದ್ರ ಪ್ರಸಾದ್ ಹಂಪಯ್ಯ ಸ್ವಾಮಿ ರಾವಿಹಾಳ. ಎಲ್ ಅಮರೇಶಪ್ಪ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು.

# ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ

• **ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು**

ಇದೇ ಮಾರ್ಚ್ 31ರಂದು ಮಂಗಳವಾರ ಸಂಜೆ 5 ಗಂಟೆಗೆ ಪಟ್ಟಣದ ಶ್ರೀ ದೊಡ್ಡ ಹನುಮಂತದೇವರದೇವಸ್ಥಾನದಮುಂಭಾಗದಲ್ಲಿ ವಿಜೃಂಭಣೆಯಿಂದ ಆಚರಿಸಲು ಸಿದ್ಧತೆಗಳು ನಡೆಯುತ್ತಿವೆ.

ಈ ಕುರಿತು ಲಿಂಗಸುಗೂರ ಪಟ್ಟಣದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ತಾಲೂಕು ಕ್ಷತ್ರಿಯ ಸಮಾಜದ ಒಕ್ಕೂಟದ ತಾಲೂಕು ಅಧ್ಯಕ್ಷರಾದ ಸತ್ಯನಾರಾಯಣ ಸಿಂಗ್, ಕಾರ್ಯಕ್ರಮದ ವಿವರಗಳನ್ನು ಹಂಚಿಕೊಂಡರು.

ಕಾರ್ಯಕ್ರಮದ ಅಂಗವಾಗಿ ಮಧ್ಯಾಹ್ನ 2 ಗಂಟೆಗೆ ಶ್ರೀ ಲಕ್ಷ್ಮೀ ದೇವಸ್ಥಾನದಿಂದ ಭವ್ಯ ಬೈಕ್ ರ್ಯಾಲಿ ಪ್ರಾರಂಭವಾಗಿ, ಬಸ್ ನಿಲ್ದಾಣ, ಪಶು ಆಸ್ಪತ್ರೆ, ಪೋಲಿಸ್ ಠಾಣೆ ಮಾರ್ಗವಾಗಿ ಸಾಗುತ್ತಾ ಕಾರ್ಯಕ್ರಮದ ವೇದಿಕೆ ತಲುಪಲಿದೆ ಎಂದು ತಿಳಿಸಿದರು.

ಈ ಸಮಾರಂಭವು ಲಿಂಗಸುಗೂರು ಕ್ಷೇತ್ರದ ಶಾಸಕ ಮಾನಪ್ಪ ವಜ್ಜಲ ಅವರ ಉಪಸ್ಥಿತಿಯಲ್ಲಿ ನಡೆಯಲಿದ್ದು, ದೇವಭೂಪೂರಿನ ಶ್ರೀ ಷ.ಬ್ರ ಅಮರೇಶ್ವರ ಗುರುಗಳಾದ ಅಭಿನವ ಗಜದಂಡ ಮಹಾಸ್ವಾಮಿಗಳು ಅವರ ದಿವ್ಯ ಸಾನಿಧ್ಯ




ಲಭಿಸಲಿದೆ. ಮಾಜಿ ಕೇಂದ್ರ ಸಚಿವರು ಹಾಗೂ ವಿಜಯಪುರ ಕ್ಷೇತ್ರದ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಬೀದರಿನ ಖ್ಯಾತ ವಕೀಲ ಈಶ್ವರಸಿಂಗ್ ಅವರು ದಿಕ್ಸೂಚಿ ಭಾಷಣ ಮಾಡಲಿದ್ದು, ಕಾರ್ಯಕ್ರಮಕ್ಕೆ ಅಧ್ಯಕ್ಷತೆಯನ್ನು ಸತ್ಯನಾರಾಯಣ ಸಿಂಗ್ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಕೇಂದ್ರ ಸಚಿವರಾದ ಬಸವರಾಜ ಪಾಟೀಲ ಅನ್ವರಿ, ಕೆಕೆಆರ್‌ಡಿಬಿ ಅಧ್ಯಕ್ಷರಾದ ಡಾ. ಅಜಯಕುಮಾರಸಿಂಗ್, ಮಾಜಿ ಸಚಿವರಾದ ಅಮರೇಗೌಡ ಪಾಟೀಲ ಬಯ್ಯಾಪೂರು, ವಿಧಾನ ಪರಿಷತ್ ಸದಸ್ಯರಾದ ಶರಣಗೌಡ ಪಾಟೀಲ ಬಯ್ಯಾಪೂರು, ಮಾಜಿ ಶಾಸಕರಾದ ಡಿ.ಎಸ್. ಹೂಲಗೇರಿ, ಬಿಜೆಪಿ ಮುಖಂಡರಾದ ಆರ್. ರುದ್ರಯ್ಯ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಪಾಮಯ್ಯ ಮುರಾರಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ತಾಲೂಕಿನ ಸಮಸ್ತ ಕ್ಷತ್ರಿಯ ಕುಲಬಾಂಧವರು, ಹಿಂದೂಪರ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ರವಿಕುಮಾರ, ಮೋಹನಬಾಬು, ಚಂದಪ್ಪ ಕಟ್ಟಿಮನಿ, ದುರ್ಗಾಸಿಂಗ್, ಗೌತಮ್ ಕುಮಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಬಸವಕಲ್ಯಾಣ : – ತಾಲೂಕಿನ ಅಲಗೂಡ ಸರಕಾರಿ ಪ್ರಾಢಶಾಲೆಯಲ್ಲಿ ಆದ್ಯ ವಚನಕಾರ ಶರಣ ಜೇಡರ ದಾಸಿಮಯ್ಯ ನವರ ಜಯಂತಿಉತ್ಸವ ನಿಮಿತ್ಯ ಅವರ ಭಾವಚಿತ್ರಕೆ ಹೂವುಮಾಲೆ ಹಾಕಿ ಶಿಕ್ಷಕರಾದ ನಾಗಪ್ಪ ನಿಣ್ಣೆ ಯವರು ದಾಸಿಮಯ್ಯ ನವರ ಕುರಿತು ಮಕ್ಕಳಿಗೆ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಅತಿಥಿ ಶಿಕ್ಷಕರಾದ ರಾಮ ಅವರಾದೆ. ಹರ್ಷವರ್ಧನ ಕಾಂಬಳೆ. ಸರಸ್ವತಿ ಗೌಡೆ. ಓಂಕಾರ ಬಿರಾದಾರ.ಹಾಗೂ ಗೀತಾ ಪದ್ಮೇ ಸೇರಿದಂತೆ ಅನೇಕರು ಉಪಸ್ತಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)



ಬಸವಕಲ್ಯಾಣ :– ಇಲ್ಲಿನ ಹೂಗಾರ ಸಮಾಜಕ್ಕೆ ನಿವೇಶನ ಕಲ್ಪಿಸುವಂತೆ ಅಖಿಲ ಕರ್ನಾಟಕ ಹೂಗಾರ ಮಹಾಸಭಾದ ಜಿಲ್ಲಾ ಅಧ್ಯಕ್ಷರಾದ ರಾಜಕುಮಾರ ಹೂಗಾರ್ ನೇತೃತ್ವದಲ್ಲಿ ಮುಖಂಡರ ನಿಯೋಗದಿಂದ ಶಾಸಕರಾದ ಶರಣು ಸಲಗರ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷರಾದ ವಿಠ್ಠಲ್ ಹೂಗಾರ ಗದಲೇಗಾಂವ. ಲಕ್ಷ್ಮೀಬಾಯಿ ಪಾಟೀಲ. ಶಂಕರ ಹೂಗಾರ. ರೇಖಾ ಹೂಗಾರ. ಹನುಮಂತ ಹೂಗಾರ. ರವಿ ಹೂಗಾರ. ಲೋಕೇಶ ಹೂಗಾರ. ಸಂಜುಕುಮಾರ ಹೂಗಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ).

# ಒಳಮೀಸಲಾತಿ ಜಾರಿಗಾಗಿ ಕಂಪ್ಲಿಯಲ್ಲಿ ಬೃಹತ್ ಪ್ರತಿಭಟನೆ



• **ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ :**

ಕೂಡಲೇ ಒಳಮೀಸಲಾತಿ ಜಾರಿಗೊಳಿಸಬೇಕೆಂದು ಆಗ್ರಹಿಸಿ, ಮಾದಿಗ ಒಳಮೀಸಲಾತಿ ಹೋರಾಟ ಸಮಿತಿ ಕಂಪ್ಲಿ ತಾಲೂಕು ಘಟಕದಿಂದ ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಬುಧವಾರ ಬೃಹತ್ ಪ್ರತಿಭಟನೆ ನಡೆಸಿದರು.

ಮೊದಲಿಗೆ ಉದ್ಭವ ಗಣೇಶ ದೇವಸ್ಥಾನದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿ, ಒಳಮೀಸಲಾತಿ ಜಾರಿಗಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಾಗಿ, ನಡುವಲ ಮಸೀದಿ, ಡಾ.ರಾಜಕುಮಾರ ರಸ್ತೆ, ಮಾರೆಮ್ಮ ಗುಡಿ, ಅಂಬೇಡ್ಕರ್ ವೃತ್ತದಲ್ಲಿ ತಲುಪಿ ಪ್ರತಿಭಟಿಸಿ, ನಂತರ ಕಂದಾಯ ನಿರೀಕ್ಷಕ ಜಗದೀಶ ಇವರಿಗೆ ಮನವಿ ಪತ್ರದ ಮೂಲಕ ಸರ್ಕಾರಕ್ಕೆ ಹಕ್ಕೊತ್ತಾಯ ಮಾಡಿದರು.

ಯುವ ಮುಖಂಡ ಡಿಸ್ ಪ್ರಸಾದ್ ಮಾತನಾಡಿ, ಮಾದಿಗ ಸಮುದಾಯವು ಸೇರಿದಂತೆ ಪರಿಶಿಷ್ಟ ಜಾತಿಯಲ್ಲಿರುವ ಹಲವು ಸಮುದಾಯಗಳು ಮೀಸಲಾತಿಯಲ್ಲಿ ಅನ್ಯಾಯಕ್ಕೆ ಒಳಗಾಗಿರುವುದನ್ನು ಮನಗಂಡು ಹಲವು ವರ್ಷಗಳಿಂದ ಒಳಮೀಸಲಾತಿಗಾಗಿ ಹಕ್ಕೊತ್ತಾಯ ಮಾಡುತ್ತಲೇ ಬಂದಿದ್ದಾರೆ. ಸರ್ಕಾರಗಳು ಯಾವುದೇ ಕಾಳಜಿ ತೋರದ ಹಿನ್ನಲೆ ಸುಮಾರು 35 ವರ್ಷಗಳಿಂದ ದೇಶದಾದ್ಯಂತ ಒಳಮೀಸಲಾತಿ ಜಾರಿಗಾಗಿ ತೀವ್ರತರದ ಹೋರಾಟ ಮಾಡಿದ್ದೇವೆ. ಹಲವು ಆಯೋಗಗಳು ರಚನೆಗೊಂಡು ಅಧ್ಯಾಯನ ಮಾಡಿ ಮೀಸಲಾತಿಯಲ್ಲಿ ಆಗುತ್ತಿರುವ ತಾರತಮ್ಯಗಳನ್ನು ಸ್ಪಷ್ಟವಾಗಿ ಗುರುತಿಸಿ ಈ ಅನ್ಯಾಯವನ್ನು ಸರಿಪಡಿಸಲು ಅನೇಕ ಶಿಫಾರಸ್ಸುಗಳನ್ನು ನೀಡಿವೆ. ಆದರೂ, ಸರಕಾರಗಳು ಯಾವುದೇ ವರದಿ ಅಂಗೀಕರಿಸಿ ಒಳಮೀಸಲಾತಿ ಜಾರಿ ಮಾಡಿ ಅನ್ಯಾಯಕ್ಕೆ ಒಳಗಾದ ಸಮುದಾಯಗಳಿಗೆ ನ್ಯಾಯ ಕೊಡುವ ಧೈರ್ಯ ತೋರಿಲ್ಲ. 2025 ಭಾರತದ ಘನ ಸರ್ವೋಚ್ಚ ನ್ಯಾಯಲಯವು ,ಒಳಮೀಸಲಾತಿ ಅಳವಡಿಸಿ ಮೀಸಲಾತಿ ನೀಡುವುದನ್ನು ಆಯಾಯ ರಾಜ್ಯಗಳ ಹೊಣೆಗಾರಿಕೆ ಎಂದು ತೀರ್ಪು ನೀಡಿದ ನಂತರ ಹಲವು ರಾಜ್ಯಗಳು ಪ್ರತ್ಯೇಕ ಆಯೋಗಗಳನ್ನು ರಚಿಸಿ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನ ಮಾಡಿವೆ. ಹಾಗೆಯೇ ಕರ್ನಾಟಕ ಸರಕಾರವೂ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದಲ್ಲಿ ಆಯೋಗ ರಚನೆ ಮಾಡಿ ವರದಿ ಪಡೆದುಕೊಂಡಿ–ದೆ. ವರದಿಯನ್ನು ಅಂಗೀಕರಿಸಿ ಒಳಮೀಸಲಾತಿ ಕಾಯ್ಕೆಯನ್ನು ಅಂಗೀಕರಿಸಿದ ಅದಕ್ಕನುಗುಣವಾಗಿ ಶೇಕಡ 25ರಷ್ಟು ಪರಿಶಿಷ್ಟ ಜಾತಿಯ ಮೀಸಲಾತಿಯಲ್ಲಿ ಶೇಕಡ 6 ರಷ್ಟು ಮೀಸಲಾತಿಯನ್ನು ಮಾದಿಗ ಮತ್ತು ಸಂಬಂಧಿತ ಸಮುದಾಯಗಳಿಗೆ ಕೂಡಲೇ ಜಾರಿಗೊಳಿಸಬೇಕು ಹಾಗೂ ಒಳ

'ಮೀಸಲಾತಿಒಪ್ಪದಸಮುದಾಯಗಳನ್ನು ಮತ್ತೊಂದು ಗುಂಪನ್ನಾಗಿ ಪರಿಗಣಿಸಿ ಒಳಮೀಸಲಾತಿ ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಹೆಚ್.ಜಡೆಪ್ಪ ಎಮ್ಮಿಗನೂರು, ಬೆಳಗೋಡ್ ಬಸವರಾಜ, ಹನುಮಂತಪ್ಪ ಸಣಾಪುರ, ಆರ್.ಎಂ.ರಾಮಯ್ಯ, ಮರಿಸ್ವಾಮಿ ಸಣಾಪುರ, ಎನ್. ಗಂಗಣ್ಣ, ವೀರಾಂಜಿನೀಯಲು, ಹೆಚ್.ಶ್ರೀನಿವಾಸ, ಯಲ್ಲಪ್ಪ, ಹೆಚ್.ಕುಮಾರ, ಬುಜ್ಜಿಕುಮಾರ, ಗೋಪಿ, ದೇವಲಾಪುರ ರಾಮು, ಹೆಚ್.ಪಂಪಾಪತಿ, ಹೆಚ್.ಜಗದೀಶ ಸೇರಿದಂತೆ ಇತರರು ಇದ್ದರು...

# ಭೂಗಳ್ಳರ ಬಿಟ್ಟು ಬಡವರ ಒಕ್ಕಲೆಬ್ಬಿಸಿಲು ನೋಟಿಸ್ ನೀಡಿದ್ದು ಖಂಡನೀಯ



• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ಭೂಗಳ್ಳರನ್ನು ಬಿಟ್ಟು ದುಡಿದು ತಿನ್ನುವ ಬಡವರನ್ನು ಒಕ್ಕಲೆಬ್ಬಿಸಲು

ನೋಟಿಸ್ ನೀಡಿ ಖಂಡನೀಯ ಸಿಪಿಐ(ಎಂಎಲ್) ರೆಡ್ ಸ್ಟಾರ್ ಆಕ್ರೋಶ ಮಾರ್ಚ್ 26, 2026): ನಗರದ ಕಥಾಆ ಕ್ಯಾಂಪ್ ನಿವಾಸಿಗಳ ಒಕ್ಕಲೆಬ್ಬಿಸುವಿಕೆ ಪ್ರಯತ್ನವನ್ನು ಖಂಡಿಸಿ ಹಾಗೂ ಅವರಿಗೆ ಹಕ್ಕುಪತ್ರ ನೀಡುವಂತೆ ಆಗ್ರಹಿಸಿ ಇಂದು ಸಿಪಿಐ(ಎಂಎಲ್) ರೆಡ್ ಸ್ಟಾರ್ ತಾಲೂಕು ಸಮಿತಿ ವತಿಯಿಂದ ಇಂದು ನಿವಾಸಿಗಳ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ಸಂಘಟನೆಯ ರಾಜ್ಯ ಸಮಿತಿ ಸದಸ್ಯರಾದ ಎಂ. ಗಂಗಾಧರ್, ಆಡಳಿತ ಮಂಡಳಿ ಮತ್ತು ಜನಪ್ರತಿನಿಧಿಗಳ ದ್ವಂದ್ವ ನೀತಿಯನ್ನು ಉಗ್ರವಾಗಿ ಖಂಡಿಸಿದರು.

ನಗರದ ಉದ್ಯಾನವನ, ಖಾರಿಜ್ ಖಾತಾ, ಗೋಮಾಳ ಸೇರಿದಂತೆ ಸರ್ಕಾರಿ ಜಾಗ ಭೂಗಳ್ಳರ ವಿರುದ್ಧ ಕ್ರಮವಿಲ್ಲ: ಸಿಂಧನೂರು ನಗರ ಹಾಗೂ ತಾಲೂಕಿನಲ್ಲಿ ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ಪ್ರಭಾವಿಗಳು ಅಕ್ರಮವಾಗಿ ಕಬ್ಜಾ ಮಾಡಿದ್ದಾರೆ. ಅಂತಹ ನೆಲಗಳ್ಳರನ್ನು ತೆರವುಗೊಳಿಸಲು ಮುಂದಾಗದ ತಾಲೂಕಾಡಳಿತ, ಕೇವಲ ಬಡ ಕೂಲಿ ಕಾರ್ಮಿಕರನ್ನು ಗುರಿಯಾಗಿಸಿಕೊಂಡಿರುವುದು ದೌರ್ಭಾಗ್ಯದ ಸಂಗತಿ.

ಸ್ಥಳೀಯ ಶಾಸಕರಾದ ಹಂಪನಗೌಡ ಬಾದರ್ಲಿ ಹಾಗೂ ವಿಧಾನ ಪರಿಷತ್ ಸದಸ್ಯರಾದ (ಒಐಅ) ಬಸನಗೌಡ ಬಾದರ್ಲಿ ಅವರು ತಕ್ಷಣ ಈ ವಿಷಯದಲ್ಲಿ ಮಧ್ಯಪ್ರವೇಶಿಸಬೇಕು. ಬಡವರ ಪರವಾಗಿ ನಿಂತು ಅವರಿಗೆ ನ್ಯಾಯ ಕೊಡಿಸುವುದು ಜನಪ್ರತಿನಿಧಿಗಳ ಆದ್ಯಕರ್ತವ್ಯವಾಗಿದೆ. ಹಾಗೆಯೇ ಸಿಂಧನೂರು ನಗರಸಭೆ, ತಾಲೂಕಾಡಳಿತ ಮತ್ತು ಜಿಲ್ಲಾಡಳಿತ ಕೂಡಲೇ ಎಚ್ಚೆತ್ತುಕೊಳ್ಳಬೇಕು. 40–50 ವರ್ಷಗಳಿಂದ ವಾಸವಿರುವ ಬಡವರಿಗೆ ಒಕ್ಕಲೆಬ್ಬಿಸುವ ನೋಟಿಸ್ ನೀಡುವ ಬದಲು, ಅವರಿಗೆ ಕಾನೂನುಬದ್ಧವಾಗಿ ಹಕ್ಕುಪತ್ರ ನೀಡಲು ಕ್ರಮ ಕೈಗೊಳ್ಳಬೇಕು.

ಡಿ. ಎಸ್ ಕಲ್ಮಠ ವಕೀಲರು ಹಾಕಿದ ಬೆಂಗಳೂರಿನ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ದೂರು, ನೋಟಿಸ್ ವಿರುದ್ಧ ಕಾನೂನು ಸಮರ ಸಾರಲಾಗುವುದು. ಒಂದು ವೇಳೆ ಸರ್ಕಾರ ಹಕ್ಕುಪತ್ರ ನೀಡಲು ವಿಳಂಬ ಮಾಡಿದರೆ, ಜನರನ್ನು ಸಂಘಟಿಸಿ ಉಗ್ರವಾದ ಮೈದಾನ ಹೋರಾಟ ರೂಪಿಸಲಾಗುವುದು ಎಂದು ಸಭೆಯಲ್ಲಿ ಎಚ್ಚರಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಸಮಿತಿ ಸದಸ್ಯ ಹುಲುಗಪ್ಪ ಬಳ್ಳಾರಿ, ಪ್ರಮುಖರಾದ ಮುರಳಿ ಕೃಷ್ಣಾ, ಪ್ರವೀಣ್, ಲತಾ, ಮುನ್ನಿಬೇಗಂ, ಹುಸೇನ್ ಭಾಷಾ, ಅಲಿಮಾ, ಹಸೇನ್, ಸರಸ್ವತಿ, ರಂಗಸ್ವಾಮಿ ಸೇರಿದಂತೆ ನೂರಾರು ನಿವಾಸಿಗಳು ಭಾಗವಹಿಸಿದ್ದರು.

# ಬಂಗಾರಿ ಕ್ಯಾಂಪ್‌ನಲ್ಲಿ 14 ವರ್ಷದ ಶಾಲಾ ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ ಲಸಿಕೆ



• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು, ಪ್ರಾಥಮಿಕ ಆರೋಗ್ಯ ಕೇಂದ್ರ ದಡೆಸುಗೂರು ಇವರ ಸಂಯುಕ್ತ ಆಶ್ರಯದಲ್ಲಿ ಲಕ್ಷ್ಮಿ ಕ್ಯಾಂಪ್ ಉಪ ಕೇಂದ್ರ ವ್ಯಾಪ್ತಿಯ ಬಂಗಾರಿ ಕ್ಯಾಂಪ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗರ್ಭಕಂಠ ಕ್ಯಾನ್ಸರ್ ತಡೆಗಾಗಿ ಹಾಕಲಾಗುವ ಹೆಚ್‌ಪಿವಿ ಲಸಿಕೆಯ ಕುರಿತು ಜಾಗೃತಿಗಾಗಿ ಏರ್ಪಡಿಸಿದ ಪೋಷಕರ ಸಭೆಯಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಮಾತನಾಡಿ, ಗರ್ಭಕಂಠ ಕ್ಯಾನ್ಸರ್ ಹೆಣ್ಣು ಮಕ್ಕಳ ಜೀವನದಲ್ಲಿ ಅತ್ಯಂತ ಗಂಭಿರವಾಗಿದ್ದು,

ಗರ್ಭ ಕೊರಳಿಗೆ ಸಂಬಂಧಪಟ್ಟ ಆಗುವ ಸೋಂಕುಗಳಿಂದ ಸಂರಕ್ಷಿಸಲು ಎಚ್‌ಪಿವಿ ಲಸಿಕೆ ಅತ್ಯಂತ ಅಗತ್ಯವಾಗಿರುವುದರಿಂದ ತಪ್ಪುವದಂತಿಗಳಿಗೆ ಆಸ್ಪದ ನೀಡದೆ, ತಮ್ಮ ಮಕ್ಕಳಿಗೆ ಲಸಿಕೆಯನ್ನು ಹಾಕಿಸಲು ಸಹಕರಿಸಿ ಎಂದು ತಿಳಿಸಿದರು.

ನಂತರ ಮಕ್ಕಳಿಗೆ ಹೆಚ್‌ಪಿವಿ ಲಸಿಕೆ ಯಶಸ್ವಿಯಾಗಿ ಹಾಕಲಾಯಿತು. ಸದರಿ ಕಾರ್ಯಕ್ರಮದಲ್ಲಿ ಪಿಹೆಚ್‌ಸಿಓ ಶಾಹಿಲಾ ಬೇಗಂ, ಮುಖ್ಯಗುರುಗಳಾದ ಶಿವಲಿಂಗಮ್ಮ, ಆಶಾ ಕಾರ್ಯಕರ್ತೆ ಅಂಬಿಕಾ, ಪೋಷಕರಾದ ರಾಘವೇಂದ್ರ, ರಾಜು, ಮೀನಾಕ್ಷಿ ಮುಂತಾದವರು ಉಪಸ್ಥಿತರಿದ್ದರು.

# ಕರಡಿ ಸೆರೆ

ಬಳ್ಳಾರಿ:ಸಂಡೂರು ತಾಲ್ಲೂಕಿನ ತೋರಣಗಲ್ಲಿನ ಜಿಂದಾಲ್ ವಿದ್ಯಾನಗರ ಟೌನ್‌ಶಿಪ್ ವ್ಯಾಪ್ತಿಯಲ್ಲಿ ಕಳೆದ ಹತ್ತು ತಿಂಗಳಿನಿಂದ ಬೀಡುಬಿಟ್ಟಿದ್ದ ತಾಯಿ ಕರಡಿ ಹಾಗೂ ಎರಡು ಮರಿಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಗುರುವಾರ ಯಶಸ್ವಿಯಾಗಿ ಸೆರೆಹಿಡಿದಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಮೊದಲ ಬಾರಿಗೆ ಅತ್ಯಾಧುನಿಕ 'ಆಟೋಮ್ಯಾಟಿಕ್ ಮೊಬೈಲ್ ಆಪ್ ಆಧಾರಿತ ಕೇಜ್ ಲಾಕಿಂ–ಗ್ ಸಿಸ್ಟಮ್' ಬಳಸುವ ಮೂಲಕ ಮೂರೂ ಕರಡಿಗಳನ್ನು ಏಕಕಾಲಕ್ಕೆ ಬಂಧಿಸಿರುವುದು ವಿಶೇಷವಾಗಿದೆ.

ಕಳೆದ ಸುಮಾರು 10 ತಿಂಗಳಿನಿಂದ ಈ ಕರಡಿಗಳ ಕುಟುಂಬ ಜಿಂದಾಲ್ ವಿದ್ಯಾನಗರ ಟೌನ್‌ಶಿಪ್‌ನಲ್ಲಿ ಕಾಣಿಸಿಕೊಳ್ಳುತ್ತಿತ್ತು. ಇದರಿಂದ ನಿವಾಸಿಗಳಲ್ಲಿ ಭೀತಿ ಉಂಟಾಗಿದ್ದರೂ, ಅರಣ್ಯ ಇಲಾಖೆಯ ಮುನ್ನೆಚ್ಚರಿಕೆಯಿಂದಾಗಿ ಯಾವುದೇ ಅಹಿತಕರ ಘಟನೆ ಸಂಭವಿಸಿರಲಿಲ್ಲ. ವನ್ಯಜೀವಿ ವಿಭಾಗದ ಪಿಸಿಸಿಎಫ್ ಅವರ ಆದೇಶದನ್ವಯ, ಬಳ್ಳಾರಿ ಡಿಸಿಎಫ್ ಕೆ.ಎನ್.ಬಸವರಾಜ್ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆಸಲಾಯಿತು.

ಎಸಿಎಫ್ ಶರಣ್ ಕುಮಾರ್, ಆರ್‌ಎಫ್‌ಒಗಳಾದ ಸಯ್ಯದ್ ದಾದಾ ಖಲಂದರ್ ಮತ್ತು ಮಂಜುನಾಥ್, ಡಿಆರ್‌ಎಫ್‌ಒಗಳಾದ ಮೋಹನ್ ಹಾಗೂ ಗುರುಸ್ವಾಮಿ, ಬಿಎಫ್‌ಒಗಳಾದ ವೆಂಕಟೇಶ್ ಮತ್ತು ಶ್ರೀಧರ್ ಅವರ ತಂಡ ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿತ್ತು.

# ತಾರಕಕ್ಕೇರಿದ ಶುಗರ್ ಫ್ಯಾಕ್ಟರಿ ಶಾಲಾ ವಿವಾದ

• **ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ಈ ಶಾಲಾ ಆವರಣದಲ್ಲಿ ಮೌಲಾನಾ ಆಜಾದ್ ಶಾಲೆ ನಿರ್ಮಾಣಕ್ಕೆ ವಿರೋಧ ವ್ಯಕ್ತವಾದ ಹಿನ್ನೆಲೆ, ಇಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸ್ಥಳ ವೀಕ್ಷಣೆ ನಡೆಸಿದರು.

ಸಕ್ಕರೆ ಕಾರ್ಖಾನೆ ಪ್ರದೇಶದ ಸರ್ಕಾರಿ ಶಾಲಾ ಆವರಣದಲ್ಲಿ ನಡೆಯುತ್ತಿರುವ ಈ ವಿವಾದ ದಿನೇದಿನೇ ತಾರಕಕ್ಕೇರಿದ್ದು, ಸ್ಥಳ ವೀಕ್ಷಣೆ ವೇಳೆ ಮಹಿಳೆಯರು ಹಾಗೂ ಗ್ರಾಮಸ್ಥರು ಸ್ಥಳಕ್ಕೆ ಧಾವಿಸಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಗ್ರಾಮಸ್ಥರು ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಜೋರಾದ ಮಾತಿನ ಚಕಮಕಿ ನಡೆಯಿತು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಕಾರ್ಯಕರ್ತರು, "ಇದು ಸಂಪೂರ್ಣ ರಾಜಕೀಯ ಪ್ರೇರಿತ ವಿವಾದ. ಮೌಲಾನಾ ಆಜಾದ್ ಶಾಲೆ ನಿರ್ಮಾಣವಾದರೆ ಸ್ಥಳೀಯ ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಲಿದೆ" ಎಂದು ಹೇಳಿದರು.

ಅವರ ಪ್ರಕಾರ, ಈ ಶಾಲೆಯಲ್ಲಿ ಶೇಕಡಾ 75% ಸ್ಥಾನಗಳನ್ನು ಮುಸ್ಲಿಂ, ಬೌದ್ಧ, ಸಿಖ್, ಜೈನ್ ಧರ್ಮದ ಮಕ್ಕಳಿಗೆ ಹಾಗೂ 25% ಸ್ಥಾನಗಳನ್ನು ಖಅ/ಖಖ, ಔಃಅ ಮತ್ತು ಸಾಮಾನ್ಯ ವರ್ಗದ ಮಕ್ಕಳಿಗೆ ಮೀಸಲಿಡಲಾಗುತ್ತಿದೆ. ಸುಮಾರು ￼4.50 ಕೋಟಿ ಅನುದಾನದಲ್ಲಿ 100ಥ100 ವಿಸ್ತೀರ್ಣದಲ್ಲಿ ಶಾಲೆ ನಿರ್ಮಾಣವಾಗುತ್ತಿದೆ ಎಂದು ವಿವರಿಸಿದರು.



ಕೆಲವು ವಿರೋಧ ಪಕ್ಷದವರು ರಾಜಕೀಯ ಲಾಭಕ್ಕಾಗಿ ಮುಗ್ಧ ಜನರಲ್ಲಿ ತಪ್ಪು ಮಾಹಿತಿಯನ್ನು ಹಬ್ಬಿಸುತ್ತಿದ್ದಾರೆ ಎಂದು ಆರೋಪಿಸಿದ ಕಾರ್ಯಕರ್ತರು, "ಶಾಲೆ ನಿರ್ಮಾಣವಾದರೆ ಸುತ್ತಲಿನ ಮನೆಗಳನ್ನು ಧ್ವಂಸ ಮಾಡುತ್ತಾರೆ" ಎಂಬ ವದಂತಿಗಳನ್ನು ಹಬ್ಬಿಸಲಾಗುತ್ತಿದೆ ಎಂದು ಹೇಳಿದರು.

ಇದುವರೆಗೆ ಕಂಪ್ಲಿಯಲ್ಲಿ ಹಿಂದೂ–ಮುಸ್ಲಿಂ ಸಮುದಾಯಗಳು ಸಹೋದರತ್ವದಿಂದ ಬದುಕುತ್ತಿದ್ದು, ಈ ವಿಚಾರವನ್ನು ಕೋಮುಗಲಭೆಗೆ ಪ್ರಚೋದಿಸಲು ಕೆಲವರು ಪ್ರಯತ್ನಿಸುತ್ತಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ, ಈ ಜಾಗ ಮೂಲತಃ ಶರಣಬಸವ ಬುದ್ದ ಭೀಮಾಜಿ ವಿದ್ಯಾಸಂಸ್ಥೆ, ಗುಂಡಗತ್ತಿ ಅವರದ್ದಾಗಿದ್ದು, ಇನ್ನೂ ವಿಜಯ ಪ್ರೌಢ ಶಾಲೆ ಆಡಳಿತಕ್ಕೆ ಹಸ್ತಾಂತರವಾಗಿಲ್ಲ ಎಂದು ತಿಳಿಸಿದರು. ವಿಜಯ ಪ್ರೌಢ ಶಾಲೆಯ ಆಡಳಿತ ಮಂಡಳಿಯ ವಿಜಯಕುಮಾರ್ ಈ ವಿವಾದಕ್ಕೆ ಮುಖ್ಯ ಕಾರಣ ಎಂದು ಆರೋಪಿಸಿದರು.

ಇನ್ನು ನಿನ್ನೆ ನಡೆದ ಪ್ರತಿಭಟನೆಯಲ್ಲಿ ಶಿಕ್ಷಣ ಇಲಾಖೆಯ ನಿಯಮ ಉಲ್ಲಂಘಿಸಿ ಶಾಲಾ ಮಕ್ಕಳನ್ನು ಭಾಗಿ ಮಾಡಿದ ಶಾಲಾ ಆಡಳಿತ ಮಂಡಳಿಯವರ ಮೇಲೆ ಕ್ರಮಕ್ಕೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರಾದ ಸಿ.ಆರ್ ಹನುಮಂತ, ಎಪಿಎಂಸಿ ಅಧ್ಯಕ್ಷ ಹಬೀಬ್, ಬಿ. ಸಿದ್ದಪ್ಪ, ಲಡ್ಡು ಹೊನ್ನೂರ್ ವಲೀ, ಮಸ್ತಾನ್, ಜಾಫರ್, ಅಕ್ಕಿ ಜಿಲಾನ್, ನಾಗರಾಜ್, ಕೃಷ್ಣ, ಮನೋಹರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಭಕ್ತಿಭಾವದಿಂದ ಎರಿತಾತಾ ಜಾತ್ರಾ ಮಹೋತ್ಸವ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ತಾಲೂಕಿನ ಕೊಳಗಲ್ಲು ಗ್ರಾಮದ ಆರಾಧ್ಯ ದೈವ ಎರಿತಾತಾ ದೇಗುಲದ ರತೋತ್ಸವ ನಿನ್ನೆ ಸಂಜೆ ಸಾವಿರಾರು ಭಕ್ತರ ಜಯ ಘೋಷಗಳ ಮಧ್ಯೆ ಜರುಗಿತು.

ಜಾತಿ, ಜಾತಿಗಳ ಕಲಹ ವಿವಾದದಿಂದ. ಈ ವರ್ಷ ಜಾತ್ರೆ ನಡೆಯುವ ಬಗ್ಗೆ ಭಕ್ತರಲ್ಲಿ ಆತಂಕವಿತ್ತು. ಆದರೆ ಅಧಿಕಾರಿಗಳು ಜಾತಿ ಕಲಹವನ್ನು ಬದಿಗಿಟ್ಟು ಗ್ರಾಮದ ಮುಖಂಡರ ಮನವೊಲಿಸಿ ನಿನ್ನೆ ಸಂಜೆ ರಥೋತ್ಸವ ಸಾಂಗವಾಗಿ ಜರುಗುವಂತೆ ನೋಡಿಕೊಂಡರು. ಭಕ್ತರೂ ಇದಕ್ಕೆ ಸಹಕಾರ ನೀಡಿದರು.

ಬಿಗಿ ಪೊಲೀಸ್ ಬಂದೋ ಬಸ್ತಿನಲ್ಲಿಯೇ ನಡೆದ ರಥಕ್ಕೆ ಭಕ್ತರು ಹೂಹಣ್ಣು ಕಾಯಿ ಅರ್ಪಿಸಿ ನಮನ ಸಲ್ಲಿಸಿದರು.

ಗ್ರಾಮದಲ್ಲಿ ಕ್ಷೌರದಂಗಡಿಯಲ್ಲಿ ಪರಿಶಿಷ ಜಾತಿ ಜನಾಂಗಕ್ಕೆ ಕ್ಷೌರ ಮಾಡುವ ವಿಷಯ ಇನ್ನು ಬಗೆಹರಿದಿಲ್ಲ.

# ಉಚಿತ ಕ್ಯಾನ್ಸರ್ ತಪಾಸಣೆ ಶಿಬಿರ: 200ಕ್ಕೂ ಹೆಚ್ಚು ಮಹಿಳೆಯರಿಗೆ ಸೇವೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಸ್ನೇಹ ಆಫೀಸರ್ಸ್ ಲೇಡೀಸ್ ಕ್ಲಬ್ ವತಿಯಿಂದ ನಗರದ ಗ್ರಂಥಾಲಯ ಕಚೇರಿ ಆವರಣದಲ್ಲಿರುವ ಹೊಂಗಿರಣ ಸಭಾಂಗಣದಲ್ಲಿ ಇಂದು (ಮಾ.25) ಉಚಿತ ಕ್ಯಾನ್ಸರ್ ಆರೋಗ್ಯ ತಪಾಸಣೆ ಶಿಬಿರವನ್ನು ಆಯೋಜಿಸಲಾಯಿತು.

ಬೆಳಿಗ್ಗೆ 9.30ರಿಂದ ಸಂಜೆ 7.30ರವರೆಗೆ ನಡೆದ ಶಿಬಿರದಲ್ಲಿ ಸುಮಾರು 200ಕ್ಕೂ ಹೆಚ್ಚು ಬಡ ಮಹಿಳೆಯರಿಗೆ ತಪಾಸಣೆ ನಡೆಸಲಾಯಿತು. ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಿಂದ ನುರಿತ ವೈದ್ಯರನ್ನು ಕರೆಸಿ ತಪಾಸಣೆ ಮಾಡಲಾಗಿದ್ದು, ಮಹಿಳೆಯರಿಗೆ ಅಗತ್ಯ ಸಲಹೆ ಹಾಗೂ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಸಿಇಒ ಹ್ಯಾರಿಸ್ (ಐಎಎಸ್), ಜಿಲ್ಲಾ ಪೊಲೀಸ್ ಅಧಿಕಾರಿ ಮಹಮ್ಮದ್ ಸುಬೇರ್, ಅಪರ ಜಿಲ್ಲಾಧಿಕಾರಿ ನದೀಮುಲ್ಲಾ, ಕಿದ್ವಾಯಿ ಆಸ್ಪತ್ರೆಯ ವೈದ್ಯರಾದ ಡಾ. ಮಹಂತೇಶ್, ಡಾ. ಬಸವರಡ್ಡಿ, ಬಳ್ಳಾರಿ ಜಿಲ್ಲಾ ಆಸ್ಪತ್ರೆಯ ಡಾ. ರಮೇಶ್, ಡಿಎ□□□ನಾಗರಾಜ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು, ಮೈತ್ರಿ ಬಿಶ್ವಾಸ್ (ಮುಖ್ಯ ಅತಿಥಿ, ಬೆಂಗಳೂರು), ಸ್ನೇಹ ಆಫೀಸರ್ಸ್ ಲೇಡೀಸ್ ಕ್ಲಬ್ ಅಧ್ಯಕ್ಷೆ ಶಾಯಿನ್ ಜುಬೇರ್, ಕಾರ್ಯದರ್ಶಿ ಶ್ರೀದೇವಿ ರಾವ್ ಹಾಗೂ ಕ್ಲಬ್‌ನ ಸದಸ್ಯರು ಭಾಗವಹಿಸಿದ್ದರು.

ಶಿಬಿರದ ಮೂಲಕ ಗ್ರಾಮೀಣ ಹಾಗೂ ಬಡ ವರ್ಗದ ಮಹಿಳೆಯರಿಗೆ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ ತ್ವರಿತ ಪತ್ತೆ ಮತ್ತು ಚಿಕಿತ್ಸೆಗೆ ನೆರವಾಗುವ ಪ್ರಯತ್ನ ಮಾಡಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

# ಒಳ ಮೀಸಲಾತಿ ಕಪ್ಪು ಪಟ್ಟಿ ಧರಿಸಿ ಧರಣಿ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿಯನ್ನು ಕಡ್ಡಾಯವಾಗಿ ಜಾರಿಗೊಳಿಸುವ ಮೂಲಕ ನೇರ ನೇಮಕಾತಿಯ ಜೊತೆಗೆ ಪದೋನ್ನತಿಯಲ್ಲೂ ಹಾಗೂ ಬ್ಯಾಕ್ ಲಾಗ್. ಕೆಐಎಡಿಬಿ, ಬಿಡಿಎ ಹಾಗೂ ಸರ್ಕಾರಿ ಗುತ್ತಿಗೆ ನೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಒಳ ಮೀಸಲಾತಿಯನ್ನು ಅನುಷ್ಠಾನಕ್ಕೆ ತರಬೇಕೆಂದು ಆಗ್ರಹಿಸಿ. ಇಂದು ನಗರದ ಡಿಸಿ ಕಚೇರಿ ಮುಂದೆ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿಯಿಂದ ಪ್ರತಿಭಟನಾ ಧರಣಿ ನಡೆಸಲಾಯ್ತು.

ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ನಾಳೆ ನಡೆಯುವ ಸಂಪುಟ ಸಭೆಯಲ್ಲಿ ಈ ಬಗ್ಗೆ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ.

ಈ ವರೆಗೆ ಒಳ ಮೀಸಲಾತಿ ಜಾರಿಗೆ ಸಚಿವ ಮಹದೇವಪ್ಪ ಮೊದಲಾದವರು ಆಕ್ಷೇಪ ಎತ್ತುತ್ತಿದ್ದಾರೆಂದು. ಮಹದೇವಪ್ಪ ವಿರುದ್ದ ಘೋಷಣೆ ಕೂಗಲಾಯಿತು.

ಎಸ್ ಸಿ ಎಸ್ ಪಿ, ಟಿಎಸ್ ಪಿ ಅನುದಾನದಲ್ಲೂ ಸಹ 6:6:5ರ ಅನುಪಾತದಲ್ಲಿ ಹಂಚಿಕೆಯಾಗಬೇಕು. ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ 1% ಮೀಸಲಾತಿಯೊಂದಿಗೆ ಪ್ರತ್ಯೇಕ ನಿಗಮ ಹಾಗೂ ಪ್ರತ್ಯೇಕ ಪ್ಯಾಕೇಜ್ ಘೋಷಿಸಬೇಕು. ಶಾಶ್ವತ ಆಯೊಗ ನೇಮಕ ಹಾಗೂ ಮೀಸಲಾತಿ ಹೆಚ್ಚಳಕ್ಕೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕು ಒಳಮೀಸಲಾತಿ ಹೋರಾಟಗಾರರ ಮೇಲಿನ ಎಲ್ಲಾ ಪ್ರಕರಣಗಳನ್ನು ಹಿಂಪಡೆಯಬೇಕು. ಆದಿ ಜಾಂಬವ ಅಭಿವೃದ್ಧಿ ನಿಗಮ, ಚರ್ಮ ಕೈಗಾರಿಕಾ ಅಭಿವೃದ್ಧಿ ಮಂಡಳಿ (ಲಿಡ್ಕರ್), ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳಿಗೆ ತಲಾ ಎರೆಡು ಸಾವಿರ ಕೋಟಿ ರೂ ಅನುದಾನ ನೀಡಬೇಕೆಂದು ಆಗ್ರಹಿಸಲಾಯ್ತು.

ಪ್ರತಿಭಟನೆಯಲ್ಲಿ ಎ.ಈಶ್ವರಪ್ಪ, ಟಿ.ಪಂಪಾಪತಿ, ಕೆ.ವೆಂಕಟೇಶ್ ಮೂರ್ತಿ, ಇ.ರಾಜೇಶ್, ಚೇಳ್ಳಗುರ್ಕಿ ರಾಮಣ್ಣ, ಅರುಣಾ ಚಲಂ, ಹೆಚ್.ಮಾರೆಣ್ಣ, ವಿಶ್ವನಾಥ ಶರ್ಮ, ಪ್ರಸಾದ್, ಗಂಗಾಧರ ಮೊದಲಾದವರು ಇದ್ದರು.

# ವಿಧೇಯಕ ತಿದ್ದುಪಡಿಗೆ ಸತೀಶ್ ಮನವಿ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ವಿಧಾನ ಪರಿಷತ್ ನ ಅಧಿವೇಶನದಲ್ಲಿ ನಿನ್ನೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು, ಶಿಕ್ಷಕರ ವರ್ಗಾವಣೆ ನಿಯಂತ್ರಣ ತಿದ್ದುಪಡಿ ವಿಧೇಯಕದ ಮೇಲೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಅವರು. ಅಧಿಕಾರಿಗಳು ವಿಧೇಯಕದ ಪದಗಳನ್ನು ಸರಿಪಡಿಸಲು ಸೂಚನೆ ನೀಡುವಂತೆ ಸರ್ಕಾರವನ್ನು ಕೋರಿದರು.

ಈ ವಿಧೇಯಕವನ್ನು ತರುವ ಬಗ್ಗೆ ಹಾಗೂ ಶಿಶು ಪಾಲನೆ ಮಾಡುವ ಸಣ್ಣ ಮಕ್ಕಳ ತಾಯಂದಿರ ಬಗ್ಗೆ ಯೋಚನೆ ಮಾಡಿ, ಸೂಕ್ತ ತಿದ್ದುಪಡಿಗಳನ್ನು ತರುವಂತೆ ಈ ಹಿಂದೆ ಪ್ರಶ್ನೋತ್ತರದ ಸಮಯದಲ್ಲಿ ಚರ್ಚೆ ನಡೆಸಿ ಸಚಿವರ ಗಮನಕ್ಕೆ ತರಲಾಗಿತ್ತು ಎಂದು ಹೇಳಿದ್ದಾರೆ.

# ಭದ್ರತೆ ಆಗ್ರಹಿಸಿ ಜನಜಾಗೃತಿ ಸಂಘ ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದಲ್ಲಿ ಹೆಚ್ಚುತ್ತಿರುವ ಕಳ್ಳತನ, ದರೋಡೆ ಹಾಗೂ ವಿವಿಧ ಅಪರಾಧ ಚಟುವಟಿಕೆಗಳಿಗೆ ತಡೆಗಟ್ಟುವಂತೆ ಒತ್ತಾಯಿಸಿ ಜನಜಾಗೃತಿ ಸಂಘದ ವತಿಯಿಂದ ಇಂದು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಪತ್ರ ಸಲ್ಲಿಸಲಾಯಿತು.

ಸಂಘದ ಜಿಲ್ಲಾಧ್ಯಕ್ಷ ಹುಂಡೇಕರ್ ರಾಜೇಶ್ ಅವರ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಅನೇಕ ಸದಸ್ಯರು ಭಾಗವಹಿಸಿ ನಗರ ಭದ್ರತೆ ಕುರಿತು ಗಂಭೀರ ಆತಂಕ ವ್ಯಕ್ತಪಡಿಸಿದರು. ಇತ್ತೀಚಿನ ದಿನಗಳಲ್ಲಿ ಚೈನ್ ಸ್ನಾಚಿಂಗ್, ದ್ವಿಚಕ್ರ ವಾಹನ ಕಳ್ಳತನ, ದರೋಡೆ ಪ್ರಕರಣಗಳು ಗಣನೀಯವಾಗಿ ಹೆಚ್ಚುತ್ತಿರುವ ಹಿನ್ನೆಲೆ, ಸಾರ್ವಜನಿಕರು ಭಯಭೀತ ವಾತಾವರಣದಲ್ಲಿ ಬದುಕುವಂತಾಗಿದೆ ಎಂದು ಪ್ರತಿಭಟನಾಕಾರರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹುಂಡೇಕರ್ ರಾಜೇಶ್ ಅವರು, "ಸಾರ್ವಜನಿಕರ ಜೀವ ಮತ್ತು ಆಸ್ತಿ ರಕ್ಷಣೆ ಸರ್ಕಾರದ ಪ್ರಮುಖ ಜವಾಬ್ದಾರಿ. ಆದರೆ ಬಳ್ಳಾರಿ ನಗರದಲ್ಲಿ ನಡೆಯುತ್ತಿರುವ ಅಪರಾಧ ಪ್ರಕರಣಗಳು ಜನರಲ್ಲಿ ಆತಂಕವನ್ನು ಉಂಟುಮಾಡುತ್ತಿವೆ. ಇದನ್ನು ತಕ್ಷಣ ನಿಯಂತ್ರಿಸಲು ಕಠಿಣ ಕ್ರಮಗಳು ಅಗತ್ಯ" ಎಂದು ಒತ್ತಿ ಹೇಳಿದರು. ಸಮಾಜದ ಹಿತಕ್ಕಾಗಿ ಸದಾ ಕಾಳಜಿ ವಹಿಸುವ ಅವರು, ಜನರ ಸಮಸ್ಯೆಗಳನ್ನು ನೇರವಾಗಿ ಆಡಳಿತದ ಗಮನಕ್ಕೆ ತರುವಲ್ಲಿ ಮುಂದಾಗುತ್ತಿರುವುದು ಗಮನಾರ್ಹವಾಗಿದೆ. ಅವರ ಸಂಘಟನಾ ಸಾಮರ್ಥ್ಯ ಮತ್ತು ಸಾರ್ವಜನಿಕ ಸೇವಾ ಮನೋಭಾವದಿಂದ ಜನಜಾಗೃತಿ ಸಂಘವು ನಗರದಲ್ಲಿ ಪ್ರಭಾವಿ ಸಂಘಟನೆಯಾಗಿ ಹೊರಹೊಮ್ಮಿದೆ.

ಪ್ರತಿಭಟನಾಕಾರರು ನಗರದಲ್ಲಿನ ಪ್ರಮುಖ ವೃತ್ತಗಳು, ಸ್ಲಂ ಪ್ರದೇಶಗಳು ಹಾಗೂ ಪ್ರಮುಖ ರಸ್ತೆಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವಂತೆ ಒತ್ತಾಯಿಸಿದರು. ಜೊತೆಗೆ ರಾತ್ರಿ ವೇಳೆ ಪೊಲೀಸ್ ಸಿಬ್ಬಂದಿಯಿಂದ ನಿಯಮಿತ ಪೆಟ್ರೋಲಿಂಗ್ ವ್ಯವಸ್ಥೆ ಮಾಡಬೇಕು. ರೈಲ್ವೇ ನಿಲ್ದಾಣ ಮತ್ತು ಬಸ್ ನಿಲ್ದಾಣಗಳಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ಸಾರ್ವಜನಿಕರ ಸುರಕ್ಷತೆ ಖಚಿತಪಡಿಸಬೇಕು ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಇದೇ ವೇಳೆ, ಹೊಸದಾಗಿ ಅಭಿವೃದ್ಧಿಯಾಗುತ್ತಿರುವ ಲೇಔಟ್ ಪ್ರದೇಶಗಳಲ್ಲಿ ಯುವಕರು ದುಶ್ಚಟಗಳಿಗೆ ಒಳಗಾಗುತ್ತಿರುವ ಬಗ್ಗೆ ಸಂಘದ ಪದಾಧಿಕಾರಿಗಳು ಕಳವಳ ವ್ಯಕ್ತಪಡಿಸಿದರು. ಡ್ರಗ್ಸ್, ಮದ್ಯಪಾನ ಸೇರಿದಂತೆ ಅನಾರೋಗ್ಯಕರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯ ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ, ನಗರದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ತ್ವರಿತ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಲಾಯಿತು.

ಈ ಸಂದರ್ಭದಲ್ಲಿ ಸ್ವಾಮಿ ನಾಯ್ಕ್, ಭಾಷಾ, ಗಡಿಲಿಂಗ, ನಾಗರಾಜ್, ಗಂಗಾಧರ, ವೀರೇಶ್, ಪವನ್, ರಾಮರೆಡ್ಡಿ, ಚಂದ್ರ, ಶಂಕರ್, ಮಾಸ್ತನ್, ಪ್ರವೀಣ್, ಶ್ರೀನಿವಾಸ್, ದೇವರಾಜ್, ಬಸವರಾಜ್, ರಾಮಲಿ ನಾಯ್ಕ್, ಯಲ್ಲಪ್ಪ, ಹುಸೇನ್, ಅನಿಲ್, ಅನ್ವರ್, ದುರುಗಪ್ಪ, ನಾಗೇಂದ್ರ, ದೇವೇಂದ್ರ, ಸೀನ, ಮಹೇಶ್ ಸೇರಿದಂತೆ ಸಂಘದ ಮುಖಂಡರು ಹಾಗೂ ಸದಸ್ಯರು ಭಾಗವಹಿಸಿದ್ದರು.

# ಆನ್ ಲೈನ್ ಗೇಮ್ ನಿಷೇಧಿಸಿ ಬಡ ಜೀವನ ಉಳಿಸಿ: ಬಳೂಟಗಿ ಆಗ್ರಹ




• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಕರ್ನಾಟಕ ರಾಜ್ಯದಲ್ಲಿ ಬಡ ಜನರ ಜೀವ ಹಿಂಡುತ್ತಿರುವ ಆನ್ ಲೈನ್ ಗೇಮ್ ನಿಷೇಧಿಸಿ ಬಡ, ಅಮಾಯಕ ಜನರ ಜೀವನ ಕಾಪಾಡಬೇಕು ಎಂದು ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಇಂದು ಕೊಪ್ಪಳ ಜಿಲ್ಲೆಯ ಕುಕನೂರ ಪಟ್ಟಣದಲ್ಲಿ ಪತ್ರಿಕೆಯ ವರದಿಗಾರರೊಂದಿಗೆ ಮಾತನಾಡಿದ ಅವರು ಬೀದರ್ ವೈದ್ಯಕೀಯ ಕಾಲೇಜಿನಲ್ಲಿ ಅಂತಿಮ ವರ್ಷದ ವಿದ್ಯಾರ್ಥಿ ಅನಿಸ್ಕರ್ ಚವ್ಹಾಣ ಎಂಬ ಯುವಕ ಆನಲೈನ್ ಗೇಮ್ ನಲ್ಲಿ ಲಕ್ಷಾಂತರ ರೂಪಾಯಿ ಹಣವನ್ನು ಕಳೆದುಕೊಂಡು ಮಾನಸಿಕವಾಗಿ ನೊಂದು ಜೀವನದಲ್ಲಿ ಜಿಗುಪ್ಸೆಗೊಂಡು ವಸತಿ ನಿಲಯದಲ್ಲಿ ಫ್ಯಾನ್ ಗೆ ನೇಣು ಹಾಕಿಕೊಂಡು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾನೆ

ಬಡ ಬಂಜಾರ ಸಮುದಾಯದ ಈ ಯುವಕನನ್ನು ವೈದ್ಯನನ್ನಾಗಿ ಮಾಡಬೇಕೆಂದು ಕನಸು ಕಂಡು ಎಂ. ಬಿ. ಬಿ. ಎಸ್.ಪದವಿಗೆ ಕಷ್ಟ ಪಟ್ಟು ಪ್ರವೇಶ ಕೊಡಿಸಿದ ಅವರ ತಂದೆ ತಾಯಿ ಶ್ರಮ ವ್ಯರ್ಥವಾಗಿದೆ ತಮ್ಮ ಮಗನಲ್ಲಿ ಉಜ್ವಲ ಭವಿಷ್ಯ ಕಂಡಿದ್ದ ಅವರ ಆಸೆ ಕಮರಿ ಹೋಗಿದೆ. ಹೀಗಾಗಿ ಕಾಂಗ್ರೆಸ್ ಸರ್ಕಾರ ಈ ಕೂಡಲೇ ಇಂಥ ಅನಿಷ್ಟ ಆನ್ ಲೈನ್ ಗೇಮ್ ನಿಷೇಧಿಸಿ ಬಡ ಜನರ ಜೀವನ ಉಳಿಸಿ ಕಾಪಾಡಬೇಕು. ಅನಿಸ್ಕರ್ ಚವ್ಹಾಣ ಅವರ ಸಾವಿನ ಬಗ್ಗೆ ಸೂಕ್ತ ತನಿಖೆ ನಡೆಸಿ ಕಾರಣವಾದವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು, ಹಾಗೂ ಅವರ ಕುಟುಂಬಕ್ಕೆ ಪರಿಹಾರ ನೀಡಬೇಕು. ಈ ಕೂಡಲೇ ಇಲ್ಲಿನ ಸರಕಾರ ಮತ್ತು ಪೊಲೀಸ್ ಇಲಾಖೆ ಆನ್ ಲೈನ್ ಗೇಮ್ ನಿಷೇಧಿಸಲು ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ಗೋರ ಸೇನಾ ವತಿಯಿಂದ ರಾಜ್ಯಾದ್ಯಂತ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ಹಾಗೂ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ಈ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದೇವೆ ಎಂದು ಹೇಳಿದರು.

# ಆಂಧ್ರ ಪೊಲೀಸರಿಂದ ಉಗ್ರ ಪ್ರಚಾರಕನ ಬಂಧನ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಆಂಧ್ರ ಪ್ರದೇಶದ ಪೊಲೀಸರು ನಗರದ ಕೌಲ್ ಬಜಾರ್ ಪ್ರದೇಶದ. ಅಬ್ದುಲ್ ಕಲಾಂ ಬೀದಿಯ ವಾಸಿಯಾಗಿದ್ದ ಅಬ್ದುಲ್ ಸಲಾಂ (36) ಎಂಬ ಯುವಕನನ್ನು. ಅಲ್ಲಿಪುರದ ದಾರದ ಮಿಲ್ ಬಳಿ ಉಗ್ರವಾದದ ಸಿದ್ದಾಂತ ಪ್ರಚಾರ ಮಾಡುತ್ತಿದ್ದನೆಂದು ಬಂಧಿಸಿ ಮೊನ್ನೆ ಕರೆದೊಯ್ದಿದ್ದಾರೆ.

ಬಂಧಿತ ಯುವಕ ಆನ್ ಲೈನ್ ನಲ್ಲಿ ಮೂಲಭೂತವಾದದ ಪ್ರಚಾರ, ನಿಷೇಧಿತ ಉಗ್ರ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದ ಆರೋಪ ಇದೆ. ವಿದೇಶಿ ಉಗ್ರ ಅಲ್ ಹಕೀಮ್ ಶುಕೂರ್ ನೊಂದಿಗೆ ಈತ ಸಂಪರ್ಕ ಹೊಂದಿ. ಈತ ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ಉಗ್ರವಾದದ ಬಗ್ಗೆ ತಿಳಿಸುತ್ತಿದ್ದನಂತೆ. ಜಿಹಾದ್ ಪರಿಕಲ್ಪನೆಗಳನ್ನು ಪ್ರಚಾರ ಮಾಡುವ ಗುಂಪಿನ ಸದಸ್ಯನಾಗಿದ್ದನಂತೆ.

# ಆಹಾರೋತ್ಸವ ಕಾರ್ಯಕ್ರಮ



ಮುದಗಲ್ : ಸ್ಥಳೀಯ ಸಾಹನಾ ಆಂಗ್ಲಮಾಧ್ಯಮ ಶಾಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಂದ ಆಹಾರೋತ್ಸವ ಕಾರ್ಯಕ್ರಮ ಬುದುವಾರ ಜರುಗಿತು.

ಆಹಾರೋತ್ಸವದ ಅಂಗವಾಗಿ ವಿವಿಧ ರೀತಿಯ ಸಾಂಪ್ರದಾಯಿಕ ಮತ್ತು ಆಧುನಿಕ ತಯಾರಿಸಿದ ಖಾದ್ಯಗಳನ್ನು ಪ್ರದರ್ಶಿಸಿದರು. ವಿದ್ಯಾರ್ಥಿಗಳು ಸ್ವಯಂ ತಯಾರಿಸಿದ ತಿನಿಸುಗಳನ್ನು ಮಳಿಗೆಗಳಲ್ಲಿ ದೋಸೆ, ಇಡ್ಲಿ, ಪಾನಿಪೂರಿ, ಬಜ್ಜಿ, ಸಿಹಿತಿಂಡಿಗಳು ಸೇರಿದಂತೆ ಅನೇಕ ರುಚಿಕರ ಆಹಾರ ಪದಾರ್ಥಗಳು ಎಲ್ಲರ ಗಮನ ಸೆಳೆದವು. ಸಂಸ್ಥೆಯ ಅಧ್ಯಕ್ಷೇ ಇರ್ಫಾನ ಬೇಗಂ ಕಾರ್ಯಕ್ರಮ ಉದ್ಘಾಟಿಸಿದರು. ವೀಕ್ಷಕರು ವಿದ್ಯಾರ್ಥಿಗಳ ಸೃಜನಶೀಲತೆ ಮೆಚ್ಚಿ, ಸಂತೋಷ ವ್ಯಕ್ತ ಪಡಿಸಿದರು. ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವುದಲ್ಲದೆ, ಉದ್ಯಮಶೀಲತೆ ಗುಣವನ್ನು ಬೆಳೆಸುತ್ತವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಂಸ್ಥೆ ಕಾರ್ಯದರ್ಶಿ ಜಾವೀದ್ ಹುಸೇನ್, ಮುಖ್ಯ ಗುರುಗಳು ಆದಪ್ಪ, ಶಾಲೆಯ ಶಿಕ್ಷಕಿ ಆಯಿಶಾ ಬೇಗಂ, ಅಸ್ಮ, ಪ್ರಿಯಾಂಕ, ಕವಿತಾ, ಹೀನ ಬೇಗಂ, ಕಾವೇರಿ, ಯಾಸ್ಮಿನ್ ಬೇಗಮ್ ಸೇರಿದಂತೆ ವಿದ್ಯಾರ್ಥಿಗಳು, ಪಾಲಕರು ಉಪಸ್ಥಿತರಿದ್ದರು.

# ಸರ್ಕಾರ ಎಮ್ಮೆಯ ಚರ್ಮ ಇದ್ದಂತೆ ಹೋರಾಟದಿಂದ ಸೌಲಭ್ಯ ಪಡೆಯೋಣ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ರಾಜ್ಯವನ್ನಾಳುತ್ತಿರುವ ಸರ್ಕಾರಕ್ಕೆ ಕಾರ್ಮಿಕರ ಸಂಕಷ್ಟ ಗೊತ್ತಾಗುತ್ತಿಲ್ಲ. ಇದರಿಂದ ಕಾರ್ಮಿಕರ ಬದುಕು ದುಸ್ತರವಾಗಿದೆ ಎಂದು ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಫೆಡರೇಶನ್ ರಾಜ್ಯಾಧ್ಯಕ್ಷ ಹೆಚ್.ಜಿ.ಉಮೇಶ ಹೇಳಿದರು.

ಪಟ್ಟಣದಲ್ಲಿ ಜಿಲ್ಲಾ ಮತ್ತು ತಾಲೂಕು ಘಟಕದಿಂದ ಬುಧವಾರ ಆಯೋಜಿಸಿದ್ದ ಪ್ರಥಮ ಕಂಪ್ಲಿ ತಾಲೂಕು ಸಮ್ಮೇಳನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕಾರ್ಮಿಕರು ಸೌಲಭ್ಯಗಳನ್ನು ಪಡೆದುಕೊಳ್ಳಲು ಕಷ್ಟಕರವಾಗಿದೆ. ದೊಡ್ಡ ಮಟ್ಟದಲ್ಲಿ ಸಂಘಟನೆ ಮೂಲಕ ಇಡೀ ಬಳ್ಳಾರಿ ಜಿಲ್ಲೆಯಲ್ಲಿ ವಿಸ್ತರಣೆಯೊಂದಿಗೆ ಹೋರಾಟದ ಮೂಲಕ ಸರ್ಕಾರಕ್ಕೆ ಹಕ್ಕೋತ್ತಾಯ ಮಾಡಬೇಕಾಗಿದೆ.

ಹೋರಾಟದ ಚಡಿ ಬೀಸಿದಾಗ ಮಾತ್ರ ಸೌಲಭ್ಯಗಳನ್ನು ಹಾಗೂ ಬಹು ಬೇಡಿಕೆಗಳನ್ನು ಪಡೆದುಕೊಳ್ಳಲು ಸಾಧ್ಯ. ವೈದ್ಯಕೀಯ ಚಿಕಿತ್ಸೆಯಲ್ಲಿ ಅನ್ಯಾಯವಾಗುತ್ತಿದೆ.

ದುಡಿದು ತಿನ್ನುವ ಕಾರ್ಮಿಕರ ಬದಲು ಕಷ್ಟಪಡದ ಕಾರ್ಮಿಕರು ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ. ಆದ್ದರಿಂದ ಎಲ್ಲಾ ಕಾರ್ಮಿಕರು ಒಗ್ಗೂಡಿ, ಬಲಿಷ್ಠ ಸಂಘಟನೆಯೊಂದಿಗೆ ಬೀದಿ ಬೀದಿಗೆ ಇಳಿದು ಹೋರಾಟ ಮಾಡಿದಾಗ ಸರ್ಕಾರ ನಮ್ಮ ಬೇಡಿಕೆಗಳಿಗೆ ಸ್ಪಂದಿಸಲಿದೆ ಎಂದರು.

ತಾಲೂಕು ಅಧ್ಯಕ್ಷ ಎನ್.ರಾಜಾಭಕ್ಷಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕಾರ್ಮಿಕರಿಗೆ ಸೌಲಭ್ಯಗಳು ಅಗತ್ಯವಾಗಿವೆ. 2008ರಲ್ಲಿ ದಾವಣಗೆರೆಯಲ್ಲಿ ನಡೆದ ದೊಡ್ಡ ಮಟ್ಟದ ಹೋರಾಟ ಮಾಡಿದಾಗ ಒಂದು ಕೋಟಿ ಅನುದಾನ ನೀಡಿದ್ದರು. ನಂತರದ ದಿನದಲ್ಲಿ ಅನುದಾನ ಮತ್ತು ಸೌಲಭ್ಯ ಇಲ್ಲದಂತಾಗಿದೆ. ಇಂದಿನ ದಿನಮಾನದಲ್ಲಿ ಸೌಲಭ್ಯಗಳಿಲ್ಲದೇ,

ಕಾರ್ಮಿಕರ ಬದುಕು ಅತಂತ್ರ ಸ್ಥಿತಿಯಲ್ಲಿ ಸಾಗುವಂತಾಗಿದೆ. ಚುನಾವಣೆ ವೇಳೆ ಕಾರ್ಮಿಕರು ನೆನಪಾಗುವುದು. ಆದರೆ, ಉಳಿದ ದಿನದಲ್ಲಿ ಕಾರ್ಮಿಕರ ಬಗ್ಗೆ ಕಿಂಚಿತ್ತು ಕಾಳಜಿ ಇಲ್ಲ.

ಆದ್ದರಿಂದ ಸರ್ಕಾರಕ್ಕೆ ಬಿಸಿ ಮುಟ್ಟಿಸಬೇಕಾದರೆ, ದೊಡ್ಡ ಮಟ್ಟದ ಹೋರಾಟದಿಂದ ಮಾತ್ರ ಸಾಧ್ಯ. ಆದ್ದರಿಂದ ಸಂಘಟನೆ ಏಳಿಗೆಗೆ ಜೊತೆಗೆ ಹೋರಾಟಗಳನ್ನು ಮಾಡಲು ಕಾರ್ಮಿಕರು ಮುಂದಾಗಬೇಕಾಗಿದೆ.

ಕೇರಳ ಮಾದರಿಯಲ್ಲಿ ಸೌಲಭ್ಯಗಳನ್ನು ಕಾರ್ಮಿಕರಿಗೆ ಕಲ್ಪಿಸಿದರೆ, ಜೀವನ ಉತ್ತಮವಾಗಿರುತ್ತದೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಎ.ಎಲ್. ತಿಮ್ಮಣ್ಣ, ಮುಖಂಡರಾದ ಹುಲುಗಪ್ಪ, ತಾಲೂಕು ಗೌರವಾಧ್ಯಕ್ಷ ಬಿ.ಅಬ್ದುಲ್ ನವಾಜ್, ಉಪಾಧ್ಯಕ್ಷರಾದ ಕೃಷ್ಣಪ್ಪ ಮೆಟ್ರಿ, ಶರಣ, ನಾಗಸುಬ್ಬಣ್ಣ, ಪ್ರಧಾನ ಕಾರ್ಯದರ್ಶಿ ಸುಂಕಪ್ಪ,

ಸಹ ಕಾರ್ಯದರ್ಶಿ ರಾಘವೇಂದ್ರ, ಸದಸ್ಯರಾದ ಶಿವರಾಜ, ವಿರುಪಾಕ್ಷಿ, ಮೆಟ್ರಿ ಹನುಮಂತಪ್ಪ, ಗಂಗಮ್ಮ, ಜ್ಯೋತೆಮ್ಮ, ಸೇರಿದಂತೆ ಇತರರು ಇದ್ದರು.

ಇಲ್ಲಿನ ಅಂಬೇಡ್ಕರ್ ವೃತ್ತದಲ್ಲಿ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರಕ್ಕೆ ಹಕ್ಕೋತ್ತಾಯಿಸಿದರು.

# ಎನ್ನೆಸ್ಸೆಸ್ ಶಿಬಿರಕ್ಕೆ ಚಾಲನೆ ವಿದ್ಯಾರ್ಥಿ ಸೇವಾ ಮನೋಭಾವಕ್ಕೆ ಪ್ರೋತ್ಸಾಹ



• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಮಂಜಲಾಪುರ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ ಹಾಗೂ ಸಾಮಾಜಿಕ ಚಿಂತನೆ ಬೆಳೆಸುವ ಉದ್ದೇಶದಿಂದ ಎನ್ನೆಸ್ಸೆಸ್ (ಓಖಖ) ಶಿಬಿರವನ್ನು ಕಕ್ಕೆರಾ ಸಮೀಪದ ಮಂಜಲಾಪುರದಲ್ಲಿ ಭವ್ಯವಾಗಿ ಉದ್ಘಾಟಿಸಲಾಯಿತು.

ಕಾರ್ಯಕ್ರಮವನ್ನು ಶ್ರೀ ಸೋಮನಾಥೇಶ್ವರ ದೇವಸ್ಥಾನದ ಅರ್ಚಕರಾದ ಶ್ರೀ ನಂದಣ್ಣಪ್ಪ ಪೂಜಾರಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ಪರಮಣ್ಣ ಪೂಜಾರಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜ್ಞಾನ ಜ್ಯೋತಿ ಶಿಕ್ಷಣ ಹಾಗೂ ಗ್ರಾಮಾಭಿವೃದ್ಧಿ ಟ್ರಸ್ಟ್‌ನ ಉಪಾಧ್ಯಕ್ಷರಾದ ಶ್ರೀ ಚಂದಪ್ಪ ಜಂಪಾ ವಹಿಸಿಕೊಂಡರು. ಧ್ವಜಾರೋಹಣವನ್ನು ಕೂಡ ಅವರು ನೆರವೇರಿಸಿದರು. ಪುರಸಭೆ ಸದಸ್ಯರಾದ ಶ್ರೀ ಮಲ್ಲಣ್ಣ ದಂಡಿನ್ ಕೂಡ ಭಾಗವಹಿಸಿದರು.

ಸರ್ಕಾರಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯ ಮುಖ್ಯಗುರುಗಳಾದ ಶ್ರೀ ಹರಿಲಾಲ್ ಚೌಹಾನ್ ಹಾಗೂ ಶ್ರೀ ಕಾಳಪ್ಪ ಬಡಿಗೇರ್ ಮಾತನಾಡಿ, ವಿದ್ಯಾರ್ಥಿಗಳು ಸೇವಾ ಮನೋಭಾವ ಮತ್ತು ಸಾಮಾಜಿಕ ಜವಾಬ್ದಾರಿಯೊಂದಿಗೆ ಎನ್ನೆಸ್ಸೆಸ್ ಶಿಬಿರಗಳಲ್ಲಿ ಭಾಗವಹಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದು ಅಭಿಪ್ರಾಯಪಟ್ಟರು.

ಈ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿಯೂ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಯಾಗಿಯೂ ಕಾರ್ಯನಿರ್ವಹಿಸುತ್ತಿರುವ ಶ್ರೀ ಬಸಲಿಂಗಪ್ಪ ಕುಂಬಾರ ಪ್ರಮುಖವಾಗಿ ಪಾಲ್ಗೊಂಡರು.

ಕಾರ್ಯಕ್ರಮದಲ್ಲಿ ಶ್ರೀ ಸೋಮನಾಥೇಶ್ವರ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಮಲ್ಲನಗೌಡ ಪಾಟೀಲ್, ಸಿಬ್ಬಂದಿಗಳಾದ ರಾಮಯ್ಯ ದೇಸಾಯಿ, ಕುಮಾರಿ ಸೌಜನ್ಯ, ಅಂಬಿಕಾ, ತಾಯಮ್ಮ, ಪುರುಷೋತ್ತಮ್ ಬೈಕರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗ್ರಾಮದ ಮುಖಂಡರಾದ ಶ್ರೀ ಮಲ್ಲಣ್ಣ ಗೊಡಿಹಾಳ, ಶ್ರೀ ಭಿಮಣ್ಣ ಶಾಂತಪುರ, ಶ್ರೀ ಹಣಮಗೌಡ ಅಸ್ಕಿ, ಶ್ರೀ ಮುದಿಲಿಂಗಪ್ಪ ಅಗ್ಗಿ, ಶ್ರೀ ಹಣಮಂತ್ರಾಯ ಮಾಸ್ತರ್, ಶ್ರೀ ಕಾಳಪ್ಪ ಕಂಬಾರ್, ಶ್ರೀ ನಿಂಗಪ್ಪ ಗೌಡ ಅಸ್ಕಿ, ಶ್ರೀ ಸಣ್ಣಕೆಪ್ಪ ಅಸ್ಕಿ, ಶ್ರೀ ಯಂಕಣ್ಣ ಜುಟ್ಲರ್, ಶ್ರೀ ಮಹಾದೇವಪ್ಪ ಅಸ್ಕಿ, ಶ್ರೀ ಮಲ್ಲು ಬಂಡಿಮನಿ, ಶ್ರೀ ಮೌನೇಶ ಹಿರಿಮನಿ, ಹಾಗೂ ಶ್ರೀ ಮಾಂತೇಶ ಹಗರಗುಂಡ (ಅಖಕ) ಸೇರಿದಂತೆ ಅನೇಕರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ರಾಮಣ್ಣ ಬಾಕಿಲಿ ನಿರೂಪಿಸಿದರು.

ಒಟ್ಟಾರೆ, ಈ ಎನ್ನೆಸ್ಸೆಸ್ ಶಿಬಿರವು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಹೊಣೆಗಾರಿಕೆ ಮತ್ತು ಸೇವಾ ಮನೋಭಾವವನ್ನು ವೃದ್ಧಿಸಲು ಸಹಕಾರಿ ಆಗಲಿದೆ ಎಂದು ಅಭಿಪ್ರಾಯ ವ್ಯಕ್ತವಾಯಿತು.

# ನೀತಿ ಸಂಹಿತೆ ಉಲ್ಲಂಘನೆ 2.50 ಲಕ್ಷ ನಗದು ಜಪ್ತಿ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ–2026 ಹಿನ್ನಲೆಯಲ್ಲಿ ಬಾದಾಮಿ ತಾಲೂಕಿನ ಕುಳಗೇರಿ ಕ್ರಾಸ್ ಚೆಕ್‌ಪೋಸ್ಟನಲ್ಲಿ ದಾಖಲೆ ಇಲ್ಲದೇ ಕಾರನಲ್ಲಿ ಸಾಗಿಸುತ್ತಿದ್ದ 2.50 ಲಕ್ಷ ರೂ.ಗಳ ನಗದನ್ನು ಎಸ್‌ಎಸ್‌ಟಿ ಮತ್ತು ಎಫ್‌ಎಸ್‌ಟಿ ತಂಡ ವಶಕ್ಕೆ ಪಡೆದುಕೊಂಡಿದೆ.

ಕುಳಗೇರಿ ಚೆಕ್‌ಪೋಸ್ಟನಲ್ಲಿ ಆರ್.ಎಲ್.ನದಾಫ್ ನೇತೃತ್ವದ ಎಸ್.ಎಸ್.ಟಿ ತಂಡ ಹಾಗೂ ರಮೇಶ ಮಾಡಬಾಳ ನೇತೃತ್ವದ ಎಫ್‌ಎಸ್‌ಟಿ ತಂಡ ಬುಧವಾರ ಸಂಜೆ ವಾಹನ ತಪಾಸಣೆ ವೇಳೆ ಹುಬ್ಬಳ್ಳಿಯಿಂದ ಗೋಕಾಕ್ ತಾಲೂಕಿನ ಕೌಜಲಗಿ ಕಡೆ ಹೊರಟಿದ್ದ ಕಾರ ತಪಾಸಣೆ ವೇಳೆ ನಗದು ಜಪ್ತಿ ಮಾಡಲಾಗಿದೆ.

ಬಾದಾಮಿ ತಾಲೂಕು ವ್ಯಾಪ್ತಿಯ ಜಾಲಿಹಾಳ ಚೆಕ್‌ಪೋಸ್ಟನಲ್ಲಿ ಪ್ರತ್ಯೇಜ ಎರಡು ಪ್ರಕರಣಗಳಲ್ಲಿ 64 ಸಾವಿರ ರೂ, ಮತ್ತು 75 ಸಾವಿರ ರೂ.ಗಳ ನಗದನ್ನು ಜಪ್ತಿ ಮಾಡಲಾಗಿದೆ. ಬಾಗಲಕೋಟೆ ತಾಲೂಕಿನ ಟಕ್ಕಳಕಿ ಚೆಕ್ ಪೋಸ್ಟನಲ್ಲಿ 65 ಸಾವಿರ ರೂ.ಗಳ ನಗದನ್ನು ಸಹ ವಶಕ್ಕೆ ಪಡೆಯಲಾಗಿದೆ ಎಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ.

# ಕುಂದುಕೊರತೆ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**


ಮಾರ್ಚ 25 (ಕರ್ನಾಟಕ ವಾರ್ತೆ) : ಭವಿಷ್ಯನಿಧಿ, ಪಿಂಚಣಿ ಇತ್ಯಾದಿಗಳಿಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಮಾರ್ಚ 27 ರಂದು ಕೂಡಲಸಂಗಮ ಅಭಿವೃದ್ಧಿ ಮಂಡಳಿ, ಕೂಡಲ ಸಂಗಮದಲ್ಲಿ ಸಭೆ ಕರೆಯಲಾಗಿದೆ.

ಅಂದು ಬೆಳಿಗ್ಗೆ 9.30 ರಿಂದ ಸಂಜೆ 4 ಗಂಟೆವರೆಗೆ ಪಿಂಚಣಿದಾರರು ಇಪಿಎಫ್ ಚಂದಾದಾರರು ಮತ್ತು ಉದ್ಯೋಗದಾತರು ಇದರ ಸದುಪಯೋಗ ಪಡೆದುಕೊಳ್ಳುವಂತೆ

ರಾಯಚೂರು ಪ್ರಾದೇಶಿಕ ಕಚೇರಿಯ ಪಿಎಫ್ ಕಮೀಷನರ್–2 ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ sro.raichur@epfindia.gov.in, do.bagalkot@epfindia-gov.in ಇ–ಮೇಲಗೆ ಸಂಪರ್ಕಿಸಬಹುದಾಗಿದೆ.

# ಏ.2 ಕ್ಕೆ ಅತ್ತಿವಟ್ಟಿಯಲ್ಲಿ ಹನುಮ ಜಯಂತಿ ಆಚರಣೆ



• **ಮಲ್ಲಮ್ಮ ನುಡಿವಾರ್ತೆ ಕೊಪ್ಪಳ**

ಜಿಲ್ಲೆಯ ಶಿವಪುರ ಗ್ರಾಮ ಪಂಚಾಯತ ವ್ಯಾಪ್ತಿಯ ಪುರಾತನ ಕಾಲದ ಅತ್ತಿವಟ್ಟಿ ಗ್ರಾಮದ ಶ್ರೀ ಅಭಯ ಆಂಜನೇಯಸ್ವಾಮಿ ಮಂದಿರದಲ್ಲಿ ಏ.2 ರಂದು ಹನುಮ ಜಯಂತಿ ಆಚರಣೆಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತಿದೆ.

ಪಾಲಕ ಮಂಡಳಿ ಮತ್ತು ಭಕ್ತರ ಸಮಾಜದ ಅಧೀನದಲ್ಲಿ ಶ್ರೀ ಹನುಮಾನ ಜಯಂತಿ ಪ್ರಯುಕ್ತ ಪೂಜಾ ಕಾರ್ಯಕ್ರಮ ಆಯೋಜಿಸಿದ್ದು, ಪುರಾತನ ಪದ್ಧತಿಯಂತೆ ಮಂದಿರದಲ್ಲಿ ವಿಶೇಷ ಧಾರ್ಮಿಕ ಆಚರಣೆಗಳು ಜರುಗಲಿವೆ.

ಸ್ವಸ್ತಿಶ್ರೀ ಚಂದ್ರಮಾನ ಶ್ರೀ ಪರಾಭವನಾಮ ಸಂವತ್ಸರ ಉತ್ತರಾಯಣ ಚೈತ್ರ ಶುದ್ಧ ಪೌರ್ಣಮಿ ಮತ್ತು ಪಾಡ್ಯ ಗುರುವಾರ ಏ. 02ರ ಶುಭ ಮುಂಜಾನೆ 5 ಗಂಟೆ ಯಿಂದ ಬೆಳಿಗ್ಗೆ 9 ಗಂಟೆವರೆಗೆ ಶ್ರೀ ಅಭಯ ಆಂಜನೇಯಸ್ವಾಮಿ ಮೂಲ ವಿರಾಟ್ ಅಭಿಷೇಕ ಹಾಗೂ ಅಲಂಕಾರ ಅರ್ಚನೆ ಜರುಗಲಿವೆ.

ಬೆಳಿಗ್ಗೆ 10 ಗಂಟೆಯಿಂದ ದೇವರ ದರ್ಶನ, ಆಶೀರ್ವಾದ, ತೀರ್ಥ ಪ್ರಸಾದ ವಿತರಣೆ ನಂತರ ಬೆಳಿಗ್ಗೆ 11 ಗಂಟೆಯಿಂದ ಅನ್ನ ಸಂತರ್ಪಣೆ ನಡೆಯಲಿದೆ.

ವಿಜಯನಗರ ಸಾಮ್ರಾಜ್ಯದ ಐತಿಹ್ಯ ಹೊಂದಿರುವ ಈ ಮಂದಿರವು ಅತ್ಯಂತ ವಿಶೇಷ ಜಾಗೃತ ತಾಣವಾಗಿದ್ದು, ಅಂದು ನಡೆಯುವ ಎಲ್ಲ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಮಸ್ತ ಭಕ್ತರು ಪಾಲ್ಗೊಂಡು ಶ್ರೀ ಅಭಯ ಆಂಜನೇಯಸ್ವಾಮಿ ಕೃಪೆಗೆ ಪಾತ್ರರಾಗುವಂತೆ ಅತ್ತಿವಟ್ಟಿಯ ಶ್ರೀ ಅಭಯ ಆಂಜನೇಯಸ್ವಾಮಿ ಪಾಲಕ ಮಂಡಳಿಯವರು ಹಾಗೂ ಭಕ್ತ ಸಮಾಜದವರು ಕೋರಿದ್ದಾರೆ.

# ರಾಜ್ಯ ಪತ್ರಕರ್ತರ ಸಮ್ಮೇಳನಕ್ಕೆ ಆಹ್ವಾನ



ಬೀದರ್: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು (ಏಗಘಏ) ಬೀದರ್‌ನಲ್ಲಿ ಏಪ್ರಿಲ್ 11&12 ರಂದು ಏರ್ಪಡಿಸಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ವಿಧಾನಸೌಧದಲ್ಲಿ ಭೇಟಿ ಮಾಡಿ ಆಹ್ವಾನಿಸಿದರು.

ಇದೇ ಸಂದರ್ಭದಲ್ಲಿ ಪತ್ರಕರ್ತರ ಸಮ್ಮೇಳನದ ಸಲುವಾಗಿ ಕೆಯುಡಬ್ಲ್ಯೂಜೆ ಹೊರತರುವ ಪತ್ರಕರ್ತ ವಿಶೇಷ ಸಂಚಿಕೆಗೆ ಸಂದೇಶ ಮತ್ತು ಲೇಖನ ಕಳುಹಿಸಿಕೊಡುವಂತೆ ಮನವಿ ಮಾಡಲಾಯಿತು

# ಸಮಾಜ ನಿರ್ಮಾಣ ಹೊಣೆ ಮಹಿಳೆಯರಿಂದ ಸಾಧ್ಯ



ಯಲಬುರ್ಗಾ: ಉತ್ತಮ ಸಮಾಜ ನಿರ್ಮಾಣವಾಗಬೇಕಾದರೆ ಮಹಿಳೆಯರ ಪಾತ್ರ ಮಹತ್ವವಾದದ್ದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿ ಲಲಿತಾ ನಾಯಕ ಅವರು ಮುಂಜಾವು ಮತ್ತು ದಾರಿದೀಪ ಸಂಸ್ಥೆಗಳ ಸಹಯೋಗದಲ್ಲಿ ಶಹೀದ್ ದಿವಸ್ ಮತ್ತು ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಮುಂಜಾವು ಸಂಸ್ಥೆಯ ನಿರ್ದೇಶಕಿ ಶ್ರೀಮತಿ ನೇತ್ರಾ ಬೆಳದಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರಾಸ್ತಾವಿಕವಾಗಿ ಶ್ರೀಮತಿ ಮಾಲತಿ ಹಳ್ಳಿಕೇರಿ ಅವರು ಮಾತನಾಡಿದರು. ಮಹಿಳೆಯರು ಕಾನೂನುಗಳ ಬಗ್ಗೆ ಅರಿತುಕೊಂಡಾಗ ಜೀವನದಲ್ಲಿ ಬರುವ ಕಷ್ಟಗಳನ್ನು ಎದುರಿಸಿ ಜಯ ಸಾಧಿಸಿ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ವಕೀಲರಾದ ಸಾವಿತ್ರಿ ಗೋಲ್ಲರ ಅವರು ಮಾತನಾಡಿದರು. ಮಹಿಳೆಯರ ಜೀವನದಲ್ಲಿ ಗುರಿ ಸಾಧಿಸಬೇಕಾದರೆ ಮುಂಚಿತವಾಗಿ ಯೋಜನೆಗಳನ್ನು ಹಾಕಿಕೊಳ್ಳಬೇಕು ಅಂದಾಗ ಗುರಿ ಮುಟ್ಟುವುದಕ್ಕೆ ಸಾಧ್ಯವಾಗುತ್ತದೆ ಎಂದು ಕೀರ್ತಿ ಪಾಟೀಲ್ ಅವರು ಹೇಳಿದರು. ಈ ವೇಳೆ ಶ್ರೀಮತಿ ಚನ್ನಮ್ಮ ಪಾಟೀಲ್, ಸುನೀತಾ ಪತಂಗರಾಯ ,ಎಂ ಜಯಂತಿ, ನಾಗರಾಜ ಹಳ್ಳಿಕೇರಿ, ಬೀರಪ್ಪ ಕುರಿ , ಬಿ ಉಮೇಶ, ವೆಂಕಟೇಶ, ಮಂಜುನಾಥ ಕುರಿ, ಹನುಮಂತರೆಡ್ಡಿ ಗದ್ದಿ ಇತರು ಇದ್ದರು ಈ ವೇಳೆ ಸಾಧಕರಿಗೆ ಸನ್ಮಾನಿಸಲಾಗಿತು.

# ಕ್ಷೇತ್ರದ ಅಭಿವೃದ್ಧಿಗೆ ಕಾಂಗ್ರೆಸ್ ಬೆಂಬಲಿಸಿ: ಉಮೇಶ ಮೇಟಿ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಬಾಗಲಕೋಟೆ ಮತಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವಂತೆ ಉಪಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಹೇಳಿದರು.

ಪಕ್ಷದ ಮುಖಂಡರ ಜೊತೆ ಗುರುವಾರ ಆಲೂರು, ಆಲೂರು ತಾಂಡಾ, ಗುಳಬಾಳ, ಹಿರೇಗುಳಬಾಳ, ಮುತ್ತತ್ತಿ, ಜಡ್ರಾಮಕುಂಟಿ ಮತ್ತಿತರ ಗ್ರಾಮಗಳಲ್ಲಿ ಮತಯಾಚನೆ ಮಾಡಿ ಮಾತನಾಡಿದ ಅವರು, ಕಾಗ್ರೆಸ್ ಪಕ್ಷ ನುಡಿದಂತೆ ನಡೆದು ಗ್ಯಾರಂಟಿ ಯೋಜನೆಗಳ ಮೂಲಕ ಜನ ಸಾಮಾನ್ಯರ ಬದುಕಿಗೆ ಆಸರೆಯಾಗಿದೆ ಎಂದರು.

ನಮ್ಮ ತಂದೆ ದಿ.ಎಚ್.ವೈ. ಮೇಟಿ ಅವರು ಈ ಭಾಗದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ರಸ್ತೆ ನಿರ್ಮಾಣ, ಸಿಸಿ ರಸ್ತೆ, ಶಾಲೆ, ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ ನಿರ್ಮಾಣ, ದೇವಸ್ಥಾನಗಳ ಪುನರುಜ್ಜೀವನ, ಹೈಮಾಸ್ಟ್ ದೀಪಗಳ ಅಳವಡಿಕೆ, ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಸೇರಿ ಪ್ರತಿ ಗ್ರಾಮಗಳಲ್ಲೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಇನ್ನೂ ಅನೇಕ ಕೆಲಸ ಕಾರ್ಯಗಳು ಆಗಬೇಕಿದ್ದು ಅದಕ್ಕಾಗಿ ನನ್ನನ್ನು ಆಶೀರ್ವದಿಸಿ ಗೆಲ್ಲಿಸಬೇಕು ಎಂದು ಉಮೇಶ ಮೇಟಿ ಮತದಾರರಿಗೆ ಮನವಿ ಮಾಡಿದರು.

ನಂತರ ಹೊದ್ಲೂರು, ಲವಳೇಶ್ವರ ಎಲ್ಟಿ, ಕಡ್ಲಿಮಟ್ಟಿ ಸ್ಟೇಷನ್ ಭಾಗದಲ್ಲಿ ಪಕ್ಷದ ಪ್ರಮುಖರು, ಕಾರ್ಯಕರ್ತ ಜೊತೆಗೂಡಿ ಪ್ರಚಾರ ಕೈಗೊಂಡು ಮತ ಯಾಚಿಸಿದರು. ವಿವಿಧ ಗ್ರಾಮಗಳಲ್ಲಿ ಮುಖಂಡರು ಮಾತನಾಡಿ, ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದಾಗಿ ಭರವಸೆ ನೀಡಿದರು.

ಮುಖಂಡರಾದ ಬಸವಂತಪ್ಪ ಮೇಟಿ, ಶಶಿಕಾಂತ ಪೂಜಾರಿ, ಶಿವಾನಂದ ಅಬ್ದಲಪುರ, ಮುತ್ತಪ್ಪ ಹುಗ್ಗಿ, ಮಹಾದೇವಿ ಮೇಟಿ, ಮಂಜುಳಾ ಕಮತಗಿ, ಬಲರಾಮ ಪವಾರ, ತಿಪ್ಪಣ್ಣ ಬೀಳಗಿ, ಯಮನಪ್ಪ ನಿಂಗಾಪೂರ, ಸಂಗಪ್ಪ ಕುರಿ, ದ್ಯಾಮಣ್ಣ ತೇಜಿ, ಹಣಮಂತ ಮೋಸಗೇರಿ, ಸಂತೋಷ ಲಮಾಣಿ, ರಮೇಶ ಕೇಸಪ್ಪ, ಅಡಿವೆಪ್ಪ ಸರೂರ, ಪುಂಡಲೀಕ ಗೌಡರ, ಶಿವಪ್ಪ ನಡಗಡ್ಡಿ, ಭೀಮಪ್ಪ ಕಾಳಿ, ದಾವಲಸಾಬ್ ವಾಲೀಕಾರ, ಅರ್ಜುನ ಕರೆಹೊಳಿ ಮತ್ತಿತರರು ಇದ್ದರು.

# ಎನ್‌ಡಿಆರ್‌ಎಫ್ ಬೆಟಾಲಿಯನ್ ತಂಡದಿಂದ ಅಣುಕು ಪ್ರದರ್ಶನ

• **ಮಲ್ಲಮ್ಮ ನುಡಿವಾರ್ತೆ ಕೊಪ್ಪಳ**

ಸಂಭವನೀಯ ಅತೀವೃಷ್ಟಿ, ಅನಾವೃಷ್ಟಿ, ಪ್ರವಾಹ, ನೈಸರ್ಗಿಕ ವಿಪತ್ತು ಸಂದರ್ಭಗಳಲ್ಲಿ ಪ್ರತಿಯೊಬ್ಬರ ಪಾತ್ರವು ಮುಖ್ಯವಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಹೇಳಿದರು.

ಅವರು ಗುರುವಾರ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸಾಣಾಪೂರ ಕೆರೆ ವ್ಯಾಪ್ತಿ ಪ್ರದೇಶದಲ್ಲಿ ಎನ್.ಡಿ.ಆರ್. ಎಫ್ ತಂಡ ಮತ್ತು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಅಗ್ನಿಶಾಮಕ ಇಲಾಖೆ ಹಾಗೂ ಇತರೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್.ಡಿ.ಆರ್.ಎಫ್) ಬೆಟಾಲಿಯನ್ 10ನೇ ತಂಡದಿಂದ ವಿಪತ್ತು ನಿರ್ವಾಹಣೆಯ ಅಣುಕು ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಯಾವುದೇ ವಿಕೋಪ ಸಂದರ್ಭದಲ್ಲಿ ಮುಂಜಾಗ್ರತೆ ವಹಿಸಿದರೆ ಸಾವಿರಾರು ಜನರ ಜೀವಗಳು ಉಳಿಯುತ್ತವೆ. ಹಾಗಾಗಿ ವಿಪತ್ತು ಸಂದರ್ಭಗಳಲ್ಲಿ ಸ್ಥಳೀಯ ಆಡಳಿತ, ವಿವಿಧ ಇಲಾಖೆಗಳು ಹಾಗೂ ಸಾರ್ವಜನಿಕರು ತಮ್ಮ ಪಾತ್ರವನ್ನು ಅರ್ಥೈಸಿಕೊಳ್ಳುವುದೊಂದಿಗೆ ವಿಪತ್ತು ಸಂದರ್ಭದಲ್ಲಿ ಅಗತ್ಯ ಮುಂಜಾಗ್ರತೆ ವಹಿಸುವುದು ತುಂಬಾ ಅತ್ಯವಶ್ಯಕವಾಗಿದೆ ಮತ್ತು ಇದು ಎಲ್ಲರ ಆದ್ಯ ಕರ್ತವ್ಯವೂ ಸಹ ಆಗಿದೆ. ಈ ಉದ್ದೇಶದಿಂದ ಪ್ರಸಕ್ತ ಸಾಲಿನ ಸಂಭವನೀಯ ಅತೀವೃಷ್ಟಿ, ಪ್ರವಾಹದಿಂದ ಹಾನಿಗೊಳಗಾಗುವ ಪ್ರದೇಶಗಳಲ್ಲಿ ನೈಸರ್ಗಿಕ ವಿಪತ್ತು ಸಮಯದಲ್ಲಿ ಸಂಭವಿಸಬಹುದಾದ ಹಾನಿಯಿಂದ ಜನರು ರಕ್ಷಣೆ ಪಡೆಯುವುದು ಹೇಗೆ ಎಂಬುವುದರ ಕುರಿತಾಗಿ ಎನ್.ಡಿ.ಆರ್.ಎಫ್ ತಂಡದಿಂದ ಅಣುಕು ಪ್ರದರ್ಶನದ ಮೂಲಕ ವಿಶೇಷ ಜಾಗೃತಿ ಮೂಡಿಸಲಾಗುತ್ತಿದೆ. ಪ್ರವಾಹ, ಅಗ್ನಿ ಅವಘಡ, ಗ್ಯಾಸ್ ಸಿಲಿಂಡರ್ ಸ್ಫೋಟ ಸೇರಿದಂತೆ ಇತರೆ ಪ್ರಕೃತಿ ವಿಕೋಪ ಸಂದರ್ಭದಲ್ಲಿ ವಹಿಸಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಮಾಹಿತಿಯನ್ನು ಎಲ್ಲರೂ ಸರಿಯಾಗಿ ತಿಳಿದುಕೊಂಡು ಇದನ್ನು ತಮ್ಮ ಅಕ್ಕ–ಪಕ್ಕದವರಿಗೂ ತಿಳಿಸಬೇಕೆಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ ಅವರು ಮಾತನಾಡಿ, ಜಿಲ್ಲೆಯ ಎಲ್ಲಾ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವಿಪತ್ತು ನಿರ್ವಹಣೆಯ ಸಲುವಾಗಿ ವಿವಿಧ ತರಬೇತಿ ಕಾರ್ಯಗಳನ್ನು ಕಾಲಾನುಕ್ರವಾಗಿ ಹಮ್ಮಿಕೊಳ್ಳಲಾಗುತ್ತಿದೆ. ವಿಪತ್ತನ್ನು ಎದುರಿಸಲು ಜಿಲ್ಲಾ ಪೊಲೀಸ್ ಸದಾ ಸಿದ್ಧವಾಗಿದೆ ಮತ್ತು ಸರ್ವ ರೀತಿಯಲ್ಲಿ ವಿಪತ್ತು ನಿರ್ವಹಣಾ ಕಾರ್ಯಕ್ಷಮತೆಯನ್ನು ನಮ್ಮ ಇಲಾಖೆ ಹೊಂದಿದೆ ಎಂದು ಹೇಳಿದರು.

ಎನ್.ಡಿ.ಆರ್.ಎಫ್ ಡೆಪ್ಯುಟಿ ಕಮಾಂಡೆಂಟ್ ಅಖೀಲ್ ಕುಮಾರ್ ಚೌಬೆ ಅವರು ಮಾತನಾಡಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಬೆಟಾಲಿಯನ್ 10ನೇ ತಂಡವು ಸಂಭವನೀಯ ವಿಪತ್ತು, ಪ್ರವಾಹ ಸ್ಥಳಗಳಿಗೆ ಆಗಮಿಸಿ ಅಲ್ಲಿ ಸಮುದಾಯ ಜಾಗೃತಿ ಕಾರ್ಯಕ್ರಮ ಮಾಡುತ್ತಿದೆ. ಸಂಭವನೀಯ ಅತೀವೃಷ್ಟಿ, ಅನಾವೃಷ್ಟಿ, ಪ್ರವಾಹ, ನೈಸರ್ಗಿಕ ವಿಪತ್ತು ಉಂಟಾಗಬಹುದಾಗ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ ಎಂದರು. ಅಣುಕು ಪ್ರದರ್ಶನ ಮೂಲಕ ಪ್ರಕೃತಿ ವಿಕೋಪ, ಮಾನವ ನಿರ್ಮಿತ ವಿಕೋಪ, ಅನಿಲ ಸೋರಿಕೆ ತಡೆಗಟ್ಟುವಿಕೆ, ಸುನಾಮಿ, ಭೂಕಂಪ, ಅಗ್ನಿ ಅವಘಡ ಹಾಗೂ ಸಿಡಿಲು ಬಡಿತದಿಂದ ರಕ್ಷಣೆ ಸೇರಿದಂತೆ ಪ್ರಕೃತಿ ವಿಕೋಪ ಸಂದರ್ಭದಲ್ಲಿ ಸಾರ್ವಜನಿಕರು ಯಾವ ರೀತಿ ಮುಂಜಾಗೃತೆ ಕ್ರಮ ಕೈಗೊಳ್ಳಬೇಕು ಮತ್ತು ಇದರ ಜೊತೆಗೆ ರಕ್ತಶ್ರಾವ ತಡೆಗಟ್ಟುವ ಬಗ್ಗೆ, ಹೃದಯಘಾತ ಸಂದರ್ಭದಲ್ಲಿ ತಕ್ಷಣ ಕೈಗೊಳ್ಳಬೇಕಾದ ಕ್ರಮ, ಗಂಟಲಿನಲ್ಲಿ ಸಿಕ್ಕಿಕೊಂಡ ವಸ್ತುಗಳ ಹೊರ ತಗೆಯುವುಕೆ (ಎಫ್.ಪಿ.ಎ.ಓ), ಹಾವು ಮತ್ತು ಇತರೆ ಪ್ರಾಣಿ ಕಡಿತದಿಂದ ಯಾವ ರೀತಿ ರಕ್ಷಣೆ ಮಾಡಿಕೊಳ್ಳಬೇಕೆಂಬುವುದು ಪ್ರತಿಯೊಬ್ಬರು ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿದೆ ಎಂದು ತಿಳಿಸಿದರು.

ಎನ್‌ಡಿಆರ್‌ಎಫ್ ತಂಡದ ಸದಸ್ಯರು ಅಪಘಾತ, ಹೃದಯಾಘಾತ, ಭೂಕಂಪ, ಗುಡುಗು ಮತ್ತು ಸಿಡಿಲು, ಪ್ರವಾಹ, ಅಗ್ನಿ ಅವಘಡ ಸಂದರ್ಭದಲ್ಲಿ ವಹಿಸಬೇಕಾದ ಮುಂಜಾಗ್ರತಾ ಕ್ರಮಗಳ ಅಣುಕು ಪ್ರದರ್ಶನವನ್ನು ಸಾರ್ವಜನಿಕರು ಹಾಗೂ ಶಾಲಾ–ಕಾಲೇಜುಗಳ ಮಕ್ಕಳಿಗೆ ಸವಿವರವಾದ ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ಎರಡು ದಿನಗಳ ಕಾಲ ಯಶಸ್ವಿಯಾಗಿ ನಡೆದ ಎನ್.ಡಿ.ಆರ್.ಎಫ್ ತಂಡದ ವಿಪತ್ತು ನಿರ್ವಾಹಣೆಯ ಅಣುಕು ಪ್ರದರ್ಶನ ಕಾರ್ಯಕ್ರಮದ ನೇತೃತ್ವವನ್ನು ಕೊಪ್ಪಳ ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತ್ ಕುಮಾರ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರಾಮಪ್ಪ, ಗಂಗಾವತಿ ತಹಶೀಲ್ದಾರ ವಿಶ್ವನಾಥ ಮುರಡಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿಠ್ಠಲ್ ಜಾಬಗೌಡರ ಸೇರಿದಂತೆ ಗಂಗಾವತಿ ತಾಲ್ಲೂಕು ಪಂಚಾಯತ್, ಸಾಣಾಪೂರ ಗ್ರಾ.ಪಂ ಮತ್ತು ಇತರೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಇತರರು ಉಪಸ್ಥಿತರಿದ್ದರು.

# ಬಾಲ್ಯವಿವಾಹ ನಿಷೇಧ ಫಲಕ ಅಳವಡಿಕೆ ಕಡ್ಡಾಯ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಕಾನೂನು ಪ್ರಕಾರ ಬಾಲ್ಯವಿವಾಹ ನಿಷೇಧಿಸಲಾಗಿದೆ ಎಂಬ ಫಲಕಗಳನ್ನು ದೇವಸ್ಥಾನಗಳು, ಕಲ್ಯಾಣ ಮಂಟಪಗಳೂ ಸೇರಿದಂತೆ ಇತರೆಡೆ ಪ್ರದರ್ಶಿಸಿವುದು ಕಡ್ಡಾಯವಾಗಿದೆ ಎಂದು ಹೈಕೋರ್ಟ ಆದೇಶಿಸಿದೆ.

ತನ್ನ ವಿರುದ್ದ ದೇವನಹಳ್ಳಿ ಕೋರ್ಟನಲ್ಲಿರುವ ಕ್ರಿಮಿನಲ್ ಪ್ರಕರಣ ರದ್ದು ಕೋರಿ ಎನ್.ಮಂಜುನಾಥ (ಬಾಲಕಿಯ ಗಂಡ) ಸೇರಿ ಕುಟುಂಬದ ಒಟ್ಟು ಐವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ತಿರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012 (ಪೋಕ್ಸೋ) ಅಥವಾ ಬಾಲ್ಯವಿವಾಹ ನಿಷೇಧ ಕಾಯ್ದೆ–2006ರ ನಿಬಂಧನೆಗಳಡಿ ಉದ್ಭವಿಸುತ್ತಿರುವ ಮೊಕದ್ದಮೆಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂಬ ತೀವ್ರ ಕಳವಳ ವ್ಯಕ್ತಪಡಿಸಿದ ನ್ಯಾಯಪೀಠ, ಬಾಲ್ಯವಿವಾಹ ನಿರ್ಮೂಲನೆ ಕೇವಲ ಶಾಸನಬದ್ದ ಗುರಿಯಲ್ಲ. ಇದು ಸಾಂವಿಧಾನಿಕವಾಗಿ ಕಡ್ಡಾಯ ಅಂಶ. ಈ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹಾಗೂ ಸಮಾಜವನ್ನು ಸಂವೇದನಾಶೀಲಗೊಳಿಸಲು ಮಾಧ್ಯಮಗಳು ತಮ್ಮ ಪಾತ್ರವನ್ನು ಇನ್ನಷ್ಟು ಕಾಳಜಿಯಿಂದ ನಿರ್ವಹಿಸಬೇಕು ಎಂದು ಸೂಚಿಸಿದೆ.

ದಂಪತಿ ಸಾಮರಸ್ಯದಿಂದ ಬದುಕುತ್ತಿದ್ದಾರೆಂದು ಅರ್ಥೈಸುವುದನ್ನು ಒಪ್ಪಲು ಸಾಧ್ಯವಿಲ್ಲ. ಬಾಲ್ಯವಿವಾಹ ನಡೆಯದಂತೆ ನೋಡಿಕೊಳ್ಳಬೇಕಾದದ್ದು, ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಬಾಲ್ಯವಿವಾಹ ನಡೆಯುವ ಸಾಧ್ಯತೆ ಬಗ್ಗೆ ಯಾವುದೇ ಮಾಹಿತಿ ಬಂದರೆ, ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ತಿಳಿಸುವುದು ಸರಕಾರೇತರ ಸಂಸ್ಥೆಗಳ ಕರ್ತವ್ಯವೂ ಆಗಿದೆ. ನ್ಯಾಯಾಂಗ ಅಧಿಕಾರಿಗಳು, ಮ್ಯಾಜಿಸ್ಟ್ರೇಟ್ ಕೂಡ ಜಾಗರೂಕರಾಗಿರಬೇಕು. ಬಾಲ್ಯವಿವಾಹದ ಬಗ್ಗೆ ಯಾವುದೇ ವಿಶ್ವಾಸಾರ್ಹ ವರದಿ ಅಥವಾ ಮಾಹಿತಿ ಬಂದರೆ ಸ್ವಯಂ ಪ್ರೇರಿತವಾಗಿ ಗಮನ ಹರಿಸಬೇಕು ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಪುರೋಹಿತರ ವಿರುದ್ದವೂ ಕ್ರಮ

ಬಾಲ್ಯವಿವಾಹ ನಡೆಸುವ, ನಿರ್ದೇಶಿಸುವ ಅಥವಾ ಪ್ರಚೋದಿಸುವ, ಯಾರಾದರೂ ಆಗಲಿ ಅದಕ್ಕೆ ಸಮಾನ ಹೊಣೆಗಾರರಾಗುತ್ತಾರೆ. ಮದುವೆ ಮಾಡಿಸುವ ಮುರೋಹಿತ, ಅದನ್ನು ಏರ್ಪಡಿಸುವ ಸಂಬಂಧಿ, ಅದನ್ನು ಸುಗಮಗೊಳಿಸುವ ಆಯೋಜಕರೂ ಸೇರಿದಂತೆ ಎಲ್ಲರೂ ಬಾಲ್ಯವಿವಾಹ ನಿಷೇಧ ಕಾಯಿದೆಯ ಚೌಕಟ್ಟಿನಲ್ಲಿ ಶಿಕ್ಷಾರ್ಹ ಅಪರಾಧಿಗಳಾಗಿ ಕಂಬಿ ಎಣಿಸಬೇಕಾಗುತ್ತದೆ. ಕಾನೂನು ಬಾಲ್ಯವಿವಾಹ ನಿಷೇಧ ಕಾಯಿದೆಯ ಚೌಕಟ್ಟಿನಲ್ಲಿ ಶಿಕ್ಷಾರ್ಹ ಅಪರಾಧಿಗಳಾಗಿ ಕಂಬಿ ಎಣಿಸಬೇಕಾಗುತ್ತದೆ. ಕಾನೂನು ಅಜ್ಞಾನವನ್ನು ಕ್ಷಮಿಸುವುದಿಲ್ಲ. ಹಾಗಾಗಿ ವಿವಾಹಗಳು ಜರುಗುವ ಪ್ರತಿಯೊಂದು ಸ್ಥಳದಲ್ಲಿ ಕ್ರಿಮಿನಲ್ ಹೊಣೆಗಾರಿಕೆಯ ಅರಿವು ಇರುವಂತೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನೋಡಿಕೊಳ್ಳಬೇಕು ಎಂದು ನ್ಯಾಯಪೀಠ ಎಚ್ಚರಿಸಿದೆ.

# ಪಟ್ಟಣ ಪಂಚಾಯಿತಿ: ಬಜೆಟ್ ಮಂಡನೆ



• **ಮಲ್ಲಮ್ಮ ನುಡಿವಾರ್ತೆ ಕುಕನೂರ**

ಪಟ್ಟಣ ಪಂಚಾಯಿತಿ ಕಾರ್ಯಾಲಯ 2026–27ನೇ ಸಾಲಿನ ಬಜೆಟ್ ಮಂಡನೆ ನಡೆಯಿತು. ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ಲೀಲಾವತಿ ಮುಧೋಳ ಸಭೆಯಲ್ಲಿ ಬಜೆಟ್ ಅನ್ನು ಮಂಡಿಸಿದರು. ಆಯಾ 331,369,766. ವ್ಯಯ 330,758,330 ಒಟ್ಟು ಉಳಿತಾಯ,

611436.ಪಟ್ಟಣದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ರಸ್ತೆ ನಿರ್ಮಾಣ ಮತ್ತು ದುರಸ್ತಿ, ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತಾ ಕಾರ್ಯಗಳು, ಒಳಚರಂಡಿ ವ್ಯವಸ್ಥೆ ಹಾಗೂ ಬೀದಿ ದೀಪಗಳ ಸುಧಾರಣೆಗೆ ಹೆಚ್ಚಿನ ಅನುದಾನವನ್ನು ಮೀಸಲಿಡಲಾಗಿದೆ.

ಹಾಗೆಯೇ ಆರೋಗ್ಯ ಸೇವೆಗಳು, ಪರಿಸರ ಸಂರಕ್ಷಣೆ ಹಾಗೂ ಸಾರ್ವಜನಿಕ ಕಲ್ಯಾಣ ಯೋಜನೆಗಳಿಗೂ ವಿಶೇಷ ಗಮನ ಹರಿಸಲಾಗಿದೆ. ಸಭೆಯಲ್ಲಿ ಸದಸ್ಯರು ಬಜೆಟ್ ಕುರಿತು ಚರ್ಚೆ ನಡೆಸಿ, ತಮ್ಮ ಸಲಹೆಗಳನ್ನು ನೀಡಿದರು.

ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ಎನ್ ನಾಗೇಶ ಮತ್ತು ಜನರ ಸಹಕಾರದಿಂದ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವ ವಿಶ್ವಾಸ ವ್ಯಕ್ತಪಡಿಸಿದರು. ಕೊನೆಯಲ್ಲಿ ಬಜೆಟ್ ಅಂಗೀಕರಿಸಲಾಯಿತು.

ಸಂದರ್ಭದಲ್ಲಿ ಪಟ್ಟಣ ಪಂಚಾಯತಿಯ ಸರ್ವ ಸದಸ್ಯರು ಪಟ್ಟಣ ಪಂಚಾಯ್ತಿಯ ಸಿಬ್ಬಂದಿ ವರ್ಗ ಪಾಲ್ಗೊಂಡಿದ್ದರು.

# ಮೃತರ ಕುಟುಂಬಕ್ಕೆ 20 ಲಕ್ಷ



**ಬೆಂಗಳೂರು:** ವನ್ಯಜೀವಿಗಳ ದಾಳಿಯಿಂದ ಮೃತಪಟ್ಟವರ ಕುಟುಂಬದ ವಾರಸುದಾರರಿಗೆ ಸರ್ಕಾರಿ ನೌಕರಿ ನೀಡಲು ಸರ್ಕಾರಿ ಆದೇಶದನ್ವಯ ಅವಕಾಶ ಇರುವುದಿಲ್ಲ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

ಪ್ರಶ್ನೋತ್ತರ ಕಲಾಪದಲ್ಲಿಂದು ಶೃಂಗೇರಿ ಶಾಸಕ ರಾಜೇಗೌಡರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಾನವ–ವನ್ಯಜೀವಿ ಸಂಘರ್ಷದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಮತ್ತು ಮಾಸಾಶನ ನೀಡಲಾಗುತ್ತಿದೆ. ಈ ಹಿಂದೆ ಇದ್ದ 15 ಲಕ್ಷ ರೂ. ಪರಿಹಾರದ ಮೊತ್ತವನ್ನು 2025ರ ಏಪ್ರಿಲ್ ನಿಂದ 20 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ಪರಿಹಾರದ ಜೊತೆಗೆ 5 ವರ್ಷಗಳ ಕಾಲ ಮಾಸಿಕ 4 ಸಾವಿರ ರೂ. ಮಾಸಾಶನವನ್ನು ಮೃತರ ಕುಟುಂಬದ ಸದಸ್ಯರಿಗೆ ನೀಡಲಾಗುತ್ತಿದೆ ಎಂದೂ ವಿವರಿಸಿದರು.

ಅರಣ್ಯ ಇಲಾಖೆಯಲ್ಲಿ ಕಾಯಂ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರು ಮತ್ತು ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಂಚೂಣಿ ಸಿಬ್ಬಂದಿ ಹಗಲಿರುಳೆನ್ನದೆ ಕ್ಲಿಷ್ಟಕರ ಸನ್ನಿವೇಶದಲ್ಲಿ ಸೇವೆ ಸಲ್ಲಿಸುತ್ತಿದ್ದು, ಕರ್ತವ್ಯನಿರತ ಸಿಬ್ಬಂದಿ ಮೃತಪಟ್ಟಾಗ ಈ ಹಿಂದೆ 30 ಲಕ್ಷ ಅನುಗ್ರಹ ಧನ ನೀಡಲಾಗುತ್ತಿತ್ತು. ಈಗ ಆ ಮೊತ್ತವನ್ನು 50 ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದರು. ಆನೆ ಸೇರಿದಂತೆ ವನ್ಯಜೀವಿ–ಮಾನವ ಸಂಘರ್ಷ ನಿಯಂತ್ರಿಸಲು ಸರ್ಕಾರ ಶಕ್ತಿಮೀರಿ ಶ್ರಮಿಸುತ್ತಿದೆ ಎಂದೂ ಈಶ್ವರ ಖಂಡ್ರೆ ಸದನದಲ್ಲಿ ತಿಳಿಸಿದರು.

# ಆನೆಗುಂದಿ ಉತ್ಸವಕ್ಕಾಗಿ ಭೂಮಿ ಖರೀದಿಗೆ ಮನವಿ



**ಗಂಗಾವತಿ:** ಆನೆಗುಂದಿ ಉತ್ಸವಕ್ಕಾಗಿ ಭೂಮಿ ಖರೀದಿಸಿ ಸರ್ಕಾರ ಸ್ವಾದಿನಪಡಿಸಿಕೊಳ್ಳಬೇಕೆಂದು ಕೊಪ್ಪಳ ಜಿಲ್ಲಾ ಸರ್ವಾಂಗೀಣ ಅಭಿವೃದ್ಧಿ ಹೋರಾಟ ಸಮಿತಿಯು ಮುಖ್ಯಮಂತ್ರಿ ಸಿದ್ದರಾಮಯ್ಯನವರಲ್ಲಿ ಮನವಿ ಮನವಿ ಮಾಡಿದೆ.

ನಗರದಲ್ಲಿ ತಹಶೀಲ್ದಾರ್ ಕಚೇರಿಯಲ್ಲಿ ಶಿರಸ್ತೇದಾರ್ ರವಿಕುಮಾರ್ ನಾಯ್ಕವಾಡಿಗೆ ಜಿಲ್ಲಾ ಅಧ್ಯಕ್ಷ ಬಸವರಾಜ ಮ್ಯಾಗಳಮನಿ ಮನವಿ ಸಲ್ಲಿಸಿ ಮಾತನಾಡಿ, ಆನೆಗುಂದಿಯು ವಿಜಯನಗರಸಾಮ್ರಾಜ್ಯ ದ ಮೂಲ ರಾಜಧಾನಿಯಾಗಿತ್ತು. ಇಲ್ಲಿ ಅನೇಕ ಐತಿಹಾಸಿಕ ಸ್ಮಾರಕಗಳು ಇವೆ. ವಿಶ್ವ ಪರಂಪರೆ ಪಟ್ಟಿಯಲ್ಲಿಯೂ ಸೇರಿದೆ. ಆನೆಗುಂದಿ ಉತ್ಸವ ಎರಡು ವರ್ಷಗಳಿಂದ ನಡೆದಿಲ್ಲ. ಅಧಿವೇಶನ ಮುಗಿದ ತಕ್ಷಣವೇ ಈ ಬಾರಿ ಕಡ್ಡಾಯವಾಗಿ ಉತ್ಸವ ಆಚರಿಸಲೇಬೇಕು ಇದು ನಮ್ಮ ಆಗ್ರಹ ಕೂಡ ಆಗಿರುತ್ತದೆ. ಉತ್ಸವ ಆಚರಣೆಯನ್ನು ಮಾಡುವ ವೇದಿಕೆಯ ಭೂಮಿಯು ಖಾಸಗಿಯವರದ್ದಾಗಿರುತ್ತದೆ. ಅಂಜನಾದ್ರಿ ಸ್ಥಳ ಸಮೀಪದಲ್ಲಿರುವದರಿಂದ ಅಲ್ಲಿನ ಭೂಮಿಗೆ ಬೇಡಿಕೆ ಹೆಚ್ಚಾಗುತ್ತಿರುವದರಿಂದ ಅವರು ತಮ್ಮ ಭೂಮಿಯನ್ನು ಬೇರೆಯವರಿಗೆ ಮಾರಿದರೆ ಅಥವಾ ಕಟ್ಟಡಗಳನ್ನು ನಿರ್ಮಿಸಿದರೆ ಮುಂದಿನ ದಿನಗಳಲ್ಲಿ ಉತ್ಸವ ಮಾಡಲು ಸ್ಥಳದ ಅಭಾವ ಉಂಟಾಗುತ್ತದೆ. ಉತ್ಸವ ಆಚರಿಸಲು ದೊಡ್ಡ ಸಮಸ್ಯೆಯಾಗುತ್ತದೆ. ಸಮಸ್ಯೆ ಆಗುವ ಮೊದಲೇ ಸರಕಾರ ಎಚ್ಚತ್ತುಕೊಂಡು ವಿಳಂಬ ಮಾಡದೇ ಅವರಿಂದ ಭೂಮಿ ಖರೀದಿಸಿ ಸ್ವಾದಿನಪಡಿಸಿಕೊಳ್ಳಬೇಕೆಂದು ಒತ್ತಾಯಿಸಿದರು ಈ ಸಂದರ್ಭದಲ್ಲಿ ಪದಾಧಿಕಾರಿ ರಾಮಣ್ಣ ರುದ್ರಾಕ್ಷಿ ಇದ್ದರು.

# ಕೇಂದ್ರದ ನಿರ್ದೇಶನದಂತೆ ಬಾಂಡ್

**ಬೆಂಗಳೂರು:** ನಗರದ ಹಿತಕ್ಕೆ ನಾವು ಕೈಗೊಂಡಿರುವ ಅನೇಕ ತೀರ್ಮಾನಗಳ ಬಗ್ಗೆ ವಿರೋಧ ಪಕ್ಷದವರು ಟೀಕೆ ಮಾಡಬಹುದು, ಮಾಡಲಿ. ಆದರೆ ಮುಂದಿನ ಐದು ವರ್ಷಗಳ ನಂತರ ಡಿ.ಕೆ. ಶಿವಕುಮಾರ್ ಅವರು ಉತ್ತಮ ನಿರ್ಧಾರ ಕೈಗೊಂಡರು ಎಂದು ಹೇಳುತ್ತಾರೆ. ನನಗೆ ಅಷ್ಟೇ ಸಾಕು. ಈಗ ನಾನು ಬೇರೆಯವರಿಗೆ ಒಪ್ಪಿಸಲು ಆಗದೇ ಇರಬಹುದು, ಆದರೆ ಸಮಯ ಬಂದಾಗ ಅವರು ಒಪ್ಪುತ್ತಾರೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ವಿರೋಧ ಪಕ್ಷಗಳ ನಾಯಕರಿಗೆ ತಿರುಗೇಟು ನೀಡಿದರು.



ವಿಧಾನಸಭೆಯಲ್ಲಿ ಗ್ರೇಟರ್ ಬೆಂಗಳೂರು ವಿಚಾರವಾಗಿ ನಡೆದ ಚರ್ಚೆಗೆ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಗುರುವಾರ ಉತ್ತರಿಸಿದರು.

"ಜಿಬಿಎ ಸಂಬಂಧಿಸಿದಂತೆ ವಿರೋಧ ಪಕ್ಷದ ನಾಯಕರು ಅನೇಕ ಚರ್ಚೆ ನಡೆಸಿದ್ದಾರೆ. ಅರ್.ಅಶೋಕ್ ಅವರು ಅಶ್ವಥ್ ನಾರಾಯಣ್ ಅವರು ಅನೇಕ ಸಲಹೆಗಳನ್ನು ನೀಡಿದ್ದಾರೆ. ಇವರ ಸಲಹೆಗಳನ್ನು ನಾನು ಒಪ್ಪುತ್ತೇನೆ. ಜೊತೆಗೆ ಟೀಕೆಯನ್ನೂ ಸಹ ಮಾಡಿದ್ದಾರೆ. ನಾನು ಟೀಕೆಯನ್ನು ಯಾವಾಗಲೂ ಸ್ವೀಕಾರ ಮಾಡುವವನು. ಟೀಕೆ ಇಲ್ಲದೇ ಹೋದರೆ ಯಾವುದೇ ಮನುಷ್ಯನನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲ. ಚಿನ್ನ ಪರೀಕ್ಷೆ ಮಾಡುವಾಗ ಬೆಂಕಿಗೆ ಹಾಕುತ್ತಾರೆ. ಮನುಷ್ಯನನ್ನು ಪರೀಕ್ಷೆ ಮಾಡುವಾಗ ಟೀಕೆಗಳು, ಆಪಾದನೆ ಮಾಡುತ್ತಾರೆ. ಇದನ್ನು ನಾವು ಯಾವ ರೀತಿ ತಿದ್ದಿಕೊಳ್ಳಬೇಕು ಎಂಬುದು ಇಲ್ಲಿ ಮುಖ್ಯವಾದುದು. ಟೀಕೆ ಮಾಡಿದರು ಎಂದ ತಕ್ಷಣ ನಾನು ಸಿಟ್ಟು ಮಾಡಿಕೊಳ್ಳುವುದು ಮಾಡುವುದಿಲ್ಲ" ಎಂದರು.

ಈ ಸದನದಲ್ಲಿ ಈ ಹಿಂದೆ ಇದ್ದ ನಾಯಕರಾದ ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಲಕ್ಕಪ್ಪ, ಮೇಲ್ಮನೆಯಲ್ಲಿ ನಾಣಯ್ಯ, ಎಕೆ ಸುಬ್ಬಯ್ಯ, ಎಂ.ಸಿ ನಾಣಯ್ಯ ಸೇರಿದಂತೆ ಅನೇಕರು ಚೆನ್ನಾಗಿ ಚರ್ಚೆ ಮಾಡುತ್ತಿದ್ದರು. ಆಗಿನ ಚರ್ಚೆ ಸಕಾರಾತ್ಮಕವಾಗಿ ನಡೆಯುತ್ತಿತ್ತು. ಚರ್ಚೆ ಈಗ ನಕರಾತ್ಮಕವಾಗಿ ಹೋಗುತ್ತಿದೆ. Positive thinkers always have a solution for every problem. Negative thinker always have problem for every solution. ಧನಾತ್ಮಕ ಎಂಬುದು ಯಾವಾಗಲೂ ಇರಬೇಕು. ಆಸಕ್ತಿ ಪಟ್ಟು ಬೆಂಗಳೂರು ಅಭಿವೃದ್ಧಿ ಖಾತೆಯನ್ನು ವಹಿಸಿಕೊಂಡಿದ್ದೇನೆ. ನಾನು ಈ ಹಿಂದೆ ನಗರಾಭಿವೃದ್ಧಿ ಸಚಿವನಾಗಿದ್ದೆ, ಇಂಧನ ಸಚಿವನಾಗಿದ್ದೆ, ನನಗೆ ಈಗ ಸಾಕಷ್ಟು ಅನುಭವ ಹೊಂದಿದ್ದು ಬೆಂಗಳೂರಿನಲ್ಲೂ ಬದಲಾವಣೆ ಮಾಡಬೇಕು ಎಂದು ಹೊರಟಿದ್ದೇನೆ. ಆದರೂ ಒಂದಷ್ಟು ಜನ ತಪ್ಪು ಕಂಡುಹಿಡಿದರು. ಇದು ವಿರೋಧ ಪಕ್ಷದ ಕರ್ತವ್ಯವೂ ಹೌದು" ಎಂದರು.

# ಪೈಪ್ ಒಡೆದು ಚರಂಡಿಯ ನೀರು ಬೀದಿಗೆ ಹರಿತ: ಆಕ್ರೋಶ





• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**

ನಗರದ 5ನೇ ವಾರ್ಡ್ ಕಿಲ್ಲಾ ಏರಿಯಾ ಚಂದ್ರಹಾಸ್ ಟಾಕೀಜ್ ಎದುರಿಗೆ 3ನೇ ಕ್ರಾಸ್ ಏರಿಯಾದ ಸಾರ್ವಜನಿಕರ ರಸ್ತೆ ಮಧ್ಯ ಭಾದಲ್ಲಿ ಯು ಜಿ ಡಿ ಟ್ಯಾಂಕ್ ತುಂಬಿ ರಸ್ತೆಗೆ ಹರಿಯುತ್ತಿದ್ದು ಸಾರ್ವಜನಿಕರಿಗೆ ತಿರುಗಾಡಲು ಮತ್ತು ಏರಿಯಾದ ನಿವಾಸಿಗಳಿಗೆ ತುಂಬಾ ತೊಂದರೆಯಾಗಿದೆ.

ದುರ್ವಾಸನೆಯಿಂದ ಸಾಂಕ್ರಮಿಕ ರೋಗ ಹರಡಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸುವ ಕುರಿತು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಗಂಗಾವತಿ ನಗರದ 5ನೇ ವಾರ್ಡ್ ಕಿಲ್ಲಾ ಏರಿಯಾ ಚಂದ್ರಹಾಸ್ ಟಾಕೀಜ್ ಎದುರಿಗೆ 3ನೇ ಕ್ರಾಸ್ ಏರಿಯಾದ ಸಾರ್ವಜನಿಕರ ಓಣಿಯ ರಸ್ತೆಯ ಮಧ್ಯಭಾದಲ್ಲಿ ಕಚೇರಿಪೈಪ್ ಲೈನ್ ಮಾಡಿದ್ದು, ಸದರಿ ಒಳಚರಂಡಿಯಲ್ಲಿ ನೀರು ಮುಂದಕ್ಕೆ ಹೋಗದೇ ಟ್ಯಾಂಕ್‌ಗಳು ತುಂಬಿ ರಸ್ತೆಯಲ್ಲಿ ಹರಿಯುತ್ತಿದೆ ಈ ಓಣಿಯ ರಸ್ತೆಯಲ್ಲಿ ತಿರುಗಾಡುವ ಜನರಿಗೆ ತುಂಬಾ ತೊಂದರೆ ಮತ್ತು ಚರಂಡಿ ನೀರು ಅಕ್ಕಪಕ್ಕದ ಮನೆಯೊಳಗೆ ಹೋಗುತ್ತಿದೆ ಮತ್ತು ಓಣಿಯಲ್ಲಿ ದುರ್ವಾಸನೆಯಿಂದಾಗಿ ಕ್ರಿಮಿ ಕೀಟಗಳು ಗುಂಪಾಗಿ ಓಡಾಡುತ್ತಿವೆ ಸಾಂಕ್ರಾಮಿಕ ರೋಗ ಹರಡುತ್ತಿದೆ, ಇದರ ಬಗ್ಗೆ ಅಧಿಕಾರಿಗಳಿಗೆ ಎಷ್ಟೋಬಾರಿ ದೂರನ್ನು ನೀಡಿದರು ಕೂಡ ಯಾವ ಅಧಿಕಾರಿಗಳು ಸಹ ಕ್ರಮ ಕೈ ಗೊಳ್ಳುತ್ತಿಲ್ಲ.

ಈ ಪ್ರದೇಶದ ದುರ್ವಾಸನೆ ಮತ್ತು ಸೊಳ್ಳೆಗಳ ಕಾಟ ಹೆಚ್ಚಾಗಿದ್ದು ಓಣಿಯಲ್ಲಿ ಸಾಂಕ್ರಾಮಿಕ ರೋಗಗಳು, ಕಾಲರ, ಡೆಂಗೂ ಇತರೆ ರೋಗ ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಕಾರಣ ತಾವುಗಳು ಕೂಡಲೇ ಸದರಿ ಸ್ಥಳವನ್ನು ಪರಿಶೀಲಿಸಿ ಹಾಗೂ ಪೈಪ್ ಲೈನ್ ಸರಿಪಡಿಸಿ ಸ್ವಚ್ಛತೆಗೊಳಿಸಿ, ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ನಿವಾರಿಸಲು ಮತ್ತು ಮುಂದೆ ಯಾರಿಗೂ ಯಾವುದೇ ರೀತಿಯ ಆರೋಗ್ಯದ ಮೇಲೆ ತೊಂದರೆ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಸಾರ್ವಜನಿಕರು ಮಾಧ್ಯಮದ ಮುಖಾಂತರ ಅಧಿಕಾರಿಗಳಿಗೆ ಮಾನ್ಯ ಪೌರಾಯುಕ್ತರು ಕಾರ್ಯಾಲಯ ಗಂಗಾವತಿ. ಇವರಿಗೆ, ದಿನಾಂಕ: ಮಾರ್ಚ್,24 /2026ರಂದು ಮಾನ್ಯ.

**ಸಾರ್ವಜನಿಕರ ಮನವಿ ಅರ್ಜಿ:** ಗಂಗಾವತಿ ನಗರದ 5ನೇ ವಾರ್ಡ್ ಕಿಲ್ಲಾ ಏರಿಯಾ ಚಂದ್ರಹಾಸ್ ಟಾಕೀಜ್ ಎದುರಿಗೆ 3ನೇ ಕ್ರಾಸ್ ಏರಿಯಾದ ಸಾರ್ವಜನಿಕರು ಸೈಯದ್ ಬುರಾನುದ್ದೀನ್. ಮುಜಾಹಿದ್ ಪಾಷಾ. ಕಾಜಾವಲಿ ದರ್ವೇಶ್. ಮಹಮ್ಮದ್ ಅಕ್ಬರ್. ಜಬ್ಬಾರ್ ಬಿಚ್ಕತ್ತಿ ನಗರ ಸಭೆ ಮಾಜಿ ಸದಸ್ಯರು. ಸೈಯದ್ ಜಿಲಾನಿ ಪಾಶ. ಬೀರಪ್ಪ. ಅಕ್ರಮ್.

ಬಾನುಬನಿ.ರೇಣುಕಮ್ಮ. ಶಾಂತಮ್ಮ. ಹಾಗೂ ಇನ್ನಿತರರು ಮನವಿ ಸಲ್ಲಿಸಿವುದರ ಮೂಲಕ ಕೂಡಲೇ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲಿಸಿ ಯುಜಿಡಿ ಮತ್ತು ಚರಂಡಿ ಪೈಪ್ ಲೈನ್ಗಳು ಸರಿಪಡಿಸದೆ ಹೋದರೆ ಉಗ್ರವಾದ ಹೋರಾಟ ಹಮ್ಮಿಕೊಳ್ಳುತ್ತೇವೆ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

# ಪರಿಸರ ಸ್ವಚ್ಛತೆಗಾಗಿ ಡಸ್ಟ್‌ಬಿನ್ ಹಂಚಿಕೆ

• **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ಪುರಸಭೆದಿಂದ ಇಂದು ಪರಿಸರ ಸ್ವಚ್ಛತಗಾಗಿ ಮನೆ ಮನೆಗೆ ಡಸ್ಟ್ ಬಿನ್ ಗಳನ್ನು ಹಂಚಿಕೆ ಮಾಡಲಾಗಿದೆ. ಗುರುವಾರ 9ನೇ ವಾರ್ಡ್ ನಲ್ಲಿ ಪುರಸಭೆಯ ಸದಸ್ಯರಾದ ರಾಜೇಶ್ ಕುಮಾರ್ ಬ್ಯಾಡಗಿ, ಹೆಲ್ತ್ ಇನ್ಸೆಕ್ಟರ್ ಜಯಲಕ್ಷ್ಮಿ, ರಾಜ್ಯ ಪೌರ ನೌಕರರ ಸಂಘದ ರಾಜ್ಯಾಧ್ಯಕ್ಷ ಕೆ. ಪ್ರಭಾಕರ್ ಅವರುಗಳು ಮನೆ ಮನೆಗೆ ಭೇಟಿ ನೀಡಿ ಡಸ್ಟ್ ಬಿನ್ ಗಳನ್ನು ಹಂಚಿಕೆ ಮಾಡಲಾಗಿದೆ. ಈ ಸಂದರ್ಭದಲ್ಲಿ ಪರಿಸರ ಸ್ವಚ್ಛತೆ ಬಗ್ಗೆ ಹೆಲ್ತ್ ಇನ್ಸೆಕ್ಟರ್ ಜಯಲಕ್ಷ್ಮಿ ಜಾಗೃತಿ ಮೂಡಿಸಿದರು.

ಹೆಜ್ಜೆ ಸ್ವಚ್ಛತೆಯ ಕಡೆಗೆ' ಎನ್ನುವುದು ಕಸ ಮುಕ್ತ, ಆರೋಗ್ಯಕರ ಮತ್ತು ಸುಂದರ ಪರಿಸರ ನಿರ್ಮಿಸಲು ಹಮ್ಮಿಕೊಂಡ ಸಾಮೂಹಿಕ ಜನಜಾಗೃತಿ ಅಭಿಯಾನವಾಗಿದೆ. ಇದು ವೈಯಕ್ತಿಕ ಹೊಣೆಗಾರಿಕೆಯನ್ನು ಪ್ರೇರೇಪಿಸುತ್ತಾ, ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ, ತ್ಯಾಜ್ಯ ನಿರ್ವಹಣೆ ಮತ್ತು ಹಸಿರು ಪರಿಸರವನ್ನು ಉತ್ತೇಜಿಸುವ 'ಸ್ವಚ್ಛ ಭಾರತ ಮಿಷನ್'ನ ಒಂದು ಭಾಗವಾಗಿದೆ ಎಂದು ಅವರು ತಿಳಿಸಿದರು.



**ಸ್ವಚ್ಛತೆಯ ಕಡೆಗೆ ಪ್ರಮುಖ ಹೆಜ್ಜೆಗಳು**

**ತ್ಯಾಜ್ಯ ವಿಂಗಡಣೆ:** ಮನೆ ಮತ್ತು ಕಚೇರಿಗಳಲ್ಲಿ ಒಣ ಮತ್ತು ಹಸಿ ಕಸವನ್ನು ಬೇರ್ಪಡಿಸಿ ವಿಲೇವಾರಿ ಮಾಡುವುದು.

**ಪ್ಲಾಸ್ಟಿಕ್ ನಿರ್ಮೂಲನೆ:** ಏಕ–ಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವುದು.

**ಸಾರ್ವಜನಿಕ ಸ್ವಚ್ಛತೆ:** ಕಸವನ್ನು ರಸ್ತೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಬಿಸಾಡದೆ, ನಿಗದಿತ ಡಸ್ಟ್‌ಬಿನ್‌ಗಳನ್ನು ಬಳಸುವುದು.

# ಜಿಲ್ಲಾ ಪೋಲಿಸರ ಭರ್ಜರಿ ಕಾರ್ಯಾಚರಣೆ

• **ಮಲ್ಲಮ್ಮ ನುಡಿ ವಾರ್ತೆ ವಿಜಯಪುರ**

ಇಂಡಿ ಉಪವಿಭಾಗದ ವ್ಯಾಪ್ತಿಯಲ್ಲಿ ನಡೆದ ಕಳ್ಳತನ ಹಾಗೂ ಸುಲಿಗೆ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ತನಿಖೆಗೆ ವಹಿಸಲಾದ ವಿಶೇಷ ತಂಡದ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿಯಮಿತವಾಗಿ ಕಾರ್ಯಾಚರಣೆ ನಡೆಸಿ, ಒಟ್ಟು 20 ವಿವಿಧ ಸ್ವತ್ತಿನ ಪ್ರಕರಣಗಳನ್ನು ಭೇದಿಸಿ

42 ಜನ ಆರೋಪಿಗಳನ್ನು ಬಂಧಿಸಲಾಗಿದ್ದು, ಬಂಧೀತರಿಂದ ಸುಮಾರು ₹1,20,04,750 ಮೌಲ್ಯದ ಬಂಗಾರ ಹಾಗೂ ಬೆಳ್ಳಿಯ ಆಭರಣಗಳು ಸೇರಿದಂತೆ ವಿವಿಧ ಕಳುವಾದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ, ಇದರಲ್ಲಿ ಜೆಸಿಬಿ ಯಂತ್ರ, ಪೀಕಪ್ ವಾಹನ, ಸ್ಕಾರ್ಪಿಯೋ, ಟ್ರ್ಯಾಕ್ಟರ್‌ಗಳು ಹಾಗೂ ನೀರಿನ ಪಂಪ್‌ಸೆಟ್‌ಗಳೂ ಸೇರಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವಿಜಯಪುರ



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರು, ಆರೋಪಿಗಳ ಪತ್ತೆ ಹಾಗೂ ವಸ್ತುಗಳ ವಶಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿದರು. ಕಳ್ಳತನ ಪ್ರಕರಣಗಳ ಪತ್ತೆಗೆ ಶ್ರಮಿಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯವನ್ನು ಅವರು ಪ್ರಶಂಸಿಸಿದರು.

ಪೊಲೀಸರ ಕ್ರಮದಿಂದ ಸಾರ್ವಜನಿಕರಲ್ಲಿ ವಿಶ್ವಾಸ ಹೆಚ್ಚಾಗಿದ್ದು, ಕಾನೂನು ಸುವ್ಯವಸ್ಥೆ ಕಾಪಾಡಲು ಇಲಾಖೆ ಬದ್ಧವಾಗಿದೆ ಎಂದು ಅವರು ತಿಳಿಸಿದ್ದಾರೆ.

# 41 ಲಕ್ಷಕ್ಕೂ ಅಧಿಕ ಮೌಲ್ಯದ ಗಾಂಜಾ ವಶ, ಆರೋಪಿ ಬಂಧನ

• **ಮಲ್ಲಮ್ಮ ನುಡಿ ವಾರ್ತೆ ಬೀದರ**

ಬೀದರ ತಾಲೂಕಿನ ಭಂಗೂರ ಹತ್ತಿರ ಹೈದರಾಬಾದ್–ಮುಂಬಯಿ ಹೆದ್ದಾರಿಯ ಸರ್ವಿಸ್ ರಸ್ತೆ ಪಕ್ಕದಲ್ಲಿ ಬುಧವಾರ ಬೆಳಗಿನ ಜಾವ ಮನ್ನಳ್ಳಿ ಪೊಲೀಸರು ದಾಳಿ ನಡೆಸಿದ ಪೊಲೀಸರು 41.83 ಲಕ್ಷ ರೂ. ಮೌಲ್ಯದ 83 ಕೆ.ಜಿ.ಗಾಂಜಾ ಜಪ್ತಿ ಮಾಡಿಕೊಂಡು ಒರ್ವ ಆರೋಪಿಯನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಕಚೇರಿಯ ಕವಾಯಿತ ಮೈದಾನದಲ್ಲಿ ಬುಧವಾರ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಇಬ್ಬರು ವ್ಯಕ್ತಿಗಳು ಅಕ್ರಮವಾಗಿ ಹೆದ್ದಾರಿ ಮಾರ್ಗವಾಗಿ ಗಾಂಜಾವನ್ನು ಮಹಾರಾಷ್ಟಕ್ಕೆ ಸಾಗಿಸಲು ಭಂಗೂರ ಹತ್ತಿರ ಗಾಂಜಾ ಸಂಗ್ರಹಿಸಿ ಗಾಂಜಾ ಸಾಗಾಣಿ–ಕೆಗಾಗಿ ವಾಹನ ಕಾಯುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ಮನ್ನಳ್ಳಿ ಪೊಲೀಸ್ ಠಾಣೆಯ ಉಪನಿರೀಕ್ಷಕರಾದ ನಂದಿನಿ ಅವರ ತಂಡ ದಾಳಿ ಮಾಡಿ ಒಬ್ಬ ಆರೋಪಿಯನ್ನು ಬಂಧಿಸಿದ್ದಾರೆ.



ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರ ಮಾರ್ಗದರ್ಶನದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಪೂಜಾರಿ, ಡಿವೈಎಸ್ಪಿ ದೂದ ಪೀರ್ ಹುಸೇನಸಾಬ ಮುಲ್ಲಾ ಅವರ ಮಾರ್ಗ ದರ್ಶನದಲ್ಲಿ, ಗ್ರಾಮೀಣ ಸಿಪಿಐ ಜಿ ,ಎಸ್.ಬಿರಾದಾರ ನೇತೃತ್ವದಲ್ಲಿ ತಹಸೀಲ್ದಾರ್ ರವೀಂದ್ರ ದಾಮಾ ಮತ್ತು ಇಬ್ಬರು ಪಂಚರು ಮತ್ತು ಮನ್ನಳಿ ಠಾಣೆಯ ಸಿಬ್ಬಂದಿಯವರಾದ ವಿಜಯಕುಮಾರ, ಭೀಮರಾಯ, ಗಣೇಶ, ಕೈಲಾಸ ಸೇರಿದಂತೆ ಸಿಂದೋಲ್ ಮಾರ್ಗವಾಗಿ ತೆರಳಿ ಹೆದ್ದಾರಿಯ ಒವರ್ ಬ್ರಿಡ್ಜ್ ಕೆಳಗೆ ಇಬ್ಬರು ವ್ಯಕ್ತಿಗಳು ನಾಲ್ಕು ತುಂಬಿದ ಚೀಲಗಳನ್ನು ಇಟ್ಟುಕೊಂಡು ವಾಹನದ ದಾರಿ ಕಾಯುತ್ತಿದ್ದನು ಕಂಡು ದಾಳಿ ಮಾಡಲಾಗಿದೆ ಎಂದು ಹೇಳಲಾಗಿದೆ.

ದಾಳಿ ವೇಳೆ ಒಬ್ಬ ವ್ಯಕ್ತಿ ಕತ್ತಲಲ್ಲಿ ಓಡಿ ಹೋಗಿದ್ದಾನೆ. ಮತ್ತೊಬ್ಬನಿಗೆ ಪೊಲೀಸರು ವಶಕ್ಕೆ ಪಡೆದು ಚೀಲದಲ್ಲಿರುವ ವಸ್ತುವಿನ ಬಗ್ಗೆ ವಿಚಾರಿಸಿದಾಗ ನಾವು ಸ್ವಲ್ಪ ಸ್ವಲ್ಪ ಗಾಂಜಾವನ್ನು ಒರಿಸ್ಸಾ ಮತ್ತು ಆಂಧ್ರ ಪ್ರದೇಶದ ಗಡಿ ಭಾಗದಲ್ಲಿ ಕಾಳಸಂತೆಯಲ್ಲಿ ಖರೀದಿಸಿ ಮಾಡಿ ಸಂಗ್ರಹಿಸಿಕೊಂಡು ಗಾಂಜಾ ಪ್ಯಾಕೇಟ್‌ಗಳನ್ನು ಮಾರಾಟ ಮಾಡಲು ಪುಣೆಗೆ ತೆರಳಲು ವಾಹನದ ದಾರಿ ಕಾಯುತ್ತಿರುವುದಾಗಿ ತಿಳಿಸಲಾಗಿದೆ, ಆತನಲ್ಲಿದ್ದ 4 ಚೀಲವನ್ನು ಪರಿಶೀಲಿಸಿದಾಗ ಪ್ಲಾಸ್ಟಿಕ್ ಟೇಪದಿಂದ ಪ್ಯಾಕ್ ಮಾಡಿದ ಒಟ್ಟು 42 ಗಾಂಜಾ ಪ್ಯಾಕೆಟ್ ಗಳಲ್ಲಿದ್ದ 41,83,500 ರೂ.ಮೌಲ್ಯದ 83 ಕೆಜಿ 670 ಗ್ರಾಂ ಗಾಂಜಾ ವಶಪಡಿಸಿಕೊಂಡು, ಆರೋಪಿಗಳನ್ನು ಬಂಧಿಸಲಾಗಿದೆ, ಈ ಕುರಿತು ಮನ್ನಳ್ಳಿ ಪೊಲೀಸ್ ಠಾಣೆಯಲ್ಲಿ ಎನ್ ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿ, ಈ ಒಂದು ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳ ತಂಡಕ್ಕೆ ಕಾರ್ಯವೈಖರಿ ಶ್ಲಾಘನೀಯ ವ್ಯಕ್ತಪಡಿಸಿದರು.

ಈ ಪತ್ರಿಕಾಗೋಷ್ಠಿಯಲ್ಲಿ ಗುಪ್ತಚರ ಇಲಾಖೆಯ ಗುಂಡಪ್ಪಾ ರೆಡ್ಡಿ, ಸಂತೋಷ್ ಮಹಾರಾಜ್, ಅನೇಕ ಪೊಲೀಸ್ ಅಧಿಕಾರಿಗಳು ಹಾಗು ಸಿಬ್ಬಂದಿಯವರು ಭಾಗವಹಿಸಿದರು.

# ಭಾರತೀಯ ಕುಟುಂಬ ಪದ್ಧತಿ: ಜಗತ್ತಿಗೆ ಒಂದು ಅನನ್ಯ ಕೊಡುಗೆ



**ಭೋಗ–ಐಭೋಗ**

● ಶರಣಬಸಯ್ಯ ಹಿರೇಮಠ
ಕೆಂಭಾವಿ

ಭಾರತವು ಜಗತ್ತಿಗೆ ನೀಡಿದ ಅದ್ಭುತ ಕೊಡುಗೆಗಳಲ್ಲಿ ಕುಟುಂಬ ಜೀವನ ಪದ್ಧತಿಯು ಒಂದು. ಕುಟುಂಬ ನಮಗೆ ಜನ್ಮ ನೀಡುತ್ತದೆ, ನಮ್ಮನ್ನು ಬೆಳೆಸುತ್ತದೆ ಮತ್ತು ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ. ಅದು ನಮ್ಮ ಬೇಕು–ಬೇಡಗಳನ್ನು ನೋಡಿಕೊಳ್ಳುವುದಲ್ಲದೆ, ಕಷ್ಟ, ನಷ್ಟ ಹಾಗೂ ನೋವುಗಳು ಉಂಟಾದಾಗ ಆಸರೆಯಾಗಿ ನಿಲ್ಲುತ್ತದೆ. ಹೀಗಾಗಿಯೇ ನಾವೆಲ್ಲರೂ ಕುಟುಂಬ ಜೀವಿಗಳು. ಕುಟುಂಬದ ಸ್ಥಿತಿ ಉತ್ತಮವಾಗಿದ್ದರೆ, ಅಲ್ಲಿ ಪ್ರೀತಿ, ವಿಶ್ವಾಸ ಮತ್ತು ಸಾಮರಸ್ಯವಿದ್ದರೆ ಮಾತ್ರ ನಾವು ನೆಮ್ಮದಿಯಿಂದ ಇರಲು ಸಾಧ್ಯ.

ಕುಟುಂಬದ ಯಜಮಾನ ತಂದೆಯಾದರೆ, ತಾಯಿ ಅದರ ಬೆನ್ನೆಲುಬು. ಮೇಲ್ನೋಟಕ್ಕೆ ಕುಟುಂಬದಲ್ಲಿ ತಂದೆಯೇ ಪ್ರಧಾನ ಎಂದು ಕಂಡರೂ, ಆಂತರ್ಯದಲ್ಲಿ ಪ್ರತಿ ನಿರ್ಧಾರದ ಹಿಂದೆ ತಾಯಿಯ ಪ್ರಭಾವ ಇದ್ದೇ ಇರುತ್ತದೆ. ತಾಯಿಯ ತ್ಯಾಗ ಮತ್ತು ಸೇವೆ ಅಗಣಿತ. ಆಕೆ ತಾಯಿ, ಹೆಂಡತಿ, ಸಹೋದರಿ, ಅತ್ತೆ, ಸೊಸೆ ಹೀಗೆ ವಿವಿಧ ರೂಪಗಳಲ್ಲಿ ಕುಟುಂಬದ ಏಳಿಗೆಗಾಗಿ ಶ್ರಮಿಸುತ್ತಾಳೆ. ತಾಯಿಗೆ ತಾಯಿಯೇ ಸಾಟಿ, ಆದ್ದರಿಂದಲೇ 'ಮಾತೃದೇವೋಭವ' ಎಂಬ ಪ್ರಥಮ ಗೌರವ ಆಕೆಗೆ ಸಲ್ಲುತ್ತದೆ. ಆಕೆ ಮಕ್ಕಳಿಗೆ ಮೊದಲ ಗುರು. ಪರಂಪರೆಯಿಂದ ಬಂದ ಜ್ಞಾನವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಮಕ್ಕಳಿಗೆ ಮಾದರಿಯಾಗಿದ್ದಾಳೆ.



**ಬದಲಾಗುತ್ತಿರುವ ಮೌಲ್ಯಗಳು ಮತ್ತು ಆರ್ಥಿಕತೆ**

ಹಿಂದೆ ಹಣವು ಬದುಕಿನ ಭದ್ರತೆಗಾಗಿ ಇತ್ತೇ ಹೊರತು ವೈಭವಕ್ಕಾಗಿ ಅಥವಾ ಭೋಗ–ವಿಲಾಸಿ ಜೀವನಕ್ಕಲ್ಲ. ಆದರೆ ಇಂದು ಅಗತ್ಯವಿರಲಿ ಇಲ್ಲದಿರಲಿ, ವಸ್ತುಗಳನ್ನು ಖರೀದಿಸುವುದೇ 'ಮುಂದುವರಿದ ಜೀವನ' ಎಂದು ಬಿಂಬಿಸಲಾಗುತ್ತಿದೆ. ಹಣವೇ ಸರ್ವಸ್ವ ಎಂದು ಭಾವಿಸಿ ಸಂಬಂಧಗಳ ಮಹತ್ವವನ್ನು ಮರೆಯುತ್ತಿದ್ದೇವೆ. ಇದರಿಂದಾಗಿ ಹಿಂದೆ ಸ್ವಾವಲಂಬಿ ಹಾಗೂ ಸ್ವಾಭಿಮಾನಿಯಾಗಿದ್ದ ಕುಟುಂಬಗಳು ಇಂದು ಅಸ್ತಿತ್ವ ಕಳೆದುಕೊಳ್ಳುತ್ತಿವೆ.

ಹಿಂದಿನ ಕಾಲದಲ್ಲಿ ಯಜಮಾನನು ಹಿರಿಯರ ಆಸ್ತಿಗೆ ಮತ್ತಷ್ಟು ಸೇರಿಸಿ ಅದನ್ನು ಮಕ್ಕಳಿಗೆ ಒಪ್ಪಿಸಬೇಕೆಂಬ ಜವಾಬ್ದಾರಿ ಹೊಂದಿದ್ದನು. ಮನೆಯಲ್ಲಿ ತಂದೆ–ತಾಯಿ, ಹಿರಿಯರು ಮತ್ತು ಸ್ತ್ರೀಯರಿಗೆ ಸೂಕ್ತ ಗೌರವ ನೀಡಲಾಗುತ್ತಿತ್ತು ಹಾಗೂ ಅವರ ಸಲಹೆಗಳಿಗೆ ಮಾನ್ಯತೆ ಇತ್ತು. ಪ್ರೀತಿಯ ಆರೈಕೆ ಮತ್ತು ಪರಂಪರಾಗತ ಪದ್ಧತಿಗಳನ್ನು ಮುಂದುವರಿಸುವ ಪ್ರಯತ್ನ ನಿರಂತರವಾಗಿ ನಡೆ–ಯುತ್ತಿತ್ತು. ಮಕ್ಕಳ ಮುಂದೆ ಹಿರಿಯರನ್ನಾಗಲಿ ಅಥವಾ ನೆರೆಹೊರೆಯವರನ್ನಾಗಲಿ ಟೀಕಿಸುವ ಪ್ರವೃತ್ತಿ ಇರಲಿಲ್ಲ.

ಇಂದು ಬಹುತೇಕರಿಗೆ ಕುಟುಂಬದ ಮಹತ್ವ ಹಾಗೂ ಸಂಬಂಧಗಳ ಬೆಸುಗೆ ತಿಳಿಯುತ್ತಿಲ್ಲ. ಮಾನವೀಯ ಮೌಲ್ಯಗಳ ಅರಿವೇ ಇಲ್ಲದಂತಾಗಿದೆ. "ಇತರರಿಗೋಸ್ಕರ ಬದುಕಬೇಕು" ಎನ್ನುವ ಮನೋಭಾವ ಮಾಯವಾಗುತ್ತಿದೆ. "ನಾವೆಲ್ಲರೂ ಕ್ಷೇಮ" ಎನ್ನುವ ಬದಲು "ನಾನು ಕ್ಷೇಮ" ಎನ್ನುವ ಸ್ವಾರ್ಥ ಮನೆಮಾಡಿದೆ. ಎಲ್ಲರೂ ಯಜಮಾನರಾಗಲು ಬಯಸುತ್ತಿದ್ದಾರೆಯೇ ಹೊರತು, ಕರ್ತವ್ಯ ಮತ್ತು ಜವಾಬ್ದಾರಿಗಳ ಕಡೆಗೆ ಗಮನ ಹರಿಸುತ್ತಿಲ್ಲ. ಇದರ ಪರಿಣಾಮವಾಗಿ ಪ್ರೀತಿ–ವಿಶ್ವಾಸದ ಕೊರತೆ, ಮಾನಸಿಕ ಗೊಂದಲ ಮತ್ತು ಏಕಾಂಗಿತನ ಇಂದು ಸಾಮಾನ್ಯವಾಗಿದೆ.

**ಕುಟುಂಬ ವ್ಯವಸ್ಥೆಯ ರಕ್ಷಣೆ ನಮ್ಮ ಜವಾಬ್ದಾರಿ**

ಇಂದು ಕುಟುಂಬ ವ್ಯವಸ್ಥೆಯನ್ನು ರಕ್ಷಿಸುವುದು ಪ್ರತಿಯೊಬ್ಬರ ಹೊಣೆಯಾಗಿದೆ. ಸರ್ಕಾರಿ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವೃದ್ಧಾಶ್ರಮ ಅಥವಾ ಶಿಶು ಕೇಂದ್ರಗಳು ಜನರನ್ನು ಕುಟುಂಬದ ನೈಜ ಜವಾಬ್ದಾರಿಯಿಂದ ವಿಮುಖರನ್ನಾಗಿ ಮಾಡುತ್ತಿವೆ. ಇತಿಹಾಸದಲ್ಲಿ ನಮ್ಮ ಕುಟುಂಬ ಪದ್ಧತಿಯು ವಿದೇಶಿ ಆಕ್ರಮಣಕಾರರಿಂದ ನಮ್ಮ ಸಂಸ್ಕೃತಿಯನ್ನು ರಕ್ಷಿಸಿತ್ತು. ಆದರೆ ಈಗ ನಮಗೆ ಅರಿವಿಲ್ಲದಂತೆ ನಡೆಯುತ್ತಿರುವ 'ಸಾಂಸ್ಕೃತಿಕ ಆಕ್ರಮಣ'ವನ್ನು ತಡೆಯಬೇಕಿದೆ.

ಕುಟುಂಬದ ಹಿತದಲ್ಲಿ ನಮ್ಮ ಹಿತ ಅಡಗಿದೆ, ಸಮಾಜದ ಹಿತದಲ್ಲಿ ದೇಶದ ಸಂಸ್ಕೃತಿಯ ಹಿತ ಅಡಗಿದೆ. ಆದ್ದರಿಂದ ಭಾರತೀಯ ಕುಟುಂಬದ ಮಾದರಿಯನ್ನು ಜಾಗತಿಕ ಮಟ್ಟದಲ್ಲಿ ಮತ್ತೊಮ್ಮೆ ಹೆಮ್ಮೆಯಿಂದ ಪ್ರಸ್ತುತಪಡಿಸೋಣ ಮತ್ತು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)